# ಭಾರತದಲ್ಲಿ ಉನ್ನತ ಶಿಕ್ಷಣದ ಪ್ರವೇಶ ದಾಖಲಾತಿಗಳ ಮೇಲೆ ಮೀಸಲಾತಿಯ ಪರಿಣಾಮ

**ಥಾಮಸ್ ಇ. ವೈಸ್‌ಕಾಫ್**

ಭಾರತದ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿನ ಪ್ರವೇಶ ದಾಖಲಾತಿಗಳ ಮೇಲೆ ಮೀಸಲಾತಿ ನೀತಿಗಳು ಪರಿಣಾಮ ಬೀರಿವೆ ಎಂಬುದಕ್ಕೆ ಪ್ರಾಯೋಗಿಕ ಪುರಾವೆ ಏನು? ಉನ್ನತ ಶಿಕ್ಷಣದ ಎಲ್ಲಾ ಹಂತಗಳಲ್ಲಿಯೂ ಇರುವ ಮೀಸಲಾತಿಗಳು ಪರಿಶಿಷ್ಟ ಜಾತಿ ಮತ್ತು ಪಂಗಡಕ್ಕೆ ಸೇರಿದ ವಿದ್ಯಾರ್ಥಿಗಳನ್ನು ವಿಶ್ವವಿದ್ಯಾಲಯದ ಉನ್ನತ ಗುಣಮಟ್ಟದ ಸ್ತರಗಳಿಗೆ ಮೇಲ್ಮುಖವಾಗಿ ಮರುಹಂಚಿಕೆ ಮಾಡುತ್ತದೆ ಮಾತ್ರವಲ್ಲದೆ, ಅವು ಇಲ್ಲದೆ ಹೋದಲ್ಲಿ ವಿಶ್ವವಿದ್ಯಾಲಯ ಮಟ್ಟದ ಉನ್ನತ ಶಿಕ್ಷಣವನ್ನು ಪಡೆಯಲು ಪ್ರಯತ್ನಿಸದ ಪರಿಶಿಷ್ಟ ಜಾತಿ ಮತ್ತು ಪಂಗಡದ ವಿದ್ಯಾರ್ಥಿಗಳನ್ನು ಗಮನಾರ್ಹ ಸಂಖ್ಯೆಯಲ್ಲಿ ಆಕರ್ಷಿಸುತ್ತದೆ ಕೂಡ. ಈ ಮೀಸಲಾತಿಗಳು ಪರಿಶಿಷ್ಟ ಜಾತಿ ಮತ್ತು ಪಂಗಡದ 'ಕೆನೆ ಪದರ'ದ ವಿದ್ಯಾರ್ಥಿಗಳಿಗೆ ಮಾತ್ರ ಲಾಭದಾಯಿಕವಾಗಿವೆಯಾದರೂ ಅವು ಅದರ ಉದ್ದೇಶಗಳನ್ನು ಸಾಧಿಸುವಲ್ಲಿ ವಿಫಲವಾಗುತ್ತಿದೆ ಎಂದಲ್ಲ. ಬದಲಿಗೆ, ಪ್ರತಿಷ್ಠಿತ ವೃತ್ತಿಗಳು ಮತ್ತು ನಿರ್ಧಾರಗಳನ್ನು ಕೈಗೊಳ್ಳುವ ಸ್ಥಾನಗಳಲ್ಲಿ ಅವಕಾಶ ವಂಚಿತ ಮತ್ತು ಹೆಚ್ಚು ಪ್ರಾತಿನಿಧ್ಯವನ್ನು ಹೊಂದಿರದ ಸಮುದಾಯಗಳಿಗೆ ಲಭ್ಯಾವಕಾಶವನ್ನು ಹೆಚ್ಚಿಸುವ ಮೂಲಕ ಸಮಾಜದ ಮೇಲಿನ ಸ್ತರವು ಏಕೀಕರಣಗೊಳ್ಳುವಂತೆ ಉತ್ತೇಜಿಸುವ ಒಂದು ಪ್ರಯತ್ನವನ್ನಾಗಿ ಅರ್ಥಮಾಡಿಕೊಳ್ಳಬೇಕಾಗುತ್ತದೆ.

ಸಕಾರಾತ್ಮಕ ತಾರತಮ್ಯತೆಯ ನೀತಿಗಳನ್ನು ಪಾಲಿಸುತ್ತಿರುವಂತ ಭಾರತದಲ್ಲಿ ಮಾತ್ರ ಅಲ್ಲದೆ ಅಮೇರಿಕದಂತಹ ಇತರ ದೇಶಗಳಲ್ಲಿಯೂ ಸಹ ಅವು ಹೆಚ್ಚು ವಿವಾದಾಸ್ಪದದ ವಿಷಯವಾಗಿವೆ. ಈ ನೀತಿಗಳು ಅದರ ಪ್ರತಿಪಾದಕರು ಮತ್ತು ಅದರ ವಿರೋಧಿಗಳು ಇಬ್ಬರಲ್ಲೂ ಭಾವೋದ್ವೇಗವನ್ನು ಕೆರಳಿಸುತ್ತವೆ, ಮತ್ತು ಅವು ಕನಿಷ್ಠ ವಿದ್ವತ್ತುಳ್ಳ ಲೇಖನಗಳೆಷ್ಟೋ ಅಷ್ಟೇ ಪ್ರಮಾಣದಲ್ಲಿ ವಿವಾದಾತ್ಮಕ ಲೇಖನಗಳನ್ನು ಹುಟ್ಟುಹಾಕಿವೆ ಹಾಗೂ ಸಾಕಷ್ಟು ಕಿಚ್ಚೇರಿದ ಚರ್ಚೆಗಳು, ಅನೇಕ ಪ್ರತಿಭಟನಾ ಧರಣೆಗಳು ಮತ್ತು ಲೆಕ್ಕವಿಲ್ಲದಷ್ಟು ಕಾನೂನಿನ ವ್ಯಾಜ್ಯಗಳಿಗೆ ಕಾರಣವಾಗಿವೆ. ಇವು ಬೆಳಕಿಗಿಂತ ಹೆಚ್ಚಾಗಿ ಬಿಸಿ ಕಾವೇ ಸೃಷ್ಟಿಯಾಗುವ ಸಂದರ್ಭಗಳಾಗಿವೆ. ಸಕಾರಾತ್ಮಕ ತಾರತಮ್ಯತೆಯ ನೀತಿಗಳ ಪರಿಣಾಮಗಳ ಒಂದು ಕೂಲಂಕುಶವಾದ ಪ್ರಾಯೋಗಿಕ ವಿಶ್ಲೇಷಣೆಯು ಅದರ ಒಟ್ಟಾರೆಯ ಅಪೇಕ್ಷಣೀಯತೆ ಕುರಿತು ಒಂದು ಹೆಚ್ಚು ಸಕಾರಣವಾದ ಮೌಲ್ಯಮಾಪನಕ್ಕೆ ಈಡು ಮಾಡಿಕೊಡಬಹುದು ಎಂಬುದು ನನ್ನ ನಂಬಿಕೆ.

ಇಕನಾಮಿಕ್ ಅಂಡ್ ಪೊಲಿಟಿಕಲ್ ವೀಕ್ಲಿ *(Economic and Political Weekly)* ಯಲ್ಲಿ (Weisskopf (ವೈಸ್‌ಕಾಫ್) 2001) ಪ್ರಕಟಗೊಂಡ ಲೇಖನವೊಂದರಲ್ಲಿ ಅಮೇರಿಕದ ಉನ್ನತ ಶೈಕ್ಷಣಿಕ ಸಂಸ್ಥೆಗಳಲ್ಲಿ - ಅಮೇರಿಕದಲ್ಲಿ ಸಕಾರಾತ್ಮಕ ತಾರತಮ್ಯತೆಯ ನೀತಿಗಳನ್ನು ಅನ್ವಯಿಸಿರುವ ಒಂದು ಪ್ರಮುಖ ಕ್ಷೇತ್ರ - ಪ್ರವೇಶ ದಾಖಲಾತಿಗಳಿಗೆ ಸಂಬಂಧಿಸಿದಂತೆ ಪಾಲಿಸುವ ಮೀಸಲಾತಿಯ ಪರಿಣಾಮಗಳ ಕುರಿತು ಮೌಲ್ಯಮಾಪನ ಮಾಡಿದ ಇತ್ತೀಚಿನ ಪ್ರಾಯೋಗಿಕ ಸಂಶೋಧನೆಯನ್ನು ನಾನು ಪರಿಶೀಲಿಸಿದ್ದೇನೆ. ಈ ಲೇಖನದಲ್ಲಿ ಅದೇ ಪ್ರಮುಖ ಕ್ಷೇತ್ರದಲ್ಲಿ ಭಾರತದ ಸಕಾರಾತ್ಮಕ ತಾರತಮ್ಯತೆಯ ನೀತಿಗಳ ಪರಿಣಾಮ

ಕುರಿತಿರುವ ಪ್ರಾಯೋಗಿಕ ಪುರಾವೆಯನ್ನು ಸಂಕಲಿಸಿ ವಿಶ್ಲೇಷಿಸುವುದು ನನ್ನ ಉದ್ದೇಶವಾಗಿದೆ. ಅದರಂತೆ, ಭಾರತದ ಉನ್ನತ ಶೈಕ್ಷಣಿಕ ಸಂಸ್ಥೆಗಳಲ್ಲಿ ಪ್ರವೇಶ ದಾಖಲಾತಿಗೆ ಸಂಬಂಧಿಸಿದಂತೆ ಕಳೆದ ಐವತ್ತು ವರ್ಷಗಳಲ್ಲಿ ಜಾರಿಗೊಳಿಸಲಾದ ಮೀಸಲಾತಿಯ ನೀತಿಗಳ ಸಕಾರಾತ್ಮಕ ಅಥವಾ ನಕಾರಾತ್ಮಕ ಪರಿಣಾಮಗಳನ್ನು ಕುರಿತು ಲಭ್ಯವಿರುವ ಪುರಾವೆಯನ್ನು ಪರಿಶೀಲಿಸಲು ನಾನು ಪ್ರಸ್ತಾಪಿಸುತ್ತಿದ್ದೇನೆ. ವಿಶೇಷವಾಗಿ ದೀರ್ಘಾವಧಿ ಪರಿಣಾಮಗಳಿಗೆ ಸಂಬಂಧಿಸಿದಂತೆ ನಮಗೆ ಲಭ್ಯವಾಗುವ ಪುರಾವೆಯು ಸೀಮಿತವಾಗಿರುವುದು ವಿಷಾದನೀಯ. ಆದರೂ ಕಳೆದ ಮೂವತ್ತು ವರ್ಷಗಳ ಅವಧಿಯಲ್ಲಿ ಉನ್ನತ ಶಿಕ್ಷಣದಲ್ಲಿ ಪ್ರವೇಶ ದಾಖಲಾತಿಗೆ ಸಂಬಂಧಿಸಿದಂತೆ ಮೀಸಲಾತಿ ನೀತಿಗಳ ಪರಿಣಾಮಗಳ ಕುರಿತು ಈಗ ಸಾಕಷ್ಟು ಬೆಳಕು ಚೆಲ್ಲಬಹುದಾದ ಸಂಬಂಧಿತ ಅಧ್ಯಯನಗಳು ನಿಧಾನವಾಗಿ ಸಂಚಯವಾಗಿವೆ.

ಮೊದಲನೆಯ ಭಾಗದಲ್ಲಿ ನಾನು ಉನ್ನತ ಶಿಕ್ಷಣ ಸಂಸ್ಥೆಗಳಿಗೆ ಪ್ರವೇಶ ದಾಖಲಾತಿ ಪಡೆದ ವಿದ್ಯಾರ್ಥಿಗಳ ರಚನೆಯ ಮೇಲೆ ಮೀಸಲಾತಿ ನೀತಿಗಳ (RP) ಪರಿಣಾಮದ ಕುರಿತಿರುವ ಪುರಾವೆಯನ್ನು ಪರಿಶೀಲನೆ ಮಾಡುವುದರಿಂದ ಪ್ರಾರಂಭಿಸುತ್ತೇನೆ. ಎರಡನೆಯ ಭಾಗದಲ್ಲಿ, ಅಂತಹ ಸಂಸ್ಥೆಗಳಲ್ಲಿನ ವಿದ್ಯಾರ್ಥಿಗಳ ಶೈಕ್ಷಣಿಕ ಸಾಧನೆಗೆ ಸಂಬಂಧಿಸಿದಂತೆ ಇರುವ ಪುರಾವೆಯನ್ನು ಪರಿಶೀಲಿಸುತ್ತೇನೆ: ಅಂದರೆ ಮೀಸಲಾತಿ ನೀತಿಯ  ಫಲಾನುಭವಿಗಳು ಅವರ ವಿದ್ಯಾಭ್ಯಾಸದಲ್ಲಿ ಎಷ್ಟು ಉತ್ತಮರಾಗಿರುತ್ತಾರೆ ಎಂದು. ಮೂರನೆಯ ಭಾಗದಲ್ಲಿ, ಮೀಸಲಾತಿಯ ದೀರ್ಘಾವಧಿ ಪರಿಣಾಮಗಳ ಮೇಲೆ ಕೇಂದ್ರೀಕರಿಸುತ್ತೇನೆ: ಅಂದರೆ, ವಿಶ್ವವಿದ್ಯಾಲಯದ-ನಂತರ ಮೀಸಲಾತಿ ನೀತಿ ಫಲಾನುಭವಿಗಳಿಗೆ ಯಾವ ರೀತಿಯ ವೃತ್ತಿಗಳು ದೊರೆಯುತ್ತವೆ ಎಂದು. ಕೊನೆಗೆ, ನಾಲ್ಕನೆಯ ಭಾಗದಲ್ಲಿ, ಪುರಾವೆಯನ್ನು ಸಂಕ್ಷೇಪಣೆ ಮಾಡಿ ಭಾರತದ ಉನ್ನತ ಶೈಕ್ಷಣಿಕ ಸಂಸ್ಥೆಗಳಲ್ಲಿ ಪ್ರವೇಶ ದಾಖಲಾತಿಗಳಿಗೆ ಸಂಬಂಧಿಸಿದಂತೆ ಮೀಸಲಾತಿ ನೀತಿಯ ಪರಿಣಾಮಗಳ ಕುರಿತು ನಾನು ತೀರ್ಮಾನಕ್ಕೆ ಬಂದಿರುವ ಅವಲೋಕನಗಳನ್ನು ಪ್ರಸ್ತುತಪಡಿಸುತ್ತೇನೆ.

# I

# ಭಾರತದ ವಿಶ್ವವಿದ್ಯಾಲಯಗಳಲ್ಲಿ ಮೀಸಲಾತಿ ನೀತಿಗಳು ಮತ್ತು ದಾಖಲಾತಿಗಳು

### ಉನ್ನತ ಶಿಕ್ಷಣದಲ್ಲಿ ಪರಿಶಿಷ್ಟ ಜಾತಿ ಮತ್ತು ಪಂಗಡದ ವಿದ್ಯಾರ್ಥಿಗಳ ದಾಖಲಾತಿಗಳು[1]

---

[1] ಭಾರತದ ಮೀಸಲಾತಿ ನೀತಿಯ ಪರಿಣಾಮಗಳನ್ನು ಕುರಿತು ಈ ಲೇಖನದಲ್ಲಿ ನಾನು ಮುಂದಿಡುವ ಹೆಚ್ಚಿನ ಪ್ರಾಯೋಗಿಕ ಪುರಾವೆಯು ಕೇವಲ SC ಮತ್ತು ST ವಿದ್ಯಾರ್ಥಿಗಳನ್ನು ಮಾತ್ರ ಒಳಗೊಳ್ಳುತ್ತದೆ. OBCಗಳನ್ನು ಕುರಿತು ಅಂತಹ ಪುರಾವೆಯನ್ನು ಮುಂದಿಡಲು ಮತ್ತು ವಿಶ್ಲೇಷಿಸಲು ಇನ್ನೂ ಹೆಚ್ಚು ವಿಸ್ತೃತವಾದ ರಾಜ್ಯವಾರು ಸಂಶೋಧನೆ ಬೇಕಾಗುತ್ತದೆ, ಏಕೆಂದರೆ OBCಗಳ ಪರಿಸ್ಥಿತಿಯು ಭಾರತದ ವಿವಿಧ ರಾಜ್ಯಗಳಲ್ಲಿ ಬೇರೆ ಬೇರೆ ರೀತಿ ಇವೆ.

ಭಾರತದಲ್ಲಿ ಉನ್ನತ ಶಿಕ್ಷಣಕ್ಕೆ ಪ್ರವೇಶ ಪಡೆಯುವ ಒಟ್ಟು ವಿದ್ಯಾರ್ಥಿಗಳ ಸಂಖ್ಯೆಯು ಕಳೆದ ಐವತ್ತು ವರ್ಷಗಳಲ್ಲಿ ತ್ವರಿತವಾಗಿ  ಹೆಚ್ಚುತ್ತಿದೆ. 1950 ರಲ್ಲಿ 2,00,000 ಕ್ಕೆ ಕಡಮೆ ಇದ್ದು 2000 ದ ಹೊತ್ತಿಗೆ ಹೆಚ್ಚುಕಡಮೆ 7 ಮಿಲಿಯನ್ ಆಗಿತ್ತು.[2] ಈ ಅವಧಿಯಲ್ಲಿ, ಉನ್ನತ ಶಿಕ್ಷಣದ ಒಟ್ಟು  ದಾಖಲಾತಿ ಸಂಖ್ಯೆಯಲ್ಲಿ ಪರಿಶಿಷ್ಟ ಜಾತಿ (SC) ಮತ್ತು ಪರಿಶಿಷ್ಟ ಪಂಗಡ (ST) ದ ವಿದ್ಯಾರ್ಥಿಗಳ ಪ್ರಮಾಣಾನುಗತ ಪ್ರಾತಿನಿಧ್ಯವು ನಿಧಾನವಾಗಿ ಹೆಚ್ಚಾಗುತ್ತಲೇ ಬಂದಿದೆ. 1970ರ ಉತ್ತರಾರ್ಧದಿಂದ ಹಿಡಿದು 1990ರ ಉತ್ತರಾರ್ಧದವರೆಗೆ ಪರಿಶಿಷ್ಟ ಜಾತಿಯ ಪ್ರಾತಿನಿಧ್ಯದ ಪಾಲು 7% ನಿಂದ 7.8% ಗೆ, ಪರಿಶಿಷ್ಟ ಪಂಗಡದ ಪ್ರಾತಿನಿಧ್ಯದ ಪಾಲು 1.6% ನಿಂದ 2.7% ಗೆ ಹೆಚ್ಚಿತು (Rao (ರಾವ್) 2002:47). ಈ ಶೇಕಡಾವಾರು ಅಂಕಿಅಂಶಗಳನ್ನು ಭಾರತದ ಒಟ್ಟು ಜನಸಂಖ್ಯೆಯಲ್ಲಿ ಪರಿಶಿಷ್ಟ ಜಾತಿ ಹಾಗೂ ಪಂಗಡದ ಶೇಕಡಾವಾರು ಅಂಕಿ ಅಂಶಕ್ಕೆ ಅನುರೂಪವಾಗಿ ಹೋಲಿಸಿ ನೋಡಬೇಕಾಗಿದೆ:  ಸ್ಥೂಲವಾಗಿ ಅದು 16% ಮತ್ತು 8% ಇದೆ.[3] ಹೀಗೆ, ಶತಮಾನದ ಕೊನೆಗೆ, ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ SC ಮತ್ತು ST ವಿದ್ಯಾರ್ಥಿಯ ಪ್ರಾತಿನಿಧ್ಯವು ಸ್ಥೂಲವಾಗಿ ಭಾರತದ ಒಟ್ಟು ಜನಸಂಖ್ಯೆಯಲ್ಲಿ ಅರ್ಧದಷ್ಟು ಹಾಗೂ ಮೂರನೆ ಒಂದು ಭಾಗವನ್ನು ತಲುಪಿತ್ತು.[4]

ಭಾರತದ ಕಾಲೇಜುಗಳು ಹಾಗೂ ವಿಶ್ವವಿದ್ಯಾಲಯಗಳಲ್ಲಿ ನೀಡಲಾಗುವ ವಿವಿಧ ಪದವಿ ಕೋರ್ಸುಗಳಲ್ಲಿ SC ಮತ್ತು ST ವಿಧ್ಯಾರ್ಥಿಗಳ ಸಂಖ್ಯೆಯು ಅಸಮಾನವಾಗಿದೆ (Chanana (ಚನಾನ) 1993; HRD (ಎಚ್‌ಆರ್‌ಡಿ) 1997). ಸ್ಥೂಲವಾಗಿ ಭಾರತದಲ್ಲಿ ಉನ್ನತ ಶಿಕ್ಷಣದ 40% ಎಲ್ಲಾ ವಿದ್ಯಾರ್ಥಿಗಳು ಕಲಾ ಕೋರ್ಸುಗಳಲ್ಲಿ (ಸಾಪೇಕ್ಷ ಕಡಮೆ ಪ್ರತಿಷ್ಠೆಯ ಕೋರ್ಸ್) ದಾಖಲಾತಿಯಾಗಿದ್ದರೆ ಅದಕ್ಕೆ ಅನುರೂಪವಾಗಿ ಇದರಲ್ಲಿ SC ವಿದ್ಯಾರ್ಥಿಗಳು 60% ಗೂ ಮೇಲ್ಪಟ್ಟು ಇದ್ದು ST ವಿದ್ಯಾರ್ಥಿಗಳು ಸುಮಾರು 75% ಇದ್ದಾರೆ. ಅನುರೂಪವಾಗಿ, ಇಂಜಿನಿಯರಿಂಗ್, ಕಾನೂನು ಮತ್ತು ವೈದ್ಯಕೀಯದಂತಹ ಅತ್ಯಂತ ಪ್ರತಿಷ್ಠೆಯ ಕೋರ್ಸುಗಳಲ್ಲಿ ಉಳಿದ ಜನಸಂಖ್ಯೆಯಿಂದ ಬರುವ ವಿದ್ಯಾರ್ಥಿಗಳಿಗಿಂತ SC ಮತ್ತು ST ವಿದ್ಯಾರ್ಥಿಗಳ ಶೇಕಡಾವಾರು ಸಂಖ್ಯೆ ಬಹಳ ಕಡಮೆಯೇ ಇದೆ. ಸ್ನಾತಕ ಪದವಿ ಮತ್ತು ಪಿಎಚ್‌ಡಿ

---

[2] ವಿದ್ಯಾರ್ಥಿಗಳ ಪ್ರವೇಶ ದಾಖಲಾತಿಯ ದತ್ತಾಂಶಗಳು Ministry of Human Resources Development, Government of India, New Delhi ಯ ವಾರ್ಷಿಕ ವರದಿಗಳಲ್ಲಿ ಪ್ರಸ್ತುತವಾಗುತ್ತವೆ.

[3] ಭಾರತದ ಜನಗಣತಿಯ ದತ್ತಾಂಶಗಳ ಪ್ರಕಾರ SC ಮತ್ತು ST ಗಳ ಪಾಲು 1981 ರಲ್ಲಿ 15.5% ಮತ್ತು 7.8% ಇದ್ದರೆ 1991 ರಲ್ಲಿ 16.5% ಮತ್ತು 8.1% ಇತ್ತು.

[4] ಭಾರತದ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ SC ಮತ್ತು ST ಯ ದಾಖಲಾತಿಗಳು ಬಹುಶಃ ಒಂದು ರೀತಿಯಲ್ಲಿ ಅತಿಶಯಿಸಲಾಗಿದೆ ಎಂಬುದನ್ನು ಗಮನಿಸಬೇಕಾಗಿದೆ. ಏಕೆಂದರೆ, SC ಮತ್ತು ST ಪ್ರವರ್ಗಕ್ಕೆ ಸೇರದ ಕೆಲವು ಅರ್ಜಿದಾರರು  ಹೇಗೋ SC, ST ಸ್ಥಾನಮಾನವನ್ನು ಪಡೆದು ಆ ಮೂಲಕ ಸಾಮಾನ್ಯ ಪ್ರವರ್ಗದಡಿಯಲ್ಲಿ ಪ್ರವೇಶ ದಾಖಲಾತಿ ಪಡೆಯಲು ಅವರಿಗೆ ಅರ್ಹತೆಯಿಲ್ಲದ ಸಂಸ್ಥೆಗಳಿಗೆ ಮೀಸಲಾತಿ ಕೋಟಾದಲ್ಲಿ ಪ್ರವೇಶ ದಾಖಲಾತಿ ಪಡೆಯುತ್ತಾರೆ; ನೋಡಿ, ಉದಾಹರಣೆಗೆ, Velaskar (1986:600-01) and Patwardhan and Palshikar (1992:24).

ಕೋರ್ಸುಗಳಲ್ಲಿ SC ಮತ್ತು ST ವಿದ್ಯಾರ್ಥಿಗಳ ಪ್ರಾತಿನಿಧ್ಯವು ಪದವಿ ಮಟ್ಟಕ್ಕಿಂತ ಕಡಮೆ ಇರುವುದು ಅಚ್ಚರಿಯೇನಲ್ಲ.

ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಪದವಿಯನ್ನು ಪಡೆದ ದಲಿತರು ಹಾಗೂ ಆದಿವಾಸಿಗಳ ಸಂಖ್ಯೆಯನ್ನು ಕುರಿತು ಲಭ್ಯವಿರುವ ಪುರಾವೆ ಸೀಮಿತವಾಗಿದೆ. ನಾನು ಜನಗಣತಿಯ ದತ್ತಾಂಶಗಳನ್ನು ಆಧರಿಸಿ [5] ಲೆಕ್ಕಹಾಕಿದ ಪ್ರಕಾರ, 1961 ರಲ್ಲಿ ಭಾರತದ ಉನ್ನತ ಶಿಕ್ಷಣ ಸಂಸ್ಥೆಗಳಿಂದ ಪದವಿಗಳನ್ನು ಪಡೆದವರಲ್ಲಿ SC ವಿದ್ಯಾರ್ಥಿಗಳ ಪ್ರಮಾಣವು ಶೇಕಡಾ 0.9 ಇತ್ತಾದರೆ, 1981 ರಲ್ಲಿ ಅದು ಶೇಕಡಾ 3.3 ಗೆ ಏರಿತ್ತು; ಅನುರೂಪವಾಗಿ, ST ವಿದ್ಯಾರ್ಥಿಗಳಿಗೆ ಸಂಬಂಧಿಸಿದಂತೆ 1961 ರಲ್ಲಿ ಶೇಕಡಾ 0.1 ಇತ್ತಾದರೆ 1981 ರಲ್ಲಿ ಶೇಕಡಾ 0.8 ಕ್ಕೆ ಏರಿತ್ತು. ಆನಂತರ SC ಮತ್ತು ST ಯವರ ಪ್ರಮಾಣಗಳು ಇನ್ನೂ ಹೆಚ್ಚಾದವು ಎಂಬುದರಲ್ಲಿ ಯಾವ ಸಂದೇಹವೂ ಇಲ್ಲ. ಆದರೆ ಭಾರತದ ಒಟ್ಟು ಪದವೀಧರರ ಪ್ರಮಾಣಕ್ಕೆ ಹೋಲಿಸಿದರೆ 1981 ರಲ್ಲಿ SC ಪದವೀಧರರ ಪ್ರಮಾಣ 3% ಇದ್ದರೆ, ST ಪದವೀಧರರ ಪ್ರಮಾಣ ಕೇವಲ 1% ಇತ್ತು - ಭಾರತದ ಒಟ್ಟು ಜನಸಂಖ್ಯೆಯಲ್ಲಿನ ಅವರ ಪಾಲು ಬಹಳಷ್ಟು ಕಡಮೆ ಇತ್ತು.

**SC ಮತ್ತು ST ದಾಖಲಾತಿಗಳ ಮೇಲೆ ಮೀಸಲಾತಿ ನೀತಿಯ ಪರಿಣಾಮ**

ಭಾರತದ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಗಣನೀಯ ಪ್ರಮಾಣದಲ್ಲಿ SC ಮತ್ತು ST ವಿದ್ಯಾರ್ಥಿಗಳು ದಾಖಲಾತಿ ಪಡೆದಿರುವುದಕ್ಕೆ ಭಾರತದ ಮೀಸಲಾತಿ ನೀತಿಗಳು ಕಾರಣವಾಗಿದೆ ಎನ್ನುವುದರಲ್ಲಿ ಯಾವುದೇ ಸಂಶಯವಿಲ್ಲ. ಆದಾಗ್ಯೂ,ಈ ನೀತಿಗಳು ಎಷ್ಟರ ಮಟ್ಟಿಗೆ ಬದಲಾವಣೆಯನ್ನು ತಂದಿವೆ ಎನ್ನುವುದನ್ನು ಅಂದಾಜು ಹಾಕುವುದು ಬಹಳ ಕಷ್ಟ. ಉನ್ನತ ಶಿಕ್ಷಣದ ದಾಖಲಾತಿಗಳ ರಚನೆಯ ಕುರಿತು ವಿಸ್ತೃತ ವಿವರಗಳನ್ನೊಳಗೊಂಡ ದತ್ತಾಂಶಗಳ ಅಭಾವ ಅದಕ್ಕೆ ಒಂದು ಕಾರಣವಾದರೆ, ಭಾರತದಲ್ಲಿ ಶಿಕ್ಷಣಕ್ಕೆ ಸಂಬಂಧಿಸಿದಂತೆ ಮೀಸಲಾತಿ ನೀತಿಗಳು ಸಂರಚಿತಗೊಂಡ ಹಾಗೂ ನಿರ್ವಹಿಸಲ್ಪಡುವ ರೀತಿಯು ಬಹಳ ಸಂಕೀರ್ಣವಾಗಿದೆ ಎನ್ನುವುದು ಇನ್ನೊಂದು ಕಾರಣ. ಮೊಟ್ಟ ಮೊದಲು, ಈ ನೀತಿಗಳು ಕೇವಲ ಸಾರ್ವಜನಿಕ ಸಂಸ್ಥೆಗಳಿಗೆ ಮಾತ್ರ ಅನ್ವಯವಾಗುತ್ತವೆ. ಭಾರತದಲ್ಲಿ ಹೆಚ್ಚಿನ ಉನ್ನತ ಶಿಕ್ಷಣ

[5] SC ಮತ್ತು ST ಪ್ರವರ್ಗಕ್ಕೆ ಸೇರಿದವರ (ಮತ್ತು ಉಳಿದ ಜನಸಂಖ್ಯೆಯವರದನ್ನೂ ಒಳಗೊಂಡಂತೆ) ಶೈಕ್ಷಣಿಕ ಸಾಧನೆಯನ್ನು ಕುರಿತ ವಿಸ್ತೃತ ದತ್ತಾಂಶವನ್ನು 1961 ರಿಂದ ಹತ್ತು ವರ್ಷಕ್ಕೊಮ್ಮೆ ನಡೆಯುವ ಭಾರತದ ಜನಸಂಖ್ಯಾ ಗಣತಿಗಳು ಕಲೆಹಾಕುತ್ತಾ ಬಂದಿವೆ, ಆದರೆ SC ಮತ್ತು ST ಗಳಿಗೆ ಸಂಬಂಧಿಸಿದ ದತ್ತಾಂಶಗಳು 1961, 1971, 1981 ರ ಗಣತಿಗಳಲ್ಲಿ ಮಾತ್ರ ಲಭ್ಯ ಇವೆ. 1961 ರ ಗಣತಿಯಲ್ಲಿ ಕೇವಲ ನಗರ ಪ್ರದೇಶಗಳಿಗೆ ಮಾತ್ರ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿನ ಪದವೀಧರರ ದತ್ತಾಂಶಗಳು ಲಭ್ಯ ಇವೆ; 1961 ರ ನಗರಪ್ರದೇಶದ ಸಂಖ್ಯೆಯನ್ನು 1971 ರ ಒಟ್ಟು ನಗರ ಪ್ರದೇಶದಲ್ಲಿನ ಪದವೀಧರರ ಅನುಪಾತಗಳ ಜೊತೆ ಗುಣಿಸಿ 1961 ರ ಒಟ್ಟು ಅಂಕಿಅಂಶವನ್ನು ನಾನು ಅಂದಾಜು ಮಾಡಿದೆ.

ಸಂಸ್ಥೆಗಳು ಕೇಂದ್ರ ಅಥವಾ ರಾಜ್ಯ ಸರ್ಕಾರದ ನಿಯಂತ್ರಣದಲ್ಲಿ ಇವೆಯೆಂಬುದೇನೋ ನಿಜ; ಆದರೆ, 1990 ರ ಪೂರ್ವಾರ್ಧದಿಂದ ಖಾಸಗಿ ಶಿಕ್ಷಣ ಸಂಸ್ಥೆಗಳ ಸಂಖ್ಯೆ ತ್ವರಿತಗತಿಯಲ್ಲಿ ಹೆಚ್ಚಾಗುತ್ತಿದೆ.

ವಸ್ತುತಃ ಕೇಂದ್ರ ಸರ್ಕಾರದ ನಿಯಂತ್ರಣದಲ್ಲಿರುವ ಎಲ್ಲಾ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ SC ವಿದ್ಯಾರ್ಥಿಗಳಿಗೆ 15% ಸೀಟುಗಳನ್ನು ಮೀಸಲಿಟ್ಟಿದ್ದರೆ, ST ಗಳಿಗೆ 7.5% ಸೀಟುಗಳು ಲಭ್ಯವಿರುತ್ತವೆ; ಈ ಅನುಪಾತಗಳನ್ನು ರಾಷ್ಟ್ರದ ಒಟ್ಟು ಜನಸಂಖ್ಯೆಯಲ್ಲಿ ದಲಿತರು ಹಾಗೂ ಆದಿವಾಸಿಗಳ ಪಾಲುಗಳನ್ನು ಅದಕ್ಕೆ ಅನುಗುಣವಾಗಿ ಬಿಂಬಿಸುವಂತೆ ನಿಗದಿಮಾಡಲಾಗಿತ್ತು.[6] 1950 ದಶಕದ ಪೂರ್ವಾರ್ಧದಿಂದಲೇ ಒಂದು ರಾಷ್ಟ್ರೀಯ ನೀತಿಯಾಗಿ SC ಮತ್ತು ST ವಿದ್ಯಾರ್ಥಿಗಳಿಗೆ ಉನ್ನತ ಶಿಕ್ಷಣದ ಸಂಸ್ಥೆಗಳಲ್ಲಿ ಸೀಟುಗಳನ್ನು ಮೀಸಲಿಡಬೇಕು ಎಂದು ಜಾರಿಯಾಗಿತ್ತಾದರೂ ಸಹ ವಾಸ್ತವದಲ್ಲಿ ಅದರ ಅನುಷ್ಠಾನವು ವಿವಿಧ ಪ್ರದೇಶ ಹಾಗೂ ಸಂಸ್ಥೆಗಳಲ್ಲಿ ಒಂದೆರೆಡು ದಶಕಗಳ ತಡವಾಗಿ ಅನುಷ್ಠಾನಗೊಂಡಿತು, ಮತ್ತು ಇಂದಿಗೂ ಕೂಡ ಭಾರತದ ಎಲ್ಲೆಡೆ ಅದು ಸಂಪೂರ್ಣವಾಗಿ ಅನುಷ್ಠಾನವಾಗಿಲ್ಲ ಎಂಬುದು ನಿಜ. ರಾಜ್ಯ ಸರ್ಕಾರದ ನಿಯಂತ್ರಣದಲ್ಲಿರುವ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ SC ಮತ್ತು ST ಮೀಸಲಾತಿ ಸೀಟುಗಳ ಶೇಕಡಾವಾರು ರಾಜ್ಯದ ಜನಸಂಖ್ಯೆಯಲ್ಲಿ ಈ ಗುಂಪುಗಳ ಪ್ರಮಾಣದಿಂದ (ಅಂದಾಜು) ನಿರ್ಧರಿತವಾಗುತ್ತದೆ. ಕೆಲವು ರಾಜ್ಯಗಳು ಇತರೆ ಹಿಂದುಳಿದ ಜಾತಿಗಳಿಗೂ (OBC) ಮೀಸಲಾತಿ ಸೀಟುಗಳ ಒಂದು ಪ್ರತಿಶತವನ್ನು ಹೊಂದಿವೆ ಕೂಡ.

ಮೊದಲು ಸಂಬಂಧಿತ ಪರೀಕ್ಷೆಗಳಲ್ಲಿ ಅತೀ ಹೆಚ್ಚು ಅಂಕಗಳನ್ನು ಪಡೆದ ಸಾಮಾನ್ಯ ಪ್ರವರ್ಗದ ಸೀಟುಗಳನ್ನು ಇಳಿಕೆಯ ಕ್ರಮದಲ್ಲಿ ಭರ್ತಿ ಮಾಡಲಾಗುತ್ತದೆ. OBC ಮೀಸಲಾತಿ ಸೀಟುಗಳು ಇದ್ದೆಡೆ, ಅತೀ ಹೆಚ್ಚು ಅಂಕಗಳನ್ನು ಪಡೆದ ಅರ್ಜಿದಾರರಿಂದ ಆರಂಭಿಸಿ ಆದಷ್ಟು ಸ್ವಲ್ಪ ಕಡಮೆ ಅಂಕ ಮಿತಿಯವರೆಗೆ ಇವು ಕೂಡ ಸಾಮಾನ್ಯವಾಗಿ ಯಾವಾಗಲೂ ಭರ್ತಿ ಮಾಡಲ್ಪಟ್ಟಿರುತ್ತವೆ. SC ಮತ್ತು ST ಮೀಸಲಾತಿ ಸೀಟುಗಳಿಗೆ ಸಂಬಂಧಿಸಿದಂತೆ, ಅವರು ಪ್ರವೇಶಕ್ಕೆ ಅರ್ಹರಾಗಲು ಇರುವ ಕನಿಷ್ಠತಮ ಅರ್ಹತಾ ಅಂಕಗಳು ಸಾಮಾನ್ಯ ಪ್ರವರ್ಗದ ಅರ್ಜಿದಾರರಿಗಿರುವ ಅಂಕ ಮಿತಿಗಳಿಗಿಂತ ಸಾಕಷ್ಟು ಕಡಮೆಯಾಗಿ ನಿಗದಿಪಡಿಸಲಾಗಿರುತ್ತವೆ, ಮತ್ತು, ಕೆಲವು ಶಾಲೆಗಳು ಯಾವುದೇ ಕನಿಷ್ಠ ಪರೀಕ್ಷಾ ಅಂಕಗಳನ್ನೂ ಬೇಡುವುದಿಲ್ಲ; ಅನೇಕವೇಳೆ SC ಮತ್ತು ST ವಿದ್ಯಾರ್ಥಿಗಳಿಗೆ ವಯೋಮಿತಿಯನ್ನು ಕೂಡ

[6] ಕೇಂದ್ರದ ನಿಯಂತ್ರಣದಲ್ಲಿರುವ ಸಂಸ್ಥೆಗಳಲ್ಲಿ SC ಮತ್ತು ST ಪ್ರವರ್ಗದ ಮೀಸಲಾತಿಯ ನಿಯಮಕ್ಕೆ ಇರುವ ಕೆಲವು ಅಪವಾದಗಳೆಂದರೆ ಅವು ವಿಶೇಷ ರಿಯಾಯತಿಯನ್ನು ಪಡೆದಿರುವ 'ಸ್ನಾತಕೋತ್ತರ' (ಪದವಿ ಹಂತದ) ಅಧ್ಯಯನ ಕೇಂದ್ರಗಳಾಗಿರುವಂತಹ ದಿಲ್ಲಿಯ All India Institute of Medical Sciences ಹಾಗೂ ಬೆಂಗಳೂರಿನ National Institute of Advanced Studies ಸಂಸ್ಥೆಗಳು. ಇಲ್ಲಿ SC ಪ್ರವರ್ಗಕ್ಕೆ ಒದಗಿಸಲಾದ ಮೀಸಲಾತಿಯು ಯಾವಾಗಲೂ 15% ಇದ್ದಿದೆ; ST ಗಳಿಗೆ ಸಂಬಂಧಿಸಿದಂತೆ ಮೊದಲು 5% ಇದ್ದು ತದನಂತರ 1982 ರಲ್ಲಿ ಅದನ್ನು 7.5% ಕ್ಕೆ ಏರಿಸಲಾಯಿತು.

ಬದಿಗಿರಿಸಲಾಗುತ್ತದೆ. ಹಾಗಿದ್ದರೂ ಸಹ, ವಿಶೇಷವಾಗಿ ಕೆಲವು ಹೆಚ್ಚು ವಿಶಿಷ್ಟ (selective/exclusive) ಶಾಲೆಗಳಲ್ಲಿ SC ಮತ್ತು ST ಮೀಸಲಾತಿ ಸೀಟುಗಳು ಸಾಮಾನ್ಯವಾಗಿ ಭರ್ತಿಯಾಗಿರುವುದಿಲ್ಲ, ಏಕೆಂದರೆ ಈ ಸಮುದಾಯಗಳಿಂದ ಮಾಧ್ಯಮಿಕ ಶಿಕ್ಷಣವನ್ನು ಪೂರ್ಣಗೊಳಿಸಿದಂತಹ ಹಾಗೂ ಆ ಮೂಲಕ ಪ್ರವೇಶ ದಾಖಲಾತಿ ಅರ್ಹತೆಯ ಮಾನದಂಡಗಳನ್ನು ಪೂರೈಸುತ್ತಿದ್ದ ಸಾಕಷ್ಟು ಅರ್ಜಿಗಳು ಇವರಿಂದ  ಬಂದಿರದ ಕಾರಣ.[7]

ಮೀಸಲಾತಿ ನೀತಿಗಳ ಪರಿಣಾಮವನ್ನು ಕುರಿತು ಒಂದು ಸತ್ಯ ಸಂಗತಿಯ ಪುರಾವೆಯು ಪಟವರ್ಧನ್ ಮತ್ತು ಪಾಲ್ಶೀಕರ್ (1992)  ಅವರು ಮಹಾರಾಷ್ಟ್ರದ ಪುಣೆಯ ಒಂದು ಪ್ರತಿಷ್ಠಿತ ವೈದ್ಯಕೀಯ ಕಾಲೇಜಿನ ಕುರಿತು ಮಾಡಿದ  ಅಧ್ಯಯನದಿಂದ ದೊರಕುತ್ತದೆ. ಅವರು ಮೀಸಲಾತಿ ಸೀಟುಗಳಿಗೆ ಪ್ರವೇಶ ದಾಖಲಾತಿ ಪಡೆದ SC ಮತ್ತು ST ವಿದ್ಯಾರ್ಥಿಗಳ ಒಂದು ಮಾದರಿಯಲ್ಲಿ  ಸುಮಾರು 1/6 ಭಾಗದ ವಿದ್ಯಾರ್ಥಿಗಳು ವಿದ್ಯಾರ್ಥಿಗಳು ಸಾಮಾನ್ಯ ಪ್ರವರ್ಗದಡಿಯಲ್ಲಿ ಪ್ರವೇಶ ದಾಖಲಾತಿ ಪಡೆಯಲು ಬೇಕಾಗುವಷ್ಟು ಅಧಿಕ ಅಂಕಗಳನ್ನು ಪ್ರವೇಶ ಅರ್ಹತಾ ಪರೀಕ್ಷೆಯಲ್ಲಿ ಹೊಂದಿದ್ದರು ಎಂಬುದನ್ನು ಕಂಡುಕೊಂಡರು. ಅನುರೂಪವಾಗಿ, ಮೀಸಲಾತಿ ಸೀಟುಗಳ ಮೂಲಕ ಪ್ರವೇಶ ದಾಖಲಾತಿ ಪಡೆದ OBC ವಿದ್ಯಾರ್ಥಿಗಳ  ಪ್ರಮಾಣ  ಸ್ಥೂಲವಾಗಿ 5/6 ರಷ್ಟು ಇದ್ದಿತು (Patwardhan (ಪಟವರ್ಧನ್) ಮತ್ತು Palshikar (ಪಾಲ್ಶೀಕರ್) 1992:44).

ಹಾಗಾದರೆ, ಭಾರತದ ಉನ್ನತ ಶಿಕ್ಷಣದ ಸಂಸ್ಥೆಗಳಲ್ಲಿ SC ಮತ್ತು ST ವಿದ್ಯಾರ್ಥಿಗಳ ಪ್ರಾತಿನಿಧ್ಯದ ಮೇಲೆ ಮೀಸಲಾತಿ ನೀತಿಗಳ ಒಟ್ಟಾರೆಯ ಪರಿಣಾಮವನ್ನು ಕುರಿತು ನಾವು ಯಾವ ತೀರ್ಮಾನಕ್ಕೆ ಬರಬಹುದು? ಮೊದಲನೆಯದಾಗಿ, ಒಂದೊಮ್ಮೆ ಮೀಸಲಿರಿಸಿದ ಸೀಟುಗಳು ಇಲ್ಲದಿದ್ದಲ್ಲಿ ವಾಸ್ತವಿಕಾವಾಗಿ ವೃತ್ತಿಪರ ಹಾಗೂ ತಾಂತ್ರಿಕ ತರಬೇತಿಯನ್ನು ನೀಡುವ ಭಾರತದ ಅತ್ಯಂತ ಪ್ರತಿಷ್ಠಿತ ವಿಶ್ವವಿದ್ಯಾಲಯಗಳು ಮತ್ತು ಸಂಸ್ಥೆಗಳಲ್ಲಿ (ಹೆಚ್ಚಿನವು ಕೇಂದ್ರ ಸರ್ಕಾರದ ನಿಯಂತ್ರಣದಲ್ಲಿವೆ) ಈಗ ಇರುವ ಎಲ್ಲಾ SC ಮತ್ತು ST ವಿದ್ಯಾರ್ಥಿಗಳಿಗೆ ಅಲ್ಲಿ ಪ್ರವೇಶ ದಾಖಲಾತಿ ಸಿಗುತ್ತಿರಲಿಲ್ಲವೆಂದು  ನಾವು  ಖಂಡಿತವಾಗಿಯೂ ಹೇಳಬಹುದು. ಈ ಪ್ರತಿಷ್ಠಿತ ಸಂಸ್ಥೆಗಳಲ್ಲಿ

---

[7] ತಾತ್ವಿಕವಾಗಿ SC ಹಾಗೂ ST ಅರ್ಜಿದಾರರು (OBCಗಳನ್ನೂ ಒಳಗೊಂಡಂತೆ) ಸಾಮಾನ್ಯ ಪ್ರವರ್ಗದಡಿಯಲ್ಲಿ ಪ್ರವೇಶ ದಾಖಲಾತಿಗೆ ಬೇಕಾಗುವಷ್ಟು ಅಂಕಗಳನ್ನು ಗಳಿಸಿದ್ದರೆ ಅವರನ್ನು ಅವರಿಗೆ ಅನ್ವಯವಾಗುವ ಮೀಸಲಾತಿ ಸೀಟುಗಳ ಅಡಿಯಲ್ಲಿ ಸೇರಿಸಿಕೊಳ್ಳುವುದರ ಬದಲು ಸಾಮಾನ್ಯ ಪ್ರವರ್ಗದಡಿಯಲ್ಲಿ ಸೇರಿಸಿಕೊಳ್ಳಬೇಕು. ಆದಾಗ್ಯೂ, ಆಚರಣೆಯಲ್ಲಿ ಉತ್ತಮ ಅಂಕಗಳನ್ನು ಗಳಿಸಿದಂತಹ ವಿದ್ಯಾರ್ಥಿಗಳನ್ನು ಅವರ ಪ್ರವರ್ಗಕ್ಕೆ ಸೇರಿದ ಅರ್ಜಿದಾರರಿಗೆಂದು ಸೀಟು ಮೀಸಲಿಟ್ಟ ಪ್ರವರ್ಗದಡಿಯಲ್ಲಿಯೇ ಅವರನ್ನು ಸೇರಿಸಿಕೊಳ್ಳಲಾಗುತ್ತದೆ. ಅಂದರೆ SC, ST ಮತ್ತು OBC ವಿದ್ಯಾರ್ಥಿಗಳ ಪ್ರವೇಶ ದಾಖಲಾತಿಯ ಒಟ್ಟು ಅಂಕಿಅಂಶಗಳು ವಾಸ್ತವದಲ್ಲಿ ಮೀಸಲಾತಿಗಳ  ಆಧಾರದ ಮೇಲೆ ಪ್ರವೇಶ ಪಡೆದ ಈ ವಿದ್ಯಾರ್ಥಿಗಳ ನಿಜವಾದ ಅಂಕಿಅಂಶಗಳನ್ನು ಬಿಂಬಿಸುವುದಿಲ್ಲ.

ಸಾಮಾನ್ಯ ಪ್ರವರ್ಗದಡಿಯಲ್ಲಿ ಸೀಟುಗಳಿಗೆ ಇರುವ ಮುಕ್ತ ಸ್ಪರ್ಧೆಯಲ್ಲಿ ಕೆಲವೇ ಕೆಲವು SC ಮತ್ತು ST ಪ್ರವರ್ಗಕ್ಕೆ ಸೇರಿದ ವಿದ್ಯಾರ್ಥಿಗಳು ಯಶಸ್ವಿಯಾಗಬಹುದು. ಏಕೆಂದರೆ, ಅವರಿಗೆ ಸ್ಪರ್ಧೆಯಲ್ಲಿ ಗಣನೀಯ ಪ್ರಮಾಣದಲ್ಲಿ ಮೇಲುಗೈ ಸಾಧಿಸಲು ಸಾಪೇಕ್ಷ ಅರ್ಥಿಕವಾಗಿ ಉತ್ತಮ ಸ್ಥಿತಿಯುಳ್ಳ ಕುಟುಂಬಗಳಿಂದ ಬರುವಂತಹ ವಿದ್ಯಾರ್ಥಿಗಳಿಗೆ ಅನುವು ಮಾಡಿಕೊಡುವಂತಹ ಅತ್ಯುತ್ತಮ ಗುಣಮಟ್ಟದ ಮಾಧ್ಯಮಿಕ ಶಿಕ್ಷಣಕ್ಕಾಗಲೀ, ಅಥವಾ ಖಾಸಗಿ ಹಣದಿಂದ ನಡೆಯುವ ಸಿದ್ಧತಾ ಕಾರ್ಯಾಗಾರಗಳು ಹಾಗೂ ಟುಟೋರಿಯಲ್‌ಗಳಿಗಾಗಲೀ ಲಭ್ಯಾವಾಕಾಶವಿರುವುದು ಬಹಳ ವಿರಳ. ವಿಶಿಷ್ಟವಾಗಿ SC ಮತ್ತು ST ವಿದ್ಯಾರ್ಥಿಗಳಿಗೆ ಪ್ರವೇಶ ದಾಖಲಾತಿಗೆ ಕಡಮೆ ಅಂಕ ಮಿತಿಗಳಿದ್ದರೂ ಸಹ, ಅವರು ಅಂತಹ ಸಂಸ್ಥೆಗಳಲ್ಲಿ ಲಭ್ಯವಿರುವ ಮೀಸಲಾತಿ ಸೀಟುಗಳನ್ನು ಭರ್ತಿ ಮಾಡಲು ವಿಫಲರಾಗುತ್ತಾರೆ.

SC ಮತ್ತು ST ವಿದ್ಯಾರ್ಥಿಗಳು ಪ್ರತಿಷ್ಠಿತ ಸಂಸ್ಥೆಗಳಷ್ಟು ಕಠಿಣವಲ್ಲದ ಪ್ರವೇಶಾತಿ ಅಗತ್ಯತೆಗಳನ್ನು ಪೂರೈಸಬೇಕಾದ ಭಾರತದ ಹೆಚ್ಚಿನ ಸಂಖ್ಯೆಯ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಮೀಸಲಾತಿ ನೀತಿಗಳ ಕಾರಣ ದಾಖಲಾತಿ ಪಡೆದ ಅವರ ಸಂಖ್ಯೆಯನ್ನು ಅಂದಾಜು ಮಾಡುವುದು ಇನ್ನೂ ಹೆಚ್ಚು ಕಷ್ಟವಿದೆ. ಕೆಲವು ಪ್ರತಿಷ್ಠಿತವಲ್ಲದ ಸಂಸ್ಥೆಯ ಸಾಮಾನ್ಯ ಪ್ರವರ್ಗದಡಿಯಲ್ಲಿ ಪ್ರವೇಶ ದಾಖಲಾತಿಗೆ ಅರ್ಹರಾಗಲು ಇರುವ ಸಂಬಂಧಿತ ಪರೀಕ್ಷೆಗಳಲ್ಲಿ ಗಣನೀಯ ಪ್ರಮಾಣದ SC ಮತ್ತು ST ಅರ್ಜಿದಾರರು ಸಾಕಷ್ಟು ಹೆಚ್ಚಿನ ಅಂಕಗಳನ್ನು ಪಡೆಯುತ್ತಾರೆ. ಹೆಚ್ಚಿನ ಪ್ರಸಂಗಗಳಲ್ಲಿ, ಮೀಸಲಾತಿ ನೀತಿಗಳ ಪರಿಣಾಮವು ಕೇವಲ ಫಲಾನುಭವಿ ವಿದ್ಯಾರ್ಥಿಗಳನ್ನು ಸಂಸ್ಥೆಯ ಆಯ್ಕೆ ಆದ್ಯತೆಯ ಹಾಗೂ ಗುಣಮಟ್ಟದ ಶ್ರೇಣಿಕೃತ ವ್ಯವಸ್ಥೆಯಲ್ಲಿ ಮೇಲ್ಮುಖವಾಗಿ ಮರುಹಂಚಿಕೆ ಮಾಡುವುದಷ್ಟೇ ಆಗಿರುತ್ತದೆ. ಆದಾಗ್ಯೂ, ಮೀಸಲಾತಿ ಸೀಟುಗಳಿಲ್ಲದೆ ಇದ್ದರೆ ಸಂಭವನೀಯ SC ಮತ್ತು ST ವಿದ್ಯಾರ್ಥಿಗಳು ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಪ್ರವೇಶಾತಿ ಪಡೆಯುವುದರ ಬಗ್ಗೆ ಹೊಂದಿರುವ ಆಸಕ್ತಿಯು ಗಣನೀಯವಾಗಿ ಕಡಮೆ ಆಗುವ ಸಾಧ್ಯತೆ ಇದೆ. ಒಂದು ವಿಷಯವೇನೆಂದರೆ, ಮೀಸಲಾತಿ ಸೀಟುಗಳ ಲಭ್ಯತೆಯು SC ಮತ್ತು ST ವಿದ್ಯಾರ್ಥಿಗಳು ಪ್ರವೇಶ ಪಡೆಯಬಹುದಾದ ಶಾಲೆಯ ಗುಣಮಟ್ಟವು ಸುಧಾರಿಸುತ್ತದೆ, ಮತ್ತು ಆದ್ದರಿಂದಲೇ ಉದ್ಯೋಗ ಮಾರುಕಟ್ಟೆಯಲ್ಲಿ ಉನ್ನತ ಶೈಕ್ಷಣಿಕ ಪದವಿಗೆ ಮೌಲ್ಯವಿದೆ. ಎರಡನೆಯದು, ಮೀಸಲಾತಿ ಸೀಟಿನ ಮೂಲಕ ಪ್ರವೇಶ ಪಡೆಯುವ SC ಅಥವಾ ST ವಿದ್ಯಾರ್ಥಿಗೆ ಅವು ಇಲ್ಲದಿದ್ದರೆ ಶಾಲೆಯಲ್ಲಿ ಉಳಿಯಲು ಕಷ್ಟವಾಗಬಹುದಾದ ಸರ್ಕಾರದ ಆರ್ಥಿಕ ಹಾಗೂ ಇತರ ರೀತಿಯ ನೆರವಿಗೆ ಲಭ್ಯಾವಾಕಾಶ ಗಳಿಸುವ ಅವರ ಸಾಧ್ಯತೆಯನ್ನು ವರ್ಧಿಸುತ್ತದೆ. ಸರ್ಕಾರವು ಒದಗಿಸುವ ವಿದ್ಯಾರ್ಥಿವೇತನಗಳು, ವಿಶೇಷ ಹಾಸ್ಟೆಲ್‌ಗಳು, ಊಟ, ಶೈಕ್ಷಣಿಕ ಸಾಮಗ್ರಿಗಳು ಹಾಗೂ ಪುಸ್ತಕಕ್ಕಾಗಿ ಸಾಲ ಇತ್ಯಾದಿಗಳು ಅನೇಕ SC ಮತ್ತು ST ವಿದ್ಯಾರ್ಥಿಗಳು ಉನ್ನತ ಶಿಕ್ಷಣವನ್ನು ಪಡೆಯಲು ಹಾಗೂ ಮುಂದುವರಿಸಿಕೊಂಡು ಹೋಗಲು ಅನುವುಮಾಡಿಕೊಟ್ಟಿದೆ; ಸಾಮಾನ್ಯವಾಗಿ ಅಂತಹ ನೆರವು ಅಂತಹ ವಿದ್ಯಾರ್ಥಿಗಳ ಎಲ್ಲಾ ಆರ್ಥಿಕ ಮತ್ತು ಸಾಮಾಜಿಕ ಅಗತ್ಯಗಳನ್ನು ಪೂರೈಸಲು ಅಸಮರ್ಪಕವಾಗಿದ್ದರೂ ಸಹ, ಅನೇಕವೇಳೆ ಅಂಥ ವಿದ್ಯಾರ್ಥಿಯು ತಾನು ಶಿಕ್ಷಣವನ್ನು ಮುಂದುವರೆಸಬೇಕೇ ಬೇಡವೇ ಎನ್ನುವುದನ್ನು ನಿರ್ಧರಿಸಲು

ಅವಳಿಗೆ/ಅವನಿಗೆ ಅದು ಖಂಡಿತ ನಿರ್ಣಾಯಕವಾಗುತ್ತದೆ (Mendelsohn (ಮೆಂಡಲ್ಸನ್) ಮತ್ತು Vicziany (ವಿಟ್ಜಿಯಾನಿ) 1998).

ಭಾರತದ ಉನ್ನತ ಶಿಕ್ಷಣದಲ್ಲಿ ಮೀಸಲಾತಿ ನೀತಿಗಳ ಒಟ್ಟಾರೆಯ ಪರಿಮಾಣಾತ್ಮಕ ಮಹತ್ವವನ್ನು ಅರ್ಥ ಮಾಡಿಕೊಳ್ಳುವ ಸಲುವಾಗಿ ನಾನು ಮೀಸಲಾತಿ ನೀತಿಗಳ ಮೂಲಕ SC ಮತ್ತು ST ವಿದ್ಯಾರ್ಥಿಗಳಿಗೆ 'ಅಪೇಕ್ಷಣೀಯ' ಉನ್ನತ ಶಿಕ್ಷಣ ಕೋರ್ಸುಗಳಲ್ಲಿ ದಾಖಲಾತಿ ಪಡೆಯಲು ಅನುವುಮಾಡಿಕೊಟ್ಟಿರುವಂತಹ ಅವರ ಸಂಖ್ಯೆಯನ್ನು ಅಂದಾಜು ಮಾಡುತ್ತೇನೆ. ಒಂದು ಸ್ಥೂಲ ಅಂದಾಜಿನಲ್ಲಿ, ಹೆಚ್ಚು ಪ್ರತಿಷ್ಠೆ ಹೊಂದಿರದ ಕಲಾ ಕೋರ್ಸುಗಳನ್ನು ಬಿಟ್ಟು ಉಳಿದೆಲ್ಲ ಕೋರ್ಸುಗಳನ್ನು (ಸಾಪೇಕ್ಷವಾಗಿ) 'ಅಪೇಕ್ಷಣೀಯ' ಎಂದು ಪರಿಗಣಿಸಬಹುದು. ರಾವ್ (2002:47, ಕೋಷ್ಟಕ 1) ಅವರ ಪ್ರಕಾರ, 1996-97 ರ ಅವಧಿಯಲ್ಲಿ ಒಟ್ಟು ಸುಮಾರು 5,10,000 SC ವಿದ್ಯಾರ್ಥಿಗಳು ಮತ್ತು ಸುಮಾರು 1,80,000 ST ವಿದ್ಯಾರ್ಥಿಗಳು ಭಾರತದ ವಿಶ್ವವಿದ್ಯಾಲಯಗಳಲ್ಲಿ ದಾಖಲಾತಿಯಾಗಿದ್ದರು. ಹಿಂದಿನ ವಿಭಾಗದಲ್ಲಿ ನಾನು ಸುಮಾರು 60% SC ವಿದ್ಯಾರ್ಥಿಗಳು ಮತ್ತು ಸುಮಾರು 75% ST ವಿದ್ಯಾರ್ಥಿಗಳು ಕಲಾ ಕೋರ್ಸುಗಳಲ್ಲಿ ದಾಖಲಾತಿಯಾಗಿದ್ದ ಅಂದಾಜುಗಳನ್ನು ಉಲ್ಲೇಖಿಸಿದ್ದೆ. ಈ ಅಂಕಿಅಂಶಗಳು ಸ್ಥೂಲವಾಗಿ 2,00,000 SC ವಿದ್ಯಾರ್ಥಿಗಳು ಮತ್ತು 45,000 ST ವಿದ್ಯಾರ್ಥಿಗಳು ವಾಣಿಜ್ಯ, ವಿಜ್ಞಾನ, ಇಂಜಿನಿಯರಿಂಗ್ ಇತ್ಯಾದಿಗಳಂತಹ ಉಳಿದ ಕೋರ್ಸುಗಳಲ್ಲಿ ದಾಖಲಾತಿಯಾಗಿದ್ದರು ಎನ್ನುವುದನ್ನು ಸೂಚಿಸುತ್ತದೆ. ಖಂಡಿತವಾಗಿ ಈ ವಿದ್ಯಾರ್ಥಿಗಳಲ್ಲಿ ಕಡೆಗಣಿಸಲಾಗದಷ್ಟು ಭಾಗದವರು, ಸಾಪೇಕ್ಷ ಅಷ್ಟೇನೂ ಕಠಿಣವಿರದ, ಈ ಕೆಲವು ಕೋರ್ಸುಗಳಿಗೆ ಪ್ರವೇಶ ದಾಖಲಾತಿ ಪಡೆಯುವ ಅರ್ಹತೆಯನ್ನು ಹೊಂದಿರುತ್ತಿದ್ದರು; ಹಾಗಾಗಿ ಮೀಸಲಾತಿ ನೀತಿಗಳ ಮೂಲಕ SC ಮತ್ತು ST ವಿದ್ಯಾರ್ಥಿಗಳಿಗೆ ಅಪೇಕ್ಷಣೀಯ ಕೋರ್ಸುಗಳನ್ನು ಸೇರಲು ಅನುವುಮಾಡಿಕೊಟ್ಟ ಒಟ್ಟು ಸಂಖ್ಯೆಯ ಒಂದು ಸ್ಥೂಲವಾದ ಅಂದಾಜು 2,00,000.

ಒಟ್ಟಿನಲ್ಲಿ, ಪ್ರವೇಶ ದಾಖಲಾತಿಗಳಲ್ಲಿ ಮೀಸಲಾತಿ ನೀತಿಗಳ ಇರುವಿಕೆಯ ಕಾರಣ 1990ರ ದಶಕದ ಉತ್ತರಾರ್ಧದಲ್ಲಿ ಭಾರತದ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ದಾಖಲಾತಿಯಾಗಿದ್ದ ಮೂರನೆಯ ಒಂದು ಭಾಗದಷ್ಟು SC ಮತ್ತು ST ವಿದ್ಯಾರ್ಥಿಗಳು ಸಾಪೇಕ್ಷ ಅಪೇಕ್ಷಣೀಯ ಕೋರ್ಸುಗಳಲ್ಲಿ ಅವರ ಉನ್ನತ ಶಿಕ್ಷಣವನ್ನು ಮುಂದುವರಿಸುತ್ತಿದ್ದರು ಎಂದು ಸಕಾರಣವಾಗಿ ತೀರ್ಮಾನಿಸಬಹುದು ಎಂದು ತೋರುತ್ತದೆ.[8]

---

[8] SC ಮತ್ತು/ಅಥವಾ ST ಗಳಿಗೆಂದೇ ವಿಶೇಷವಾಗಿ ಸ್ಥಾಪಿತವಾದ ಶಿಕ್ಷಣ ಸಂಸ್ಥೆಗಳ ಪಾತ್ರವನ್ನೂ ಸಹ ನಾವು ಗಮನಿಸಬೇಕಾಗಿದೆ. ಉದಾಹರಣೆಗೆ, ದಲಿತರ ಶಿಕ್ಷಣವನ್ನು ಉತ್ತೇಜಿಸಲೆಂದು ಬಿ.ಆರ್.ಅಂಬೇಡ್ಕರ್‌ರವರಿಂದ ಸ್ಥಾಪಿಸಲ್ಪಟ್ಟ ಪೀಪಲ್ಸ್ ಎಜ್ಯುಕೇಶನ್ ಸೊಸೈಟಿಯಿಂದ ನಡೆಸಲ್ಪಡುವ ಕಾಲೇಜುಗಳು. ಅಂತಹ ಶಾಲೆಗಳು ಕೆಲವು ಕ್ಷೇತ್ರಗಳಲ್ಲಿ ಅವಕಾಶವಂಚಿತ ವಿದ್ಯಾರ್ಥಿಗಳಿಗೆ ಲಭ್ಯವಾಗುವ ಶೈಕ್ಷಣಿಕ ಅವಕಾಶಗಳ ಪ್ರಮಾಣ ಮತ್ತು ಗುಣಮಟ್ಟ ಇವೆರಡನ್ನೂ ಹೆಚ್ಚಿಸುವಲ್ಲಿ ಹೆಚ್ಚು ಸಕಾರಾತ್ಮಕ ಪಾತ್ರ ವಹಿಸಿವೆ ಎನ್ನುವುದು ನಿಜವಾದರೂ ಇಡೀ ಭಾರತದ ಸಂದರ್ಭದಲ್ಲಿ ಈ ರೀತಿಯ ಉನ್ನತ ಶಿಕ್ಷಣ ಸಂಸ್ಥೆಗಳ ಸಂಖ್ಯೆಯು ಬಹಳ ಕಡಮೆ ಎಂದೇ ಹೇಳಬಹುದು.

ಮೀಸಲಾತಿ ನೀತಿಗಳ ಕಾರಣ ಗಣನೀಯ ಪ್ರಮಾಣದ SC ಮತ್ತು ST ವಿದ್ಯಾರ್ಥಿಗಳನ್ನು ಹೆಚ್ಚು ಅಪೇಕ್ಷಣೀಯವಿರದ ಕೋರ್ಸುಗಳಲ್ಲಿ ಉನ್ನತ ಶಿಕ್ಷಣವನ್ನು ಮುಂದುವರಿಸಲು ಉತ್ತೇಜಿಸಿದ ಸಾಧ್ಯತೆಯನ್ನೂ ಗಣನೆಗೆ ತೆಗೆದುಕೊಂಡರೆ, ಈ ನೀತಿಗಳು 1990 ರ ದಶಕದ ಉತ್ತರಾರ್ಧದಲ್ಲಿ ಉನ್ನತ ಶಿಕ್ಷಣದಲ್ಲಿ ದಾಖಲಾತಿಯಾದ 7,00,000 SC ಮತ್ತು ST ವಿದ್ಯಾರ್ಥಿಗಳಲ್ಲಿ ಸುಮಾರು ಅರ್ಧದಷ್ಟು ವಿದ್ಯಾರ್ಥಿಗಳ ಜೀವನದಲ್ಲಿ ಬದಲಾವಣೆಯನ್ನು ಉಂಟುಮಾಡಿವೆ ಎಂದು ನಾವು ತೀರ್ಮಾನಿಸಬಹುದು. ಆದರೆ ಇನ್ನೂ, ಸ್ವಾತಂತ್ರ್ಯ ಪಡೆದ 50 ವರ್ಷಗಳಾದ ನಂತರವೂ ಸಹ, ಭಾರತದ ಉನ್ನತ ಶಿಕ್ಷಣದ ಸಂಸ್ಥೆಗಳಲ್ಲಿ SC ವಿದ್ಯಾರ್ಥಿಗಳಿಗೆಂದು ಮೀಸಲಿಟ್ಟ ಅರ್ಧದಷ್ಟಾದರೂ ಸೀಟುಗಳು ಮತ್ತು ST ವಿದ್ಯಾರ್ಥಿಗಳಿಗೆಂದು ಮೀಸಲಿಟ್ಟ 2/3ರಷ್ಟಾದರೂ ಸೀಟುಗಳು ಭರ್ತಿಯಾಗದೆ ಉಳಿದಿವೆ ಎಂದು ಹಿಂದಿನ ವಿಭಾಗದಲ್ಲಿ ಉದಾಹರಿಸಿದ ದತ್ತಾಂಶವು ಸೂಚಿಸುತ್ತದೆ.

**ಮೀಸಲಾತಿ ನೀತಿಗಳು ಮತ್ತು ದಾಖಲಾತಿಯಾದ ಫಲಾನುಭವಿ ವಿದ್ಯಾರ್ಥಿಗಳ ಶೈಕ್ಷಣಿಕ ಅರ್ಹತೆಗಳು**

ಕಳೆದ ಕೆಲವು ದಶಕಗಳೀಚೆಗೆ ಭಾರತದ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ SC ಮತ್ತು ST ವಿದ್ಯಾರ್ಥಿಗಳ ದಾಖಲಾತಿ ಗಮನಾರ್ಹವಾಗಿ ಹೆಚ್ಚಳವಾಗಿದೆ ಎನ್ನುವುದನ್ನು ಪ್ರಸ್ತುತಪಡಿಸಿದ ಮೇಲಿನ ಪುರಾವೆಯು ತೋರಿಸಿಕೊಡುತ್ತದೆಯಾದರೂ, ಅಂತಹ ಸಂಸ್ಥೆಗಳಲ್ಲಿ SC ಮತ್ತು ST ವಿದ್ಯಾರ್ಥಿಗಳ ಪ್ರಾತಿನಿಧ್ಯವು ಪ್ರಮಾಣಾನುಗುಣವಾಗಿ ಸಾಮಾನ್ಯ ಪ್ರವರ್ಗದವರ ಪ್ರಾತಿನಿಧ್ಯಕ್ಕಿಂತ ಬಹಳಷ್ಟು ಕಡಮೆಯೇ ಇದೆ. ಭಾರತದ ಮೀಸಲಾತಿ ನೀತಿಗಳು SC ಮತ್ತು ST ವಿದ್ಯಾರ್ಥಿಗಳು ಕಾಲೇಜು ಮತ್ತು ವಿಶ್ವವಿದ್ಯಾಲಯ ಮಟ್ಟದ ವಿದ್ಯಾಭ್ಯಾಸವನ್ನು ಮುಂದುವರಿಸುವ ಅವಕಾಶಗಳನ್ನು ಹೆಚ್ಚಿಸುವಲ್ಲಿ ಪ್ರಧಾನ ಪಾತ್ರ ವಹಿಸಿವೆ ಎನ್ನುವುದರಲ್ಲಿ ಯಾವ ಸಂಶಯವೂ ಇಲ್ಲ. ಆದಾಗ್ಯೂ, ವಿಶ್ವವಿದ್ಯಾಲಯಗಳಲ್ಲಿ ಪ್ರವೇಶ ಅವಕಾಶ ಪಡೆಯಲು ಪರೀಕ್ಷೆಯಲ್ಲಿ ಸಾಮಾನ್ಯ ಪ್ರವರ್ಗದವರಿಂದ ಬೇಡುವ ಅಂಕಗಳಿಗಿಂತ ಗಮನಾರ್ಹವಾಗಿ SC ಮತ್ತು ST ವಿದ್ಯಾರ್ಥಿಗಳಿಂದ ಕನಿಷ್ಠತಮ ಕಡಮೆ ಅಂಕಗಳನ್ನು ಬೇಡುವುದರ ಮೂಲಕ ಅದನ್ನು ಹೆಚ್ಚಿನ ಭಾಗ ಸಾಧಿಸಲಾಗಿದೆ. ಪ್ರವೇಶಾರ್ಹತೆಯ ಪರೀಕ್ಷೆಗಳಲ್ಲಿನ ಅಂಕಗಳನ್ನು ಉನ್ನತ ಶಿಕ್ಷಣದಲ್ಲಿ ವಿದ್ಯಾರ್ಥಿಯ ಮುಂದಿನ ಉತ್ತಮ ಸಾಧನೆಯನ್ನು ಸೂಚಿಸುವುದಾಗಿ ಪರಿಗಣಿಸಲಾಗುವುದಿಲ್ಲವಾದರೂ ಸಹ, ಹೆಚ್ಚಿನ SC ಮತ್ತು ST ವಿದ್ಯಾರ್ಥಿಗಳು ಪಡೆಯುವ ಕಡಮೆ ಅಂಕಗಳು, ಮುಖ್ಯವಾಗಿ ಪ್ರತಿಷ್ಠಿತ ಸಂಸ್ಥೆಗಳಲ್ಲಿ, ವಿಶ್ವವಿದ್ಯಾಲಯ ಮಟ್ಟದ ಶಿಕ್ಷಣವು ಬೇಡುವಂತಹ ಶೈಕ್ಷಣಿಕ ಸಿದ್ಧತೆಯು ಹೆಚ್ಚು ಸಮರ್ಪಕವಾಗಿಲ್ಲ ಎಂಬುದನ್ನು ಬಿಂಬಿಸುತ್ತದೆ. ಕಡಮೆ ಅಂಕಗಳು ಮತ್ತು ಅಸಮರ್ಪಕ ಶೈಕ್ಷಣಿಕ ಸಿದ್ಧತೆ, ಇವೆರಡೂ ಸಾಮಾಜಿಕ ಮತ್ತು ಆರ್ಥಿಕ ಅನಾನುಕೂಲತೆಯೊಂದಿಗೆ ಖಂಡಿತವಾಗಿಯೂ ಸಹಸಂಬಂಧ ಹೊಂದಿದ್ದು ಅದು ಉನ್ನತ ಶೈಕ್ಷಣಿಕ ಅನುಭವವನ್ನು ಪಡೆಯಲು ಹೊರಟಿರುವ ಸಾಮನ್ಯ SC ಅಥವಾ ST ವಿದ್ಯಾರ್ಥಿಯಿಂದ ಎದುರಿಸಲಾಗುವ ಸವಾಲನ್ನು ಇನ್ನಷ್ಟು ಹೆಚ್ಚಿಸುತ್ತದೆ.

ಭಾರತದ ಪ್ರತಿಷ್ಠಿತ ಸಂಸ್ಥೆಗಳಲ್ಲಿ SC ಮತ್ತು ST ವಿದ್ಯಾರ್ಥಿಗಳ ಪರಿಸ್ಥಿತಿಗೆ ಇರುವ ಒಂದು ಒಳ್ಳೆಯ ನಿದರ್ಶನವೆಂದರೆ ಅದು ಅವರ ಕೋರ್ಸುಗಳಿಗೆ ಭಾರತದಲ್ಲಿನ ಅತ್ಯುತ್ತಮ ವಿದ್ಯಾರ್ಥಿಗಳನ್ನು

ಆಕರ್ಷಿಸುವ ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯಲ್ಲಿನ (Indian Institutes of Technology) (IITs (ಐಐಟಿ)) ಅವರ ಅನುಭವವಾಗಿದೆ. 1970 ರ ಪೂರ್ವಾರ್ಧದಲ್ಲಿ ಭಾರತದ ಪ್ರಮುಖ ಐದು IIT ಸಂಸ್ಥೆಗಳು[9] ತಮ್ಮ ಪ್ರವೇಶ ದಾಖಲಾತಿಗಳಲ್ಲಿ ಮೀಸಲಾತಿ ನೀತಿಗಳನ್ನು ಅನುಷ್ಠಾನ ಮಾಡಲು ಪ್ರಾರಂಭಿಸಿ, ಪ್ರವೇಶ ಪರೀಕ್ಷೆಗಳಲ್ಲಿ ಸಾಮಾನ್ಯ ಪ್ರವರ್ಗದ ವಿದ್ಯಾರ್ಥಿಗಳಿಗೆ ನಿಗದಿಪಡಿಸಿದ ಪ್ರವೇಶದ ಅಂಕ ಮಿತಿಗಿಂತ ಬಹಳಷ್ಟು ಕಡಮೆ ಅಂಕಗಳನ್ನು ಪಡೆದ SC ಮತ್ತು ST ವಿದ್ಯಾರ್ಥಿಗಳನ್ನು ಪ್ರವೇಶ ದಾಖಲಾತಿ ಮಾಡಿಕೊಂಡಿತು. ಒಂದು ಆರಂಭಿಕ ಅವಧಿಯ ನಂತರದಲ್ಲಿ, ಮೀಸಲಾತಿಗಳ ಮೂಲಕ ದಾಖಲಾತಿಯಾದ ಅನೇಕ SC ಮತ್ತು ST ವಿದ್ಯಾರ್ಥಿಗಳ ಸಿದ್ಧತೆಯು ಕಳಪೆ ಗುಣಮಟ್ಟದ್ದು ಎಂಬುದನ್ನು ಹಾಗೂ ಅವರಲ್ಲಿ ಅನೇಕರು ಅರ್ಧಕ್ಕೆ  ಬಿಡುತ್ತಿರುವುದನ್ನು ಕಂಡುಕೊಂಡ IIT ಸಂಸ್ಥೆಗಳು ಪ್ರವೇಶ ಪರೀಕ್ಷೆಗಳಿಗೆ ಸಾಮಾನ್ಯ ಪ್ರವರ್ಗದವರಿಗೆ ನಿಗದಿಪಡಿಸಿದ ಅಂಕ ಮಿತಿಗಿಂತ 2/3 ಕ್ಕಿಂತ ಕಡಮೆ ಅಂಕಗಳನ್ನು ಪಡೆದಂತಹ ವಿದ್ಯಾರ್ಥಿಗಳಿಗೆ ಒಂದು ವರ್ಷದ ಧೀರ್ಘಾವಧಿಯ ಪೂರ್ವಸಿದ್ಧತಾ ಕೋರ್ಸುಗಳನ್ನು ಆರಂಭಿಸಿದವು. ಆ ಪೂರ್ವಸಿದ್ಧತಾ ಕಾರ್ಯಕ್ರಮವನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದರೆ ಮಾತ್ರ ಈ ವಿದ್ಯಾರ್ಥಿಗಳು ಮೀಸಲಾತಿ ಸೀಟುಗಳ ಮೂಲಕ  ದಾಖಲಾತಿ ಪಡೆಯುತ್ತಾರೆ. ಆದರೂ 1990 ರ ಮಧ್ಯಭಾಗದ ಹೊತ್ತಿಗೆ,  ಮೀಸಲಾತಿ ನೀತಿಗಳು ಮತ್ತು ಅದಕ್ಕೆ ಸಂಬಂಧಿತ ಕಾರ್ಯಕ್ರಮಗಳು ಅನುಷ್ಠಾನಕ್ಕೆ ಬಂದು ಎರಡು ದಶಕಗಳಾಗಿ ಹಾಗೂ ಅವುಗಳ ಪ್ರಕ್ರಿಯೆಯು ಉತ್ತಮವಾಗಿ ನಡೆಯುತ್ತಿದ್ದ ನಂತರವೂ, SC ಮತ್ತು ST ವಿದ್ಯಾರ್ಥಿಗಳಿಗೆಂದು ಮೀಸಲಿಟ್ಟ ಅನೇಕ ಸೀಟುಗಳು ಭರ್ತಿಯಾಗದೇ ಹೋದವು. 1994-95 ರ ಪ್ರವೇಶ ದಾಖಲಾತಿ ದತ್ತಾಂಶಗಳನ್ನು ಗಮನಿಸಿದಾಗ, SC ವಿದ್ಯಾರ್ಥಿಗಳಿಗೆಂದು ಮೀಸಲಿಟ್ಟ ಸೀಟುಗಳಲ್ಲಿ ಕೇವಲ ಅರ್ಧದಷ್ಟು ಮಾತ್ರ ಭರ್ತಿಗೊಂಡಿದ್ದರೆ, ಅನುರೂಪವಾಗಿ ST ಸೀಟುಗಳಲ್ಲಿ 1/6 ಸೀಟುಗಳಿಗಿಂತ ಕಡಮೆ ಭರ್ತಿಗೊಂಡಿದ್ದವು ಎಂಬುದನ್ನು ಸೂಚಿಸುತ್ತದೆ.[10]

ಪ್ರತಿಷ್ಠಿತವಲ್ಲದ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿಯೂ  SC ಮತ್ತು ST ಪ್ರವರ್ಗದವರಿಗೆಂದು ಮೀಸಲಿಟ್ಟ ಸೀಟುಗಳು ಕೂಡ ಅನೇಕವೇಳೆ ಭರ್ತಿಯಾಗದೆ ಉಳಿದಿರುವುದು ಇದೆ. ಐಕಾರಾ (Aikara) ಅವರ ಪ್ರಕಾರ (1980), 1970 ರಲ್ಲಿ ಗುಜರಾತಿನ ವೈದ್ಯಕೀಯ ಶಾಲೆಗಳಲ್ಲಿ 5% ಕ್ಕಿಂತ ಕಡಮೆ ಪ್ರಮಾಣದಲ್ಲಿ ಅವರ ಮೀಸಲಾತಿ ಸೀಟುಗಳು ಭರ್ತಿಯಾಗಿದ್ದವು. ಮುಂಬಾಯಿಯ ವೈದ್ಯಕೀಯ ಕಾಲೇಜುಗಳನ್ನು ಕುರಿತು ವೆಲಾಸ್ಕರ್ (Velaskar) (1986) ಮಾಡಿದ ಒಂದು ಬಹಳ ಉಪಯುಕ್ತವಾದ ಸಂಶೋಧನೆಯು ಈ ಕೆಳಗಿನ ಶೋಧಕಗಳನ್ನು ಹೊರಗೆಡವಿತು. 1969 ರಲ್ಲಿ SC ವಿದ್ಯಾರ್ಥಿಗಳಿಗೆಂದು ಮೀಸಲಿಟ್ಟ 11%

[9] ಬಹಳ ವರ್ಷಗಳಿಂದ ನಡೆಸಿಕೊಂಡು ಬರಲಾಗುತ್ತಿರುವ ಐದು IIT ಸಂಸ್ಥೆಗಳು ಇಲ್ಲಿವೆ: ಮುಂಬೈ, ದಿಲ್ಲಿ, ಕಾನ್ಪುರ್, ಖರಗ್‌ಪುರ ಮತ್ತು ಚೆನ್ನೈ. 1990ರ ದಶಕದ ಮಧ್ಯಭಾಗದಲ್ಲಿ ಗೌಹಾಟಿಯಲ್ಲಿಯೂ ಒಂದು ಹೊಸ IIT ತೆರೆಯಲ್ಪಟ್ಟಿತು.

[10] ಈ ಅನುಪಾತಗಳು Rao ಅವರು ಸಂಗ್ರಹಿಸಿದ ಪ್ರವೇಶ ದಾಖಲಾತಿಯ ದತ್ತಾಂಶಗಳನ್ನು ಆಧರಿಸಿವೆ (2002:ಕೋಷ್ಟಕ 2).

ಸೀಟುಗಳಲ್ಲಿ ಅರ್ಧಕ್ಕಿಂತಲೂ ಬಹಳ ಕಡಮೆ ಸೀಟುಗಳು ಅವರಿಂದ ಭರ್ತಿಗೊಂಡಿದ್ದವು. ಆನಂತರ ಮುಂಬೈ ವೈದ್ಯಕೀಯ ಕಾಲೇಜುಗಳ ಕನಿಷ್ಠತಮ ಅರ್ಹತಾ ಮಾನದಂಡಗಳನ್ನು ಕಡಮೆ ಮಾಡಲಾಯಿತು; ಆದರೆ 1979-80 ಮತ್ತು 1980-81 ರಲ್ಲಿಯೂ ಕೇವಲ ಮೂರರಲ್ಲಿ ಒಂದು ಭಾಗದಷ್ಟು ಸಂಸ್ಥೆಗಳು ಮಾತ್ರ ತಮ್ಮ SC ಮತ್ತು ST ಮೀಸಲಾತಿ ಪಾಲನ್ನು ಭರ್ತಿ ಮಾಡಿಕೊಂಡಿದ್ದವು - ಕೆಲವು ಕಾಲೇಜುಗಳಲ್ಲಿ SC ಮತ್ತು ST ವಿದ್ಯಾರ್ಥಿಗಳೇ ಇರಲಿಲ್ಲ. ಇತ್ತೀಚಿನ ದಿನಗಳಲ್ಲಿ ಮುಂಬೈ ವೈದ್ಯಕೀಯ ಕಾಲೇಜುಗಳು ಹೆಚ್ಚು ಸಾಮಾನ್ಯವಾಗಿ ತಮ್ಮ ಮೀಸಲಾತಿ ಸೀಟುಗಳನ್ನು ಭರ್ತಿ ಮಾಡಿಕೊಳ್ಳುತ್ತಾ ಬಂದಿವೆಯಾದರೂ, ಈ ಹಿಂದೆ ಗಮನಿಸಿದಂತೆ, ಕೆಲವೊಮ್ಮೆ ಪ್ರಶ್ನಾರ್ಹ SC ಸ್ಥಾನಮಾನದವರು ಎಂದು ಹೇಳಿಕೊಳ್ಳುವಂತಹ ವಿದ್ಯಾರ್ಥಿಗಳಿಂದ ಭರ್ತಿಗೊಂಡಿರುತ್ತವೆ: ಆದರೆ ದೇಶಾದ್ಯಂತ ಇರುವ ವೈದ್ಯಕೀಯ ಕಾಲೇಜುಗಳು ಈ ವಿಷಯ ಕುರಿತಂತೆ ಇನ್ನೂ ಸಹ ಹಿಂದೆ ಬಿದ್ದಿವೆ. ವೈದ್ಯಕೀಯ ಕಾಲೇಜುಗಳಲ್ಲಿ ದಾಖಲಾತಿಯಾಗುವಂತಹ ಆ SC ವಿದ್ಯಾರ್ಥಿಗಳು ಹೆಚ್ಚಿನದಾಗಿ ಕೆಲವು ಪ್ರಬಲ ದಲಿತ ಜಾತಿ ಮತ್ತು ನಗರ ಪ್ರದೇಶಗಳಲ್ಲಿ ಜೀವನ ನಡೆಸುತ್ತಿರುವ ಸಾಪೇಕ್ಷ ಅನುಕೂಲಸ್ಥ ದಲಿತ ಕುಟುಂಬಗಳಿಂದ ಬಂದವರಾಗಿರುತ್ತಾರೆ ಮತ್ತು ಅದು ಅವರಲ್ಲಿ ಕೆಲವರನ್ನು ಖಾಸಗಿ ಮಾಧ್ಯಮಿಕ ಶಾಲೆಗಳನ್ನು ಸೇರಲು ಅನುವುಮಾಡಿಕೊಡುತ್ತದೆ. ಸಾಪೇಕ್ಷ ಸವಲತ್ತುವುಳ್ಳ ಹಿನ್ನೆಲೆಗಳನ್ನು ಹೊಂದಿರುವ ಹೆಚ್ಚಿನ ಸಂಖ್ಯೆಯ SC ಅರ್ಜಿದಾರರು ಇರುವಂತಹ ಈ ಪ್ರವೃತ್ತಿಯು ಪ್ರವೇಶ ಪಡೆಯುತ್ತಿರುವ SC ವಿದ್ಯಾರ್ಥಿಗಳ ಶೈಕ್ಷಣಿಕ ಅರ್ಹತೆಗಳ ಒಂದು ಸರಾಸರಿ ಮಟ್ಟವು ಏರುತ್ತಿರಬಹುದು ಎಂಬುದನ್ನು ಸೂಚಿಸುತ್ತದೆ.

ಕಾಲಾಂತರದಲ್ಲಿ, ಕನಿಷ್ಟ ಪಕ್ಷ ಉತ್ತಮ ಶಾಲೆಗಳಲ್ಲಿ, ಪ್ರವೇಶಾತಿ ಪರೀಕ್ಷೆಗಳಲ್ಲಿ ಮೀಸಲಾತಿ ಸೀಟುಗಳ ಮೂಲಕ ಪ್ರವೇಶ ದಾಖಲಾತಿ ಪಡೆದ SC ಮತ್ತು ST ವಿದ್ಯಾರ್ಥಿಗಳ ಸರಾಸರಿ ಅಂಕಗಳ ನಡುವಿನ ಅಂತರವನ್ನು ಸಾಮಾನ್ಯ ಪ್ರವರ್ಗದಡಿಯಲ್ಲಿ ಪ್ರವೇಶ ದಾಖಲಾತಿ ಪಡೆದ ವಿದ್ಯಾರ್ಥಿಗಳ ಸರಾಸರಿ ಅಂಕಗಳ ಅಂತರದೊಂದಿಗೆ ಹೋಲಿಸಿ ನೋಡಿದಾಗ ಅದು ಕಡಮೆಯಾಗಿದೆ ಎನ್ನುವುದಕ್ಕೆ ನಿಜಕ್ಕೂ ಕೆಲವು ಪುರಾವೆಗಳು ಇವೆ. ಇದಕ್ಕೊಂದು ಅತ್ಯುತ್ತಮ ಪುರಾವೆಯು ಪುಣೆ ವಿಶ್ವವಿದ್ಯಾಲಯಕ್ಕೆ ಸೇರಿದ ಪ್ರಖ್ಯಾತ ಪ್ರಾದೇಶಿಕ ವೈದ್ಯಕೀಯ ಕಾಲೇಜು ಆದ ಬಿ.ಜೆ ವೈದ್ಯಕೀಯ ಕಾಲೇಜಿನ ವಿದ್ಯಾರ್ಥಿಗಳ ಕುರಿತಿದ್ದ ಒಂದು ಸಮೃದ್ಧ ದತ್ತಾಂಶದ ಸಮುಚ್ಚಯವನ್ನು ಸಂಕಲಿಸಿ ವಿಶ್ಲೇಷಿಸಿದ ಪಟವರ್ಧನ್ ಮತ್ತು ಪಾಲ್ಶೀಕರ್ (1992) ಅವರ ಸಮಗ್ರ ಹಾಗೂ ವಿಸ್ತೃತ ವಿವರಗಳನ್ನು ಹೊಂದಿದ ಒಂದು ಅಸಮಾನ್ಯ ಅಧ್ಯಯನದಿಂದ ಬರುತ್ತದೆ. ಈ ಕಾಲೇಜು ಸಾಮಾನ್ಯ ಪ್ರವರ್ಗದವರವಿಗೆ ಮೀಸಲಿಟ್ಟ ಸೀಟು ಹಾಗೂ OBC, SC, ST ಮತ್ತು 'ವಿಮುಕ್ತ ಬುಡಕಟ್ಟು' (ಬುಡಕಟ್ಟು ಸಮುದಾಯಗಳ ಒಂದು ಪ್ರಾದೇಶಿಕ ಗುಂಪು) ಸಮುದಾಯಗಳಿಗೆ ಮೀಸಲಿಟ್ಟ ಸೀಟುಗಳನ್ನು ಒಳಗೊಂಡಂತೆ ಐದು ಪ್ರತ್ಯೇಕ ಪ್ರವರ್ಗಗಳ ಅಡಿಯಲ್ಲಿ ವಿದ್ಯಾರ್ಥಿಗಳನ್ನು ಸೇರಿಸಿಕೊಳ್ಳುತ್ತದೆ. ಈ ಅಧ್ಯಯನವು ಕ್ರಮವಾಗಿ 1970,1980 ಹಾಗೂ 1985 ರ ಪ್ರವೇಶ ಪರೀಕ್ಷೆಯಲ್ಲಿ ಪ್ರತೀ ಪ್ರವರ್ಗದ ವಿದ್ಯಾರ್ಥಿಗಳ ಅಂಕಗಳನ್ನು ಹೋಲಿಸಿ ನೋಡಿದಾಗ, ನಿರೀಕ್ಷೆಯಂತೆ, ಸಾಮಾನ್ಯ ಪ್ರವರ್ಗದವರಿಗಿದ್ದ ಅಂಕ ಮಿತಿಯು ಅತ್ಯಂತ ಹೆಚ್ಚಾಗಿಯೂ, ಕ್ರಮವಾಗಿ OBC, SC, ST ಹಾಗೂ ಬುಡಕಟ್ಟು ಪ್ರವರ್ಗದವರಿಗೆ ಕಡಮೆಯಾಗಿ ಇರುವುದನ್ನು ಕಂಡುಕೊಂಡಿತು.

ಆದಾಗ್ಯೂ, ಗಮನಾರ್ಹವಾಗಿ ಅಧ್ಯಯನವು ಪ್ರತೀ ಪ್ರವರ್ಗದವರ ಪ್ರವೇಶ ದಾಖಲಾತಿಯ ಅಂಕ ಮಿತಿಗಳಲ್ಲಿ ಒಂದು ಸಾಮಾನ್ಯ ಮೇಲ್ಮುಖ ಪ್ರವೃತ್ತಿಯನ್ನು ಮಾತ್ರವಲ್ಲದೆ ದಾಖಲಾತಿ ಪಡೆದ ವಿದ್ಯಾರ್ಥಿಗಳ ಅಂಕಗಳಿಗೆ ಸಂಬಂಧಿಸಿದಂತೆ ವಿವಿಧ ಪ್ರವರ್ಗಗಳ ನಡುವಿನ ಅಂತರದಲ್ಲೂ ಕೂಡ ಒಂದು ಸಾಮಾನ್ಯ ಇಳಿಕೆಯಾಗಿರುವುದನ್ನು ದಾಖಲಿಸಿತು. ಮೀಸಲಾತಿ ಗುಂಪುಗಳಿಗೆ ಸಂಬಂಧಿಸಿದಂತೆ ಪ್ರವೇಶ ದಾಖಲಾತಿಯಲ್ಲಿ ಕಂಡುಬಂದ ಅಂಕ ಮಿತಿಗಳಲ್ಲಿನ ಗಮನಾರ್ಹ ಏರಿಕೆಯು ಭಾಗಶಃ ಎರಡನೆ ತಲೆಮಾರಿನ ಪರಿಣಾಮದ ಕಾರಣದಿಂದರಬಹುದು ಎಂದು ಲೇಖಕರು ಸೂಚಿಸುತ್ತಾರೆ; ಅಂದರೆ ಪ್ರಮಾಣ ಹೆಚ್ಚಾಗುತ್ತಿರುವ OBC, SC ಮತ್ತು ST ಅರ್ಜಿದಾರರು ಶಿಕ್ಷಣ ಸಂಸ್ಥೆಗಳಲ್ಲಿ ಮೀಸಲಿಡಸಲಾದ ಸೀಟುಗಳಿಗೆ ಸ್ವಂತ ತಮಗಿದ್ದ ಲಭ್ಯಾವಕಾಶದ ಮೂಲಕ ತಮ್ಮ ಶೈಕ್ಷಣಿಕ ಹಾಗೂ ಸಮಾಜೋ-ಆರ್ಥಿಕ ಸ್ಥಾನಮಾನವನ್ನು ಸುಧಾರಿಸಿಕೊಳ್ಳಲು ಸಾಧ್ಯವಾದ ಪಾಲಕರ ಮಕ್ಕಳು ಎಂದು ಸೂಚಿಸುತ್ತಾರೆ.

**'ಕೆನೆ ಪದರ'**

ಮೀಸಲಾತಿ ನೀತಿಗಳು ಅವಕಾಶ ವಂಚಿತ ಗುಂಪುಗಳಲ್ಲಿನ ಹೆಚ್ಚು ಅಗತ್ಯವಿರುವವರಿಗೆ ಅಮೂಲ್ಯವಾದ ಶೈಕ್ಷಣಿಕ ಅವಕಾಶಗಳನ್ನು ಲಭ್ಯವಾಗಿಸುವ ಬದಲು ಪ್ರಮುಖವಾಗಿ ಅನುಕೂಲಸ್ಥ ಅರ್ಜಿದಾರರಿಗೆ, ಕೆನೆ ಪದರಕ್ಕೆ, ಲಭ್ಯವಾಗಿಸುವುದರಿಂದ ಅವು ಅಸಮಾನವೆಂದು ಭಾರತದ ಮೀಸಲಾತಿ ನೀತಿಗಳನ್ನು ಟೀಕಿಸುವವರ ಆಪಾದನೆಯಾಗಿದೆ. ಹೀಗೆ SC ಮತ್ತು ST ಅರ್ಜಿದಾರರಿಗೆಂದಿರುವ ಮೀಸಲಾತಿಗಳು ಈ ಗುಂಪುಗಳ ನಡುವೆಯೇ ಅಸಮಾನತೆಗಳನ್ನು ಹೆಚ್ಚಿಸುತ್ತದೆ, ಅಲ್ಲದೇ SC ಮತ್ತು ST ಫಲಾನುಭವಿಗಳಿಗಿಂತ ಹೀನಾಯವಾದ ಸ್ಥಿತಿಯನ್ನು ಹೊಂದಿರಬಹುದಾದ ಇತರ ಗುಂಪುಗಳಿಗೆ ಸೇರಿದ ಸಾಮಾನ್ಯ ಪ್ರವರ್ಗದಡಿಯಲ್ಲಿ ದಾಖಲಾತಿ ಪಡೆಯುವಂತಹವರಿಗೆ ಶೈಕ್ಷಣಿಕ ಅವಕಕಾಶಗಳನ್ನು ಕಡಮೆ ಮಾಡುತ್ತದೆ ಎಂಬ ವಾದವನ್ನು ಮುಂದಿಡಲಾಗುತ್ತದೆ.

ಮೀಸಲಾತಿ ನೀತಿಗಳು ಉಳಿದ ಸಮುದಾಯಗಳಿಗೆ ಸೇರಿದ ಹೆಚ್ಚು ಉಳ್ಳವರಲ್ಲದ ವಿಶ್ವವಿದ್ಯಾಲಯದ ಅರ್ಜಿದಾರರ ಬದಲು ದಲಿತ ಮತ್ತು ಆದಿವಾಸಿ ಸಮುದಾಯಗಳಲ್ಲಿನ ಉಳ್ಳವರಿಗೆ ಪ್ರಯೋಜನವಾಗುವುದರಿಂದ ಅವು ವಿಶ್ವವಿದ್ಯಾಲಯದ ಪ್ರವೇಶ ದಾಖಲಾತಿಗಳಲ್ಲಿನ ಒಟ್ಟಾರೆಯ ಅಸಮಾನತೆಯನ್ನು ಹೆಚ್ಚಿಸಿದೆ ಎನ್ನುವುದಕ್ಕೆ ಯಾವುದೇ ನೇರ ಸಂಬಂಧವಿರುವ ಪುರಾವೆಯನ್ನು ನಾನು ಕಂಡುಕೊಳ್ಳಲಿಲ್ಲ. ವಾಸ್ತವವಾಗಿ ಅಂತಹ ಅಸಮವಾದ ಮರುಹಂಚಿಕೆಯ ಪರಿಣಾಮಗಳು ಇವೆಯೇ ಎಂಬುದನ್ನು ನಿರ್ಧರಿಸಲು ನಾವು SC ಮತ್ತು ST ಫಲಾನುಭವಿಗಳ ಸಮಾಜೋ-ಆರ್ಥಿಕ ವರ್ಗ ಹಿನ್ನೆಲೆಗಳನ್ನು ಮೀಸಲಾತಿ ನೀತಿಗಳ ಕಾರಣ ವಿಶ್ವವಿದ್ಯಾಲಯದ ಪ್ರವೇಶ ದಾಖಲಾತಿಯನ್ನು ಪಡೆಯುವುದರಿಂದ ಅವಕಾಶ ವಂಚಿತರಾದ ಸಾಮಾನ್ಯ ಪ್ರವರ್ಗದಡಿಯಲ್ಲಿ ದಾಖಲಾತಿ ಪಡೆಯುವ ಅರ್ಜಿದಾರರ ವರ್ಗ ಹಿನ್ನೆಲೆಗಳೊಂದಿಗೆ ಹೋಲಿಸಿ ನೋಡಬೇಕಾಗುತ್ತದೆ;ಆದರೆ ಅಂತಹ ದತ್ತಾಂಶಗಳು ಲಭ್ಯವಿರುವ ಹಾಗೆ ಕಾಣುವುದಿಲ್ಲ. ವಿಭಾಗ 2 ರಲ್ಲಿ ಚರ್ಚಿಸಲಾದ ಪುರಾವೆಯು ವಿಶ್ವವಿದ್ಯಾಲಯಗಳ

ಕೋರ್ಸುಗಳಿಗೆ ಪ್ರವೇಶ ದಾಖಲಾತಿ ಪಡೆದವರಲ್ಲಿ SC ಮತ್ತು ST ಸಮುದಾಯಗಳಿಗೆ ಸೇರದ ವಿದ್ಯಾರ್ಥಿಗಳಿಗಿಂತ SC ಮತ್ತು ST ವಿದ್ಯಾರ್ಥಿಗಳು ಗಮನಾರ್ಹವಾಗಿ ಕಡಮೆ ಸವಲತ್ತುಗಳುಳ್ಳ ಸಮಾಜೋ-ಆರ್ಥಿಕ ಹಿನ್ನೆಲೆಗಳಿಂದ ಬಂದಿರುತ್ತಾರೆ ಎಂಬುದನ್ನು ಸ್ಪಷ್ಟ ಮಾಡುತ್ತದೆ. ಇದು ಮೀಸಲಾತಿ ನೀತಿಗಳ ಕಾರಣ ಅವಕಾಶ ವಂಚಿತರಾದ SC ಮತ್ತು ST ಸಮುದಾಯಗಳಿಗೆ ಸೇರದಿರುವಂತಹ ಅರ್ಜಿದಾರರು ಅವುಗಳಿಂದ ಪ್ರಯೋಜನ ಪಡೆದಂತಹ SC ಮತ್ತು ST ವಿದ್ಯಾರ್ಥಿಗಳಿಗಿಂತ ಕಡಮೆ ಸವಲತ್ತುವುಳ್ಳವರಾಗಿರುವ ಸಾಧ್ಯತೆ ಇಲ್ಲ ಎಂಬುದನ್ನು ಸೂಚಿಸುತ್ತದೆ.

SC ಮತ್ತು ST ಸಮುದಾಯಗಳಲ್ಲಿ ಮೀಸಲಾತಿ ನೀತಿಗಳ ಮರುಹಂಚಿಕೆಯ ಪರಿಣಾಮಗಳನ್ನು ಕುರಿತು ಯಾವುದೇ ಪುರಾವೆಗಳ ಅಭಾವವಿಲ್ಲ. ಭಾರತದ ವಿಶ್ವವಿದ್ಯಾಲಯಗಳ ಪ್ರವೇಶ ದಾಖಲಾತಿಯಲ್ಲಿನ ಮೀಸಲಾತಿ ನೀತಿಗಳಿಂದ ಪ್ರಯೋಜನ ಪಡೆಯುವ ಅಧಿಕ ಸಂಖ್ಯೆಯ ಫಲಾನುಭವಿಗಳು ನಿಜವಾಗಿಯೂ ದಲಿತ ಹಾಗೂ ಆದಿವಾಸಿ ಸಮುದಾಯದ ಒಂದು ಕೆನೆ ಪದರದವರೇ ಎಂಬುದರಲ್ಲಿ ಯಾವುದೇ ಸಂಶಯವಿಲ್ಲ. ಕೆಲವು ಅಪವಾದಗಳನ್ನು ಹೊರತು ಪಡಿಸಿದರೆ ದಲಿತ ಹಾಗೂ ಆದಿವಾಸಿ ಸಮುದಾಯಗಳಲ್ಲಿಯ ಉಳ್ಳವರ ಕುಟುಂಬಗಳಿಂದ ಬಂದಂತಹ ಮಕ್ಕಳಿಗೆ ಮಾತ್ರವೇ ಮಾಧ್ಯಮಿಕ ಶಿಕ್ಷಣವನ್ನು ಪೂರ್ಣಗೊಳಿಸುವವರೆಗೂ ಶಾಲೆಯಲ್ಲಿ ಉಳಿಯಲು ಸಾಧ್ಯವಾಗುತ್ತಿದೆ ಹಾಗೂ ಆದ್ದರಿಂದ ಕಾಲೇಜು ಅಥವಾ ವಿಶ್ವವಿದ್ಯಾಲಯಗಳಿಗೆ ಸೇರಿಕೊಳ್ಳುವ ಸ್ಥಿತಿಯಲ್ಲಿರುತ್ತಾರೆ. ಮಹಾರಾಷ್ಟ್ರದ ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಗಳಲ್ಲಿ ಪ್ರಾಥಮಿಕ ಶಿಕ್ಷಣವನ್ನು ಪೂರ್ಣಗೊಳಿಸುವ ಮುನ್ನವೇ ಶಾಲೆಯನ್ನು ತೊರೆಯುವ (wastage) ಹಾಗೂ ಒಂದು ವರ್ಷಕ್ಕಿಂತ ಹೆಚ್ಚಿನದಾಗಿ ಅದೇ ತರಗತಿಯಲ್ಲಿ ಉಳಿಯುವ (stagnation) ಮಕ್ಕಳ ಕುರಿತು ಹೆನ್ರೀಕಿಸ್ (Henriques) ಮತ್ತು ವಾಂಖೆಡೆ (Wankhede) (1985) ಮಾಡಿದ ಒಂದು ವಿಸ್ತಾರವಾದ ಅಧ್ಯಯನದಲ್ಲಿ ಅವರು ತಮ್ಮ ಮಾಧ್ಯಮಿಕ ಶಿಕ್ಷಣವನ್ನು ಪೂರ್ಣಗೊಳಿಸುವ SC ಮತ್ತು ST ವಿದ್ಯಾರ್ಥಿಗಳಲ್ಲಿ ಬಾಲಕಿಯರಿಗಿಂತ ಹೆಚ್ಚಿನದಾಗಿ ಬಾಲಕರೇ ಆಗಿರುತ್ತಾರೆ, ಮತ್ತು ಹೆಚ್ಚಿನದಾಗಿ ಅವರು ದಲಿತ ಹಾಗೂ ಆದಿವಾಸಿ ಸಮುದಾಯಗಳ ಅತ್ಯಂತ ಮೇಲ್ಸ್ತರದ ಸಮಾಜೋ-ಆರ್ಥಿಕ ಹಿನ್ನೆಲೆಯಿಂದ ಬರುತ್ತಾರೆ ಎಂದು ತೋರಿಸುತ್ತಾರೆ. ಉನ್ನತ ಶಿಕ್ಷಣವು ಸಂಭಾವ್ಯ ಆದಾಯಕ್ಕೆ ಕಡಿವಾಣ ಬೀಳುವುದನ್ನು ಪ್ರತಿನಿಧಿಸುತ್ತದೆ ಹಾಗೂ ಶಿಕ್ಷಣವು ಬೇಡುವ ಸಾಮಗ್ರಿಗಳ ಪೂರೈಕೆ, ವಾಸ ಮತ್ತು ಸಂಚಾರ ವ್ಯವಸ್ಥೆಯ ಖರ್ಚುಗಳನ್ನು ವಿದ್ಯಾರ್ಥಿಗಳೇ ಭರಿಸಬೇಕಾಗುತ್ತದೆ ಎಂಬ ಸಂಗತಿಯು ( ಸರ್ಕಾರಿ ನೆರವಿನ ಕಾರ್ಯಕ್ರಮಗಳು ಇವುಗಳನ್ನು ಸಂಪೂರ್ಣವಾಗಿ ಭರಿಸುವ ಸಾಧ್ಯತೆ ಬಹಳ ವಿರಳ), ಮುಖ್ಯವಾಗಿ ಒಂದು ಶೈಕ್ಷಣಿಕ ಸಂಸ್ಥೆಯಲ್ಲಿ ಅತ್ಯಂತ ಅನುಕೂಲವಿರುವ ವಿದ್ಯಾರ್ಥಿಗಳಿಗೆ ಮಾತ್ರ ಮಾಧ್ಯಮಿಕ ಶಿಕ್ಷಣ ಮುಗಿಸಿದ ನಂತರದ ಹಲವಾರು ವರ್ಷಗಳನ್ನು ಕಳೆಯಲು ಸಾಧ್ಯವುಗುವುದು ಎಂದು ಸೂಚಿಸುತ್ತದೆ.

ವೆಲಾಸ್ಕರ್ (1986:604) ಗಮನಿಸುವ ಹಾಗೆ, "... ಈ (ಮೀಸಲಾತಿಗಳ) ನೀತಿಯು ಸ್ಥಿರವಾಗಿ ದಲಿತ ಸಮುದಾಯದ ಸಾಪೇಕ್ಷ ಸವಲತ್ತುವುಳ್ಳವರಲ್ಲಿ ಸಾಧಾರಣ ಗುಣಮಟ್ಟದ ಸಾಧನೆಗೈವ ವಿದ್ಯಾರ್ಥಿಗಳಿಗೆ

ಲಭ್ಯಾವಕಾಶವನ್ನು ಪಡೆಯಲು ಒಂದು ಮಾರ್ಗವಾಗಿದೆ ಎನ್ನುವುದು ಸುಸ್ಪಷ್ಟ." ಮುಂದುವರೆದು, SC ವಿದ್ಯಾರ್ಥಿಗಳಲ್ಲಿ ಸಣ್ಣ ಪ್ರಮಾಣದವರು ಸಾಮಾನ್ಯ ಪ್ರವರ್ಗದಡಿಯಲ್ಲಿ ಪ್ರವೇಶ ಪಡೆಯುವ ವಿದ್ಯಾರ್ಥಿಗಳ ಸಮಕ್ಕೆ ಸಾಧನೆ ಮಾಡುವರಾಗಿರುತ್ತಾರೆ; ಈ ಉನ್ನತ ಸಾಧನೆ ಮಾಡುವವರು ಸಾಮಾನ್ಯವಾಗಿ ಉತ್ತಮ ಆರ್ಥಿಕ ಪರಿಸ್ಥಿತಿಯ ಕುಟುಂಬಗಳಿಂದ ಮತ್ತು ಇಂಗ್ಲಿಷ್ ಮಾಧ್ಯಮದ ಪ್ರೌಢ ಶಾಲೆಗಳಿಂದ ಬಂದವರಾಗಿರುತ್ತಾರೆ ಎಂಬುದನ್ನು ಸಹ ಅವರು ಗಮನಿಸುತ್ತಾರೆ. ಮೀಸಲಾತಿಗಳು ನಗರ ಪ್ರದೇಶದಲ್ಲಿನ ಗಂಡು ಮಕ್ಕಳಿಗೆ ಪ್ರಯೋಜನಕಾರಿಯಾಗಿರುತ್ತವೆ, ಮತ್ತು ಅವು ಅಸಮವಾಗಿ SC ಸಮುದಾಯದಲ್ಲಿನ ಒಂದು ಸಣ್ಣ ಪ್ರಮಾಣದ ಉಪ-ಜಾತಿಗಳನ್ನು ಹಾಗೂ ST ಸಮುದಾಯದಲ್ಲಿನ ಕೆಲವು ನಿರ್ದಿಷ್ಟ ಬುಡಕಟ್ಟು ಗುಂಪುಗಳಿಗೆ ಮಾತ್ರ ಪ್ರಯೋಜನಕಾರಿಯಾಗಿದೆ ಎಂದು ಪಟವರ್ಧನ್ ಮತ್ತು ಪಾಲ್ಶೀಕರ್ (1992) ತೀರ್ಮಾನಕ್ಕೆ ಬರುತ್ತಾರೆ. ಮುಂದುವರೆದು, ಮೀಸಲಾತಿ ಸೀಟುಗಳ ಫಲಾನುಭವಿಗಳು ಹೆಚ್ಚು ಹೆಚ್ಚು ಸಕಾರಾತ್ಮಕ ತಾರತಮ್ಯತೆಯ ಪ್ರಯೋಜನವನ್ನು ಪಡೆದ ಮಧ್ಯಮ ಮತ್ತು ಮೇಲ್ಮಧ್ಯಮ ವರ್ಗಕ್ಕೆ ಸೇರಿದ ಕುಟುಂಬಗಳಾದ ಬೆಂಬಲಿತ ಗುಂಪುಗಳಿಂದ ಬಂದಿರುವಂತಹ ಎರಡನೆಯ ತಲೆಮಾರಿನ ಕಲಿಕಾರ್ಥಿಗಳಾದರೆ ಹೆಚ್ಚು ಹಿಂದುಳಿದ ಉಪ-ಜಾತಿಗಳು ಮತ್ತು ಪಂಗಡಗಳಿಂದ ಬಂದಿರುವಂತಹ ವಿದ್ಯಾರ್ಥಿಗಳು ಸ್ಪರ್ಧಿಸಲು ಕಷ್ಟಪಡುತ್ತಾರೆ ಎಂದು ಅವರು ಸೂಚಿಸುತ್ತಾರೆ. ಪ್ರತಿಷ್ಠಿತ IIT ಗಳಲ್ಲಿನ ಅನುಭವವು ಈ ಪ್ರತಿಪಾದನೆಗೆ ಸ್ಪಷ್ಟವಾದ ಪ್ರಾಯೋಗಿಕ ದೃಢೀಕರಣವನ್ನು ಒದಗಿಸುತ್ತದೆ: 1989 -1992 ರ ಅವಧಿಯಲ್ಲಿ IIT-BTech ಗೆ ಪ್ರವೇಶ ದಾಖಲಾತಿ ಪಡೆದ ಅವರ ವಿದ್ಯಾರ್ಥಿಗಳ ಮಾದರಿಯಲ್ಲಿ 40% SC ಮತ್ತು ST ವಿದ್ಯಾರ್ಥಿಗಳು ಎರಡನೆಯ ತಲೆಮಾರಿನ ಫಲಾನುಭವಿಗಳಾಗಿದ್ದರು ಎಂಬುದನ್ನು ಕಿರ್ಪಾಲ್ (Kirpal) ಮತ್ತು ಗುಪ್ತಾ (Gupta) (1999:148) ಕಂಡುಕೊಂಡರು - ನಿಸ್ಸಂದೇಹವಾಗಿ ಇದು 1970 ರ ದಶಕದ ಪೂರ್ವಾರ್ಧದಲ್ಲಿ ಮೀಸಲಾತಿ ಸೀಟುಗಳ ಮೂಲಕ ಪ್ರವೇಶ ದಾಖಲಾತಿ ಪಡೆಯುತ್ತಿದ್ದ ಶೇಕಡಾವಾರಿಗಿಂತ ಬಹಳಷ್ಟು ಹೆಚ್ಚಿನ ಪ್ರಮಾಣವಾಗಿತ್ತು.

ರಾವ್ ಮೇಲಿನ ಅವಲೋಕನಗಳನ್ನು ತಮ್ಮ ಲೇಖನದಲ್ಲಿ ಹೀಗೆ ದೃಢೀಕರಿಸುತ್ತಾರೆ, "...ಗುಂಪು-ಗೂಡುವುದನ್ನು ಹೋಗಲಾಡಿಸಬೇಕೆಂಬ ಉದ್ದೇಶದಿಂದ ಪ್ರಾರಂಭಿಸಿದ್ದ ಮೀಸಲಾತಿಯ ಯೋಜನೆಗಳು ಮತ್ತದೇ ರೀತಿಯ ಗುಂಪುಗಳನ್ನು ಫಲಾನುಭವಿಗಳಲ್ಲಿ ಮರುಸೃಷ್ಟಿಸುವ ಪ್ರವೃತ್ತಿಯನ್ನು ಹೊಂದಿವೆ...ಫಲಾನುಭವಿಗಳಲ್ಲಿ ಈಗಾಗಲೇ ಅತ್ಯಂತ ಮಹತ್ವದ ಅನುಕೂಲತೆಗಳನ್ನು ಅನುಭವಿಸುತ್ತಿರುವವರೇ ಅಸಂತುಲಿತ ಪ್ರಮಾಣದಲ್ಲಿ ಪ್ರಯೋಜನಗಳ ಅಧಿಕ ಪಾಲನ್ನು ಪಡೆದುಕೊಳ್ಳುತ್ತಿದ್ದಾರೆ" (ರಾವ್ 2001:51). ಈ ಪ್ರಕ್ರಿಯೆಯು ಉಪ-ಜಾತಿ ಹಾಗೂ ಪಂಗಡಗಳ ನಡುವೆ ಮಾತ್ರವಲ್ಲದೆ SC ಮತ್ತು ST ಗುಂಪುಗಳಲ್ಲಿನ ವಿವಿಧ ಸಮಾಜೋ-ಆರ್ಥಿಕ ಸ್ತರಗಳ ನಡುವೆಯೂ ಸಹ ನಡೆಯುತ್ತದೆ. ಇದು ಹೆಚ್ಚು ಉಳ್ಳವರಲ್ಲದ ಉಪ-ಜಾತಿ ಮತ್ತು ಪಂಗಡಗಳು (ಸಾಮಾನ್ಯವಾಗಿ ಕೆಲವು ಮೀಸಲಾತಿ ಸೀಟುಗಳನ್ನು ಪಡೆದುಕೊಳ್ಳುವವರು) ಸ್ವಂತ ತಮ್ಮದೇ ಪ್ರತ್ಯೇಕವಾದ ಮೀಸಲಾತಿ

ಪ್ರವರ್ಗವನ್ನು ಪಡೆಯಲು ಅರ್ಹರಾಗಲು ಅನುವು ಮಾಡಿಕೊಡಬಹುದಾದ್ದರಿಂದ ಉಪ-ಪ್ರವರ್ಗಗಳಲ್ಲಿಯೇ ಒಳ ಮೀಸಲಾತಿ ಇರುವಂತಹ ಮೀಸಲಾತಿ ಸೀಟುಗಳನ್ನು ಸೃಷ್ಟಿಸಬೇಕೆಂಬ ಕರೆಗೆ ಕಾರಣವಾಗಿದೆ.[11]

ವಿಶ್ವವಿದ್ಯಾಲಯದ ಪ್ರವೇಶ ದಾಖಲಾತಿ ಪ್ರಕ್ರಿಯೆಯಲ್ಲಿನ ಮೀಸಲಾತಿ ನೀತಿಗಳು, ಕನಿಷ್ಠ ಅವುಗಳ ನೇರ ಪರಿಣಾಮದಲ್ಲಿ, ದಲಿತ ಮತ್ತು ಆದಿವಾಸಿ ಸಮುದಾಯಗಳಲ್ಲಿನ ಉತ್ತಮ ಅನುಕೂಲತೆಗಳನ್ನು ಹೊಂದಿದ ವ್ಯಕ್ತಿಗಳು ಮತ್ತು ಉಪಗುಂಪುಗಳಿಗೆ ಮುಖ್ಯವಾಗಿ ಪ್ರಯೋಜನಗಳನ್ನು ಒದಗಿಸುವ ಮೂಲಕ ಆ ಸಮುದಾಯಗಳಲ್ಲಿ ಅಸಮಾನತೆಯನ್ನು ಹೆಚ್ಚಿಸಿದೆ ಎಂಬ ವಾದವಿವಾದವನ್ನು ಸ್ಪಷ್ಟವಾಗಿ ದೃಢೀಕರಿಸುವ ಪುರಾವೆಗಳಿವೆ. ಆದಾಗ್ಯೂ, ಸಕಾರಾತ್ಮಕ ತಾರತಮ್ಯತೆಯ ನೀತಿಗಳು ಹೆಚ್ಚು ಪರಿಣಾಮಕಾರಿಯಾಗಿ ಹಾಗೂ ವ್ಯಾಪಕವಾಗಿ ತಮ್ಮ ಹೆಚ್ಚು ಅನುಕೂಲರಸ್ಥರಲ್ಲದ ಬಂಧುಗಳಿಗೆ ಹಾಗೂ ಸಮುದಾಯದವರಿಗೆ ಕೆಲಸ ನೀಡಲು, ಬೆಂಬಲಿಸಲು ಮತ್ತು ಬೇರೆ ರೀತಿಗಳಲ್ಲಿ ಅವರ ನೆರವಿಗೆ ಬರುವಷ್ಟರ ಮಟ್ಟಿಗೆ, ನೇರವಾಗಿ ಪ್ರಯೋಜನ ಪಡೆದ ಫಲಾನುಭವಿಗಳನ್ನು ಆ ಮೂಲಕ ಸಮರ್ಥರನ್ನಾಗಿ ಮಾಡಿದ್ದಲ್ಲಿ ಅವು ಫಲಾನುಭವಿಗಳ ಗುಂಪುಗಳ ಹೆಚ್ಚು ಅನುಕೂಲರಸ್ಥರಲ್ಲದವರಿಗೆ ಪರೋಕ್ಷವಾಗಿ ಪ್ರಯೋಜನ ನೀಡಬಹುದು. ಭಾರತದಲ್ಲಿ ಅಂತಹ ಪರೋಕ್ಷ ಪ್ರಯೋಜನಗಳ ಪ್ರಾಯೋಗಿಕ ಮಹತ್ವವಿರುವುದು ತೀವ್ರ ಚರ್ಚೆಗೆ ಗ್ರಾಸವಾಗಿದೆ.

ಮೀಸಲಾತಿ ನೀತಿಗಳು ಸ್ವಂತ ತಮ್ಮ ಸಣ್ಣತನದ ಬೆಳವಣಿಗೆಯನ್ನಷ್ಟೇ ನೋಡುವ ಮತ್ತು ವ್ಯಾಪಕವಾದ ದಲಿತ ಸಮುದಾಯದವರ ಕುರಿತು ಕಾಳಜಿ ತೋರದ ಪ್ರತಿಷ್ಠಿತ ಸವಲತ್ತುವುಳ್ಳ ದಲಿತ ವರ್ಗವೊಂದನ್ನು ಸೃಷ್ಟಿಸಲು ಕಾರಣವಾಗಿವೆ ಎಂದಿರುವ ಸಾಮಾನ್ಯ ಅಭಿಪ್ರಾಯವನ್ನು 'ಹರಿಜನ ಪ್ರತಿಷ್ಠಿತರನ್ನು' ಕುರಿತು ಸಚ್ಚಿದಾನಂದ (Sacchidananda) (1977) ಅವರು ಮಾಡಿದ ಅಧ್ಯಯನವು ದೃಢೀಕರಿಸುತ್ತದೆ. ಸ್ವತಃ ದಲಿತರಲ್ಲೇ ಕೆಲವರು ಈ ರೀತಿಯ ಟೀಕೆಗಳನ್ನು ಮಾಡಲು ಆರಂಭಿಸಿದ್ದು, ಅವರು ಮೀಸಲಾತಿ ಸ್ಥಾನಗಳನ್ನು ತುಂಬಿದ SC ಸಮುದಾಯದವರು ಕೀಳು ಎಂದು ಅಂತಹವರಿಗೆ ಅಂಟಿಕೊಳ್ಳುವ ಕಳಂಕದ ಬಗ್ಗೆಯೂ ಕೂಡ ಕಾಳಜಿ ವ್ಯಕ್ತಪಡಿಸಿರುತ್ತಾರೆ. ಆದರೆ ಸಂಸತ್ತಿಗೆ ಆಯ್ಕೆಯಾದ ದಲಿತ ಸಮುದಾಯದವರೊಂದಿಗೆ ನಡೆಸಿದ ಸಂದರ್ಶನಗಳ ಕುರಿತು ವರದಿ ಮಾಡಿದಲ್ಲಿ ಮೆಂಡಲ್ಸನ್

---

[11] ಮಲ ಮತ್ತು ಮಾದಿಗರೆಂಬ ಆಂಧ್ರಪ್ರದೇಶದಲ್ಲಿರುವ ಎರಡು ಪ್ರಧಾನ ದಲಿತ ಸಮುದಾಯಗಳ ಉದಾಹರಣೆಯನ್ನು ಒಂದು ಉಪಯುಕ್ತ ನಿದರ್ಶನವನ್ನಾಗಿ Rao (2002:56) ಚರ್ಚಿಸುತ್ತಾರೆ. ಅವುಗಳಲ್ಲಿ ಮಲ ಸಮುದಾಯವು ಪ್ರಮುಖವಾಗಿ ಕೃಷಿ ಕೂಲಿ ಕಾರ್ಮಿಕರಾಗಿದ್ದು ಪ್ರಾಣಿಗಳ ಚರ್ಮದೊಂದಿಗೆ ಕೆಲಸ ಮಾಡುವ ಮಾದಿಗರಿಗಿಂತ ತಾವು ಉತ್ತಮ ಎಂಬ ಮೇಲರಿಮೆಯ ಭಾವನೆಯನ್ನು ಹೊಂದಿರುತ್ತಾರೆ. ಮಲ ಸಮುದಾಯವು ಯಾವಾಗಲೂ ಶಾಲಾ ಶಿಕ್ಷಣಕ್ಕೆ ಹೆಚ್ಚು ಗಣನೀಯ ಪ್ರಮಾಣದಲ್ಲಿ ಲಭ್ಯಾವಕಾಶವನ್ನು ಹೊಂದಿದೆ, ಮತ್ತು ಮಾದಿಗರಿಗೆ ಹೋಲಿಸಿದರೆ ಅವರು ಈಗ ಉನ್ನತ ಶಿಕ್ಷಣದಲ್ಲಿನ ಮೀಸಲಾತಿ ಸೀಟುಗಳಿಗೆ ಸಂಬಂಧಿಸಿದಂತೆ ಸಿಂಹಪಾಲನ್ನು ದಕ್ಕಿಸಿಕೊಂಡಿದ್ದಾರೆ.

ಮತ್ತು ವಿಟ್ಜಿಯಾನಿ (1998:ಅಧ್ಯಾಯ 8), ತಾವು ಗಣ್ಯರು ಎಂದು ತಮ್ಮ ಬಗ್ಗೆ ಯಾವುದೇ ರೀತಿಯ ಒಂದು ಅಭಿಪ್ರಾಯವನ್ನು ಕೊಡುವುದರ ಬದಲು ಸ್ವತಃ ಅವರೇ ಅನೇಕವೇಳೆ ತಮ್ಮ ವೈಯಕ್ತಿಕ ಜೀವನದಲ್ಲಿ ಭೌತ ಹಾಗೂ ಸಾಮಾಜಿಕ ಕೊರತೆ ಹಾಗೂ ಒಂದು ಪ್ರತಿಕೂಲವಾದ ಅಧಿಕಾರ ವ್ಯವಸ್ಥೆಯ ವಿರುದ್ಧ ಹೆಣಗಾಡುತ್ತಿರುತ್ತಾರೆ ಎಂದು ಅವರು ಸೂಚಿಸುತ್ತಾರೆ. ಮೀಸಲಾತಿ ನೀತಿಗಳು ಒಂದು ನಿರ್ದಿಷ್ಟವಾದ ಸ್ವಾರ್ಥ ಹಾಗೂ ಕಾಳಜಿಯಿರದ ದಲಿತ ಸಮುದಾಯದ ರಾಜಕಾರಣಿಗಳನ್ನು ಸೃಷ್ಟಿಸಿದೆ ಎನುವುದಕ್ಕೆ ಮೆಂಡಲ್ಸನ್ ಮತ್ತು ವಿಟ್ಜಿಯಾನಿ ಯಾವುದೇ ಪುರಾವೆಯನ್ನು ಕಂಡುಕೊಳ್ಳಲಿಲ್ಲ; ಬದಲಿಗೆ, ಅವರು ಸಚ್ಚಿದಾನಂದರವರ ತೀರ್ಮಾನವನ್ನು ಬುಡಮೇಲು ಮಾಡುವುದರೆಡೆಗೆ ಒಲವು ತೋರುತ್ತಾ ಹೀಗೆ ಅಭಿಪ್ರಾಯ ಪಡುತ್ತಾರೆ: ತಮ್ಮ ಸ್ವಂತ ಸಮುದಾಯಗಳ ನಾಯಕರಾಗಿ ಪ್ರಬಲ ಹಾಗೂ ಹೆಚ್ಚು ಸ್ವತಂತ್ರವುಳ್ಳ ಪಾತ್ರವನ್ನು ವಹಿಸಲು ಅನುವುಮಾಡಿಕೊಡುವುದರಿಂದ "ದಲಿತರಲ್ಲಿ ಒಂದು ಹೆಚ್ಚು ಸವಲತ್ತುವುಳ್ಳ ಗುಂಪು ಸೃಷ್ಟಿಯಾದರೆ ಅದು ಸಾಮಾನ್ಯ ದಲಿತ ಸಮುದಾಯಕ್ಕೆ ಪ್ರಯೋಜನವಾಗಬಹುದು" (ಪು.255).

## II

## ಭಾರತದ ವಿಶ್ವವಿದ್ಯಾಲಯಗಳಲ್ಲಿ ಮೀಸಲಾತಿ ನೀತಿಗಳು ಮತ್ತು ಶೈಕ್ಷಣಿಕ ಸಾಧನೆ

### ಮೀಸಲಾತಿ ನೀತಿಯ ಫಲಾನುಭವಿಗಳ ಶೈಕ್ಷಣಿಕ ಸಾಧನೆ

ಉನ್ನತ ಶಿಕ್ಷಣದಲ್ಲಿ SC ಮತ್ತು ST ವಿದ್ಯಾರ್ಥಿಗಳ ಶೈಕ್ಷಣಿಕ ಸಾಧನೆ ಕುರಿತಿರುವ ದತ್ತಾಂಶಗಳ ಲಭ್ಯತೆಯು ದುರದೃಷ್ಟವಶಾತ್ ಬಹಳ ಸೀಮಿತವಾಗಿದೆ. ಹೆಚ್ಚಿನ ಸಂದರ್ಭಗಳಲ್ಲಿ ಈ ದತ್ತಾಂಶಗಳು ಕೇವಲ ಮೀಸಲಾತಿ ಸೀಟುಗಳನ್ನು ಪಡೆದ SC ಮತ್ತು ST ವಿದ್ಯಾರ್ಥಿಗಳಿಗಷ್ಟೇ ಕಟ್ಟುನಿಟ್ಟಾಗಿ ಅನ್ವಯವಾಗುತ್ತವೆ. ಇತರ ಕೆಲವು SC ಮತ್ತು ST ವಿದ್ಯಾರ್ಥಿಗಳನ್ನು ಅದು ಒಳಗೊಂಡರೂ ಸಹ ಅವು ಸಾಮಾನ್ಯವಾಗಿ ಕಡಮೆ ಸಂಖ್ಯೆಯಲ್ಲಿರುತ್ತವೆ; ಹೀಗಾಗಿ ಒಟ್ಟಾರೆಯ ದತ್ತಾಂಶಗಳು ಮೀಸಲಾತಿ ನೀತಿಗಳಿಂದ ಪ್ರಯೋಜನ ಪಡೆದ ವಿದ್ಯಾರ್ಥಿಗಳ ಅನುಭವವನ್ನಷ್ಟೇ ಬಿಂಬಿಸುವ ಹೆಚ್ಚು ಸಾಧ್ಯತೆ ಇದೆ. ಕಾಲಾನುಕ್ರಮದಲ್ಲಿ, ಮುಂದಿನ ಕೆಲವು ಪ್ಯಾರಾಗಳಲ್ಲಿ ನಾನು ಹೆಚ್ಚು ಸಂಬಂಧಿತ ಅಧ್ಯಯನ ಹಾಗೂ ಶೋಧಕಗಳನ್ನು ಕುರಿತು ವರದಿ ಮಾಡುತ್ತೇನೆ.

ಉನ್ನತ ಶೈಕ್ಷಣಿಕ ಸಂಸ್ಥೆಗಳಲ್ಲಿ SC ಮತ್ತು ST ವಿದ್ಯಾರ್ಥಿಗಳ ಶೈಕ್ಷಣಿಕ ಸಾಧನೆಯನ್ನು ಕುರಿತು ಮಾಡಿದ ಆರಂಭದ ವ್ಯವಸ್ಥಿತ ಅಧ್ಯಯನಗಳು 1960 ರ ಉತ್ತರಾರ್ಧ ಮತ್ತು 1970 ರ ಪೂರ್ವಾರ್ಧದಲ್ಲಿ ಸಂಗ್ರಹಿಸಿದ ದತ್ತಾಂಶಗಳನ್ನು ಆಧರಿಸಿವೆ. 1965-66 ರ ಶೈಕ್ಷಣಿಕ ಅವಧಿಯಲ್ಲಿ 15 ವಿಶ್ವವಿದ್ಯಾಲಯಗಳನ್ನು ಕುರಿತು UGC (University Grants Commission (ವಿಶ್ವವಿದ್ಯಾಲಯ

ಅನುದಾನ ಆಯೋಗ - ಯುಜಿಸಿ)) ಮಾಡಿದ ಸಮೀಕ್ಷೆಯೊಂದನ್ನು ಕಾರ್ಲೇಕರ್ (Karlekar) (1975) ವರದಿ ಮಾಡಿದ್ದು ಅದರ ಪ್ರಕಾರ, ವಿವಿಧ ಬಗೆಯ ಪದವಿ ಮತ್ತು ಸ್ನಾತಕೋತ್ತರ ಕ್ಷೇತ್ರಗಳಿಗೆ ಸಂಬಂಧಿಸಿದಂತೆ ಒಟ್ಟು 4,100 SC ವಿದ್ಯಾರ್ಥಿಗಳಲ್ಲಿ ಕೇವಲ 36% ವಿದ್ಯಾರ್ಥಿಗಳು ಮಾತ್ರ ಉತ್ತೀರ್ಣರಾಗಿದ್ದರು. ನಿಗದಿಪಡಿಸಿದ ನಾಲ್ಕು ವರ್ಷಗಳಲ್ಲಿ ಕೇವಲ 8% SC ಮತ್ತು ST ವಿದ್ಯಾರ್ಥಿಗಳು ತಮ್ಮ ಕಾಲೇಜು ಪದವಿಯನ್ನು ಪಡೆದರು ಮತ್ತು ಒಟ್ಟಾರೆ ಕೇವಲ 15% ವಿದ್ಯಾರ್ಥಿಗಳು ಮಾತ್ರ ಅಂತಿಮವಾಗಿ ತಮ್ಮ ಪದವಿಯನ್ನು ಪಡೆದರು ಎಂದು 1969 ರಲ್ಲಿ ಮಹಾರಾಷ್ಟ್ರ ಸಮಾಜ ಕಲ್ಯಾಣ ಅಭಿವೃದ್ಧಿಯ ಅಧ್ಯಯನವೊಂದು ಕಂಡುಕೊಂಡದ್ದನ್ನು ಗ್ಯಾಲಂಟರ್ (Galanter) (1984:63) ಉಲ್ಲೇಖಿಸುತ್ತಾರೆ. ಹಾಗೆ ಪದವಿ ಪಡೆದವರಲ್ಲಿಯೂ ಕೂಡ ಸರಾಸರಿ ಬಹಳಷ್ಟು ಕಡಮೆ ಅಂಕಗಳನ್ನು ಪಡೆದವರೇ ಇದ್ದರು. 1960ರ ಉತ್ತರಾರ್ಧದಲ್ಲಿ ಚಿಟ್ನಿಸ್ (Chitnis) (1981) ಮುಂಬೈಯಲ್ಲಿನ ಕಲಾ ಮತ್ತು ವಿಜ್ಞಾನ ಕಾಲೇಜುಗಳನ್ನು ಸಮೀಕ್ಷೆ ಮಾಡಿದ್ದು ಅವರು ಅಲ್ಲಿನ ಹೆಚ್ಚಿನ SC ವಿದ್ಯಾರ್ಥಿಗಳು ಹೆಚ್ಚಿನ ಸ್ಥಳೀಯ ಕಾಲೇಜು ವಿದ್ಯಾರ್ಥಿಗಳು ತೆಗೆದುಕೊಳ್ಳುವ ಮುಂಬೈ ವಿಶ್ವವಿದ್ಯಾಲಯದ ಪರೀಕ್ಷೆಗಳಲ್ಲಿ ಹೆಚ್ಚು ಯಶಸ್ಸು ಕಾಣದಂತಹ ವಿದ್ಯಾರ್ಥಿಗಳನ್ನು ಹೊಂದಿದ್ದ ಕಾಲೇಜುಗಳಲ್ಲಿ ದಾಖಲಾತಿಯಾಗಿದ್ದರು ಎಂಬುದನ್ನು ಕಂಡುಕೊಂಡರು. ಯಾವುದೇ ಒಂದು ದತ್ತ ಕಾಲೇಜಿನಲ್ಲಿ SC ವಿದ್ಯಾರ್ಥಿಗಳ ಸರಾಸರಿ ಶೈಕ್ಷಣಿಕ ಸಾಧನೆಯನ್ನು SC ಪ್ರವರ್ಗಕ್ಕೆ ಸೇರದ ವಿದ್ಯಾರ್ಥಿಗಳಿಗೆ ಹೋಲಿಸಿದಾಗ ಅದು ಸ್ಪಷ್ಟವಾಗಿ ಕಳಪೆಯಾಗಿತ್ತು; ಮತ್ತು SC ವಿದ್ಯಾರ್ಥಿಗಳಲ್ಲಿ ಪ್ರಾಥಮಿಕ ಶಿಕ್ಷಣವನ್ನು ಪೂರ್ಣಗೊಳಿಸುವ ಮುನ್ನವೇ ಶಾಲೆಯನ್ನು ತೊರೆಯುವ (wastage) ಹಾಗೂ ಒಂದು ವರ್ಷಕ್ಕಿಂತ ಹೆಚ್ಚಿನದಾಗಿ ಅದೇ ತರಗತಿಯಲ್ಲಿ ಉಳಿಯುವ (stagnation) ಪ್ರಮಾಣವು ಅತಿ ಹೆಚ್ಚಾಗಿತ್ತು.

ಇಂಡಿಯನ್ ಕೌನ್ಸಿಲ್ ಆಫ್ ಸೋಶಿಯಲ್ ಸೈನ್ಸ್ ರಿಸರ್ಚ್ (ಐಸಿಎಸ್ಎಸ್ಆರ್- (Indian Council of Social Science Research (ICSSR)) ಸಂಸ್ಥೆಯು ಪ್ರಾಯೋಜಿಸಿದ ಒಂದು ಪ್ರಮುಖ ಸಂಶೋಧನಾ ಪ್ರಾಯೋಜನೆಯಲ್ಲಿ, 1972-73 ರಲ್ಲಿ ಭಾರತದ 15 ರಾಜ್ಯಗಳ ಪ್ರೌಢಶಾಲೆ ಮತ್ತು ಕಾಲೇಜುಗಳಲ್ಲಿ ಓದುತ್ತಿದ್ದ SC ಮತ್ತು ST ವಿದ್ಯಾರ್ಥಿಗಳನ್ನು ಕುರಿತು ಒಂದು ವ್ಯವಸ್ಥಿತ ಸಮೀಕ್ಷೆಯನ್ನು ನಡೆಸಲಾಯಿತು. ಈ ಅಧ್ಯಯನದ ಶೋಧಕಗಳ ಕುರಿತು ವರದಿಯನ್ನು ಮಾಡುತ್ತ ಚಿಟ್ನಿಸ್ (1981) ಸ್ಪಂದಿಸಿದ ಹೆಚ್ಚಿನ ವಿದ್ಯಾರ್ಥಿಗಳು ತಮ್ಮ ವಿದ್ಯಾಭ್ಯಾಸದಲ್ಲಿ ತೃಪ್ತಿಕರವಾಗಿ ಪ್ರಗತಿ ಸಾಧಿಸುತ್ತಿದ್ದರು ಎಂದು ಸೂಚಿಸಿದರು. ಆದಾಗ್ಯೂ, ಇತರ ವಿದ್ಯಾರ್ಥಿಗಳ ಸಾಧನೆಗೆ ಹೋಲಿಸಿದಂತೆ SC ವಿದ್ಯಾರ್ಥಿಗಳ ಸಾಧನೆಯ ಗುಣಮಟ್ಟದ ಮೇಲೆ ಈ ಸಮೀಕ್ಷೆಗಳು ಯಾವುದೇ ಬೆಳಕು ಚೆಲ್ಲಲಿಲ್ಲ ಎಂಬುದನ್ನು ಅವರು ಗಮನಿಸಿದರು, ಮತ್ತು ತಮ್ಮ ಶಿಕ್ಷಣವನ್ನು ಯಶಸ್ವಿಯಾಗಿ ಪೂರ್ಣಗೊಳಿಸಲು ಮಾಡುವ ಅವರ ಪ್ರಯತ್ನಗಳಲ್ಲಿ SC ವಿದ್ಯಾರ್ಥಿಗಳು ಅನೇಕ ಸವಾಲುಗಳನ್ನು ಎದುರಿಸುತ್ತಾರೆ ಎಂದು ಅವರು ಎಚ್ಚರಿಸಿದರು. ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿನ SC ವಿದ್ಯಾರ್ಥಿಗಳಲ್ಲಿ ವಿದ್ಯಾಭ್ಯಾಸವನ್ನು ಅರ್ಧಕ್ಕೆ ನಿಲ್ಲಿಸುವವರ ಪ್ರಮಾಣವು ಹೆಚ್ಚಿತ್ತು (ಮುಖ್ಯವಾಗಿ ಆರ್ಥಿಕ ಒತ್ತಡಗಳ ಕಾರಣ) ಮಾತ್ರವಲ್ಲದೆ ಶೈಕ್ಷಣಿಕವಾಗಿ ಸಾಪೇಕ್ಷ ಕಡಮೆ ಅಂಕಗಳನ್ನೂ ಸಹ ಪಡೆಯುತ್ತಿದ್ದರು ಎಂಬ ತಮ್ಮ ತೀರ್ಮಾನಕ್ಕೆ ಕಾರ್ಲೇಕರ್ (1975) ಕೆಲವು ICSSR ಸಮೀಕ್ಷೆಗಳಿಂದ

ಮಾತ್ರವಲ್ಲದೆ, ಮೇಲೆ ಉಲ್ಲೇಖಿಸಿದ UGC ಅಧ್ಯಯನ ಹಾಗೂ ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಆಯುಕ್ತರ ವಾರ್ಷಿಕ ವರದಿಗಳಿಂದಲೂ ಕೂಡ ದತ್ತಾಂಶಗಳನ್ನು ಬಳಸಿದರು.

1970 ರ ದಶಕದ ಪೂರ್ವಾರ್ಧದಿಂದ ಮುಂಬೈನ 10 ಕಾಲೇಜುಗಳಿಂದ ಸಂಗ್ರಹಿಸಿದ ದತ್ತಾಂಶಗಳನ್ನು ಆಧರಿಸಿ ವಿಶ್ವವಿದ್ಯಾಲಯ ಮಟ್ಟದಲ್ಲಿ SC ವಿದ್ಯಾರ್ಥಿಗಳ ಶೈಕ್ಷಣಿಕ ಸಾಧನೆಯ ಕುರಿತು ಮಾಹಿತಿಗಳನ್ನು ಒಳಗೊಂಡ ಅಧ್ಯಯನವೊಂದು ಐಕಾರಾ (Aikara) (1980) ಅವರಿಂದ ಮಾಡಲ್ಪಟ್ಟಿತು. ಈ ದತ್ತಾಂಶವು ಕಲಾ, ವಿಜ್ಞಾನ, ವಾಣಿಜ್ಯ, ಕಾನೂನು, ವೈದ್ಯಕೀಯ ಮತ್ತು ಇಂಜಿನಿಯರಿಂಗ್ ಗಳಂತಹ ವಿವಿಧ ಕ್ಷೇತ್ರಗಳಲ್ಲಿ ಕೋರ್ಸುಗಳನ್ನು ದಗಿಸುತ್ತಿದ್ದ ಕಾಲೇಜುಗಳನ್ನು ಒಳಗೊಂಡಿತ್ತು, ಮತ್ತು ಅದು ಖಾಸಗಿ ಹಾಗೂ ಸರ್ಕಾರಿ ಕಾಲೇಜುಗಳು - ಎರಡನ್ನೂ ಒಳಗೊಂಡಿತ್ತು. ಈ ಅಧ್ಯಯನವು ನಡೆದ ಅವಧಿಯಲ್ಲಿ ಈ ಕಾಲೇಜುಗಳಲ್ಲಿ (ಕಾಲೇಜು ಶಿಕ್ಷಣದ ನಾಲ್ಕೂ ವರ್ಷದ ಹಂತಗಳಲ್ಲಿ) ದಾಖಲಾತಿ ಪಡೆದ ಒಟ್ಟೂ ವಿದ್ಯಾರ್ಥಿಗಳಲ್ಲಿ SC ವಿದ್ಯಾರ್ಥಿಗಳು 10% ಗಿಂತ ಸ್ವಲ್ಪ ಹೆಚ್ಚಿದ್ದರು. ಹೆಚ್ಚಿನ SC ವಿದ್ಯಾರ್ಥಿಗಳು (ಹೆಚ್ಚು ಪ್ರತಿಷ್ಠಿತವಿರದ ಮತ್ತು ಹೆಚ್ಚು ಕಠಿಣವಾಗಿರದ) ಖಾಸಗಿ ಕಾಲೇಜುಗಳಲ್ಲಿ ದಾಖಲಾತಿಯಾಗಿದ್ದರು, ಮತ್ತು ಅವರಲ್ಲಿ ಹೆಚ್ಚಿನವರು ಪ್ರಮುಖವಾಗಿ SC ವಿದ್ಯಾರ್ಥಿಗಳಿಗೆಂದೇ ಇದ್ದ ಒಂದೇ ಕಾಲೇಜಿನಲ್ಲಿ ಗುಂಪು-ಗೂಡಿದ್ದರು. ಕೆಲವೇ ಕೆಲವು SC ವಿದ್ಯಾರ್ಥಿಗಳು (ಹೆಚ್ಚು ಪ್ರತಿಷ್ಠಿತ ಮತ್ತು ಹೆಚ್ಚು ಕಠಿಣವಾದ) ಸರ್ಕಾರಿ ಕಾಲೇಜುಗಳಲ್ಲಿ ಮತ್ತು/ಅಥವಾ (ಅತ್ಯಂತ ಅಪೇಕ್ಷಿತ) ವೈದ್ಯಕೀಯ ಮತ್ತು ಇಂಜಿನಿಯರಿಂಗ್ ಕೋರ್ಸುಗಳಲ್ಲಿ ದಾಖಲಾತಿಯಾಗಿದ್ದರು.

1970 ರಿಂದ 1973 ರವರೆಗಿನ ಮೂರು ವರ್ಷಗಳ ಶೈಕ್ಷಣಿಕ ಅವಧಿಯಲ್ಲಿ 10 ಕಾಲೇಜುಗಳ ಎಲ್ಲಾ ಹಂತಗಳಲ್ಲಿ ದಾಖಲಾತಿಯಾಗಿದ್ದ ಶ್ರೇಣೀಕೃತದೊಂದು ಮಾದರಿಯ SC ಪ್ರವರ್ಗಕ್ಕೆ ಸೇರದ ವಿದ್ಯಾರ್ಥಿಗಳು ಮತ್ತು SC ಪ್ರವರ್ಗದ ವಿದ್ಯಾರ್ಥಿಗಳ ಶೈಕ್ಷಣಿಕ ಸಾಧನೆಯನ್ನು ಹೋಲಿಸಿದ ಐಕಾರಾ ವಾರ್ಷಿಕ ಪರೀಕ್ಷೆಯಲ್ಲಿ 52% SC ಪ್ರವರ್ಗಕ್ಕೆ ಸೇರದ ವಿದ್ಯಾರ್ಥಿಗಳು ತೇರ್ಗಡೆಯಾಗಿದ್ದರೆ ಕೇವಲ 23% SC ಪ್ರವರ್ಗದ ವಿದ್ಯಾರ್ಥಿಗಳು ತೇರ್ಗಡೆಯಾಗಿದ್ದರು ಎಂದು ಕಂಡುಕೊಂಡರು. ತೇರ್ಗಡೆಯಾಗದೇ ಇದ್ದವರಲ್ಲಿ, ಎರಡೂ ಪ್ರವರ್ಗದವರಲ್ಲಿನ ಹೆಚ್ಚಿನವರು ಪರೀಕ್ಷೆಯನ್ನು ಬರೆದಿದ್ದರಾದರೂ ಕೂಡ ತೇರ್ಗಡೆಯಾಗಲಿಲ್ಲ - ಹಾಗಾಗಿ ಅದೇ ತರಗತಿಯಲ್ಲಿ ಉಳಿದರು; ಇನ್ನುಳಿದವರು ಪರೀಕ್ಷೆಗೆ ಕೂರಲಿಲ್ಲ - ಹಾಗಾಗಿ ಅವರು ಕಾಲೇಜನ್ನು ತೊರೆದರು. ಕಾಲೇಜನ್ನು ತೊರೆದ ಗಣನೀಯ ಸಂಖ್ಯೆಯ SC ವಿದ್ಯಾರ್ಥಿಗಳು ಮೊದಲನೆ ವರ್ಷದ ತರಗತಿಯಲ್ಲಿದ್ದಾಗಲೇ ಕಾಲೇಜನ್ನು ಬಿಟ್ಟಿದ್ದರಾದರೂ ಸಹ, ಅವರಲ್ಲಿ ಅನೇಕರು ಆ ಹಂತದಲ್ಲಿಯೇ ಎರಡು ಅಥವಾ ಮೂರು ವರ್ಷಗಳನ್ನು ಈಗಾಗಲೇ ಕಳೆದಿದ್ದವರಾಗಿದ್ದರು. 1970 ರಲ್ಲಿ ಮೊದಮೊದಲಿಗೆ ಕಾಲೇಜಿಗೆ ದಾಖಲಾತಿಯಾದ ಸುಮಾರು 60% SC ವಿದ್ಯಾರ್ಥಿಗಳು ಮೂರು ವರ್ಷಗಳಾಗುವ ಹೊತ್ತಿಗೆ ಹೊರನಡೆದಿದ್ದರು; 1973 ಯ ನಂತರದ ದತ್ತಾಂಶವಿರದ ಕಾರಣ, ಅಂತಿಮವಾಗಿ ಆ ವಿದ್ಯಾರ್ಥಿಗಳಲ್ಲಿ ಪದವಿ ಪಡೆದವರ ನಿಖರವಾದ ಶೇಕಡಾವಾರು ಅಂಕಿಅಂಶಗಳನ್ನು

ಐಕಾರಾರವರು ಹೊಂದಿರಲಿಲ್ಲ; ಆದರೆ ಅದು 20% ಪ್ರತಿಶತಕ್ಕಿಂತ ಕಡಮೆ ಇದ್ದಿರಬಹುದು ಎಂದು ನಿರ್ಣಯಿಸುವುದು ಸಕಾರಣವೆಂದು ತೋರುತ್ತದೆ.

ಎಲ್ಲಾ 10 ಕಾಲೇಜುಗಳಲ್ಲಿ, SC ವಿದ್ಯಾರ್ಥಿಗಳ ಶೈಕ್ಷಣಿಕ ಸಾಧನೆಯು SC ಪ್ರವರ್ಗಕ್ಕೆ ಸೇರದ ವಿದ್ಯಾರ್ಥಿಗಳ ಸಾಧನೆಗಿಂತ ಕಡಮೆ ಇತ್ತು. ಇನ್ನೂ ಹೆಚ್ಚು ಸವಾಲಿನ ಸರ್ಕಾರಿ ಮತ್ತು/ಅಥವಾ ವೈದ್ಯಕೀಯ ಮತ್ತು ಇಂಜಿನಿಯರಿಂಗ್ ಕಾಲೇಜುಗಳಲ್ಲಿ ದಾಖಲಾತಿಯಾದ (ಕೆಲವೇ) SC ವಿದ್ಯಾರ್ಥಿಗಳು ತಮ್ಮ ಪರೀಕ್ಷೆಗಳಲ್ಲಿ ಉತ್ತೀರ್ಣರಾಗುವ ಸಾಧ್ಯತೆಯು ಉಳಿದ ಕಾಲೇಜುಗಳಲ್ಲಿ ದಾಖಲಾತಿಯಾದ (ಅನೇಕ) SC ವಿದ್ಯಾರ್ಥಿಗಳಿಗಿಂತ ಗಮನಾರ್ಹವಾಗಿ ಹೆಚ್ಚಿತ್ತು ಎನ್ನುವುದು ಆಸಕ್ತಿಕರವಾದ ವಿಷಯವಾಗಿದೆ. ಇವರಲ್ಲಿ ಮೊದಲಿನವರು ಹೆಚ್ಚು ಪ್ರತಿಷ್ಠಿತವಿರದ ಕಾಲೇಜುಗಳಲ್ಲಿ ದೊಡ್ಡ ಸಂಖ್ಯೆಯಲ್ಲಿ ದಾಖಲಾತಿಯಾದ SC ವಿದ್ಯಾರ್ಥಿಗಳಿಗಿಂತ ಅಸಾಧಾರಣವಾದ ಅತ್ಯುತ್ತಮ ಪ್ರೇರಣೆ, ಗಮನಾರ್ಹವಾಗಿ ಹೆಚ್ಚು ನೈಪುಣ್ಯತೆ, ಮತ್ತು ಉತ್ತಮ ತಯಾರಿ ಹಾಗೂ ಬೆಂಬಲವನ್ನು ಹೊಂದಿದ್ದವರಾಗಿದ್ದರು. ಮೀಸಲಾತಿ ಸೀಟುಗಳಿಲ್ಲದಿದ್ದರೆ ಹೆಚ್ಚು ಸವಾಲಿನ ಕಾಲೇಜುಗಳು ಮತ್ತು ಕ್ಷೇತ್ರಗಳಲ್ಲಿ ಇನ್ನೂ ಕಡಮೆ ಸಂಖ್ಯೆಯಲ್ಲಿ ಅಂತಹ SC ವಿದ್ಯಾರ್ಥಿಗಳು ದಾಖಲಾತಿಯಾಗುತ್ತಿದ್ದರು ಎಂಬುದರಲ್ಲಿ ಯಾವ ಸಂದೇಹವೂ ಇಲ್ಲ. ಅತ್ಯುತ್ತಮ ಸಾಧನೆಗೈದ ಅಲ್ಪಸಂಖ್ಯೆಯ SC ವಿದ್ಯಾರ್ಥಿಗಳನ್ನು ಹೊರತುಪಡಿಸಿದರೆ, ಕಾಲೇಜನ್ನು ತೊರೆದ ಹಾಗೂ ಅದೇ ತರಗತಿಯಲ್ಲಿ ಉಳಿದ ಪ್ರಮಾಣವು ಹೆಚ್ಚಿನ ಸಂಖ್ಯೆಯ SC ವಿದ್ಯಾರ್ಥಿಗಳಲ್ಲಿ ಹೆಚ್ಚಿತ್ತು ಮತ್ತು SC ಪ್ರವರ್ಗಕ್ಕೆ ಸೇರದ ಅವರ ಸಮಾನಸ್ಕಂಧರಿಗಿಂತ ಕಡಮೆ ಪ್ರಮಾಣದಲ್ಲಿ ಸಾಧನೆ ಹಾಗೂ ಪ್ರಗತಿಯನ್ನು ಸಾಧಿಸಿದ್ದರು ಎಂದು ಮುಂಬೈ ಕಾಲೇಜುಗಳ ತಮ್ಮ ಅಧ್ಯಯನದಿಂದ ಐಕಾರಾರವರು ತೀರ್ಮಾನಕ್ಕೆ ಬರುತ್ತಾರೆ.

ಈ ಹಿಂದೆ ಉಲ್ಲೇಖಿಸಿದಂತೆ 1970 ರಲ್ಲಿ ಕೈಗೊಂಡ ಮುಂಬೈ ವೈದ್ಯಕೀಯ ಕಾಲೇಜುಗಳ ಕುರಿತ ಅವರ ಸಂಶೋಧನೆಯಲ್ಲಿ, ತಮ್ಮ ಪದವಿಯನ್ನು ಸರಿಯಾದ ಸಮಯಕ್ಕೆ ಮುಗಿಸಿದವರಲ್ಲಿ SC ವಿದ್ಯಾರ್ಥಿಗಳು ಕಾಲುಭಾಗದಷ್ಟಿದ್ದರು ಎಂಬುದನ್ನು ಮತ್ತು SC ಪ್ರವರ್ಗಕ್ಕೆ ಸೇರದ ವಿದ್ಯಾರ್ಥಿಗಳು ಮುಕ್ಕಾಲು ಪಾಲಿನಷ್ಟಿದ್ದರು ಎಂಬುದನ್ನು ವೆಲಾಸ್ಕರ್ (1986) ಕಂಡುಕೊಂಡರು. 1960 ರ ಉತ್ತರಾರ್ಧ ಹಾಗೂ 1970 ರ ಪೂರ್ವಾರ್ಧದಲ್ಲಿ ರಾಯ್‌ಪುರದ ವೈದ್ಯಕೀಯ ಕಾಲೇಜಿನಲ್ಲಿ ಪ್ರವೇಶ ದಾಖಲಾತಿ ಪಡೆದ ಕೆಲವಷ್ಟೇ SC ವಿದ್ಯಾರ್ಥಿಗಳಿಗೆ ಸಂಬಂಧಿಸಿದಂತೆ ಹೆಚ್ಚುಕಡಮೆ ಅದೇ ರೀತಿಯ ಪುರಾವೆಯನ್ನು ಕಂಡುಕೊಂಡಿದ್ದನ್ನು ವಕೀಲ್ (Vakil) (1985:138) ಅವರು ವರದಿ ಮಾಡಿದರು: ದಾಖಲಾತಿಯಾದ 42 ವಿದ್ಯಾರ್ಥಿಗಳಲ್ಲಿ, ಕೇವಲ 4 ವಿದ್ಯಾರ್ಥಿಗಳು ಮಾತ್ರ ನಿಗದಿತ ನಾಲ್ಕುವರೆ ವರ್ಷಗಳಲ್ಲಿ ಪದವಿ ಶಿಕ್ಷಣವನ್ನು ಮುಗಿಸಿದರೆ, 23 ವಿದ್ಯಾರ್ಥಿಗಳು ಎಂಟು ವರ್ಷಗಳನ್ನು ತೆಗೆದುಕೊಂಡಿದ್ದರು. ಮುಂಬೈನ ವೈದ್ಯಕೀಯ ಕಾಲೇಜುಗಳಿಂದ ಹೆಚ್ಚಿನ ಸಂಖ್ಯೆಯ SC ವಿದ್ಯಾರ್ಥಿಗಳು ಸಾಮಾನ್ಯವಾಗಿ ಕೆಲವು ಅಧಿಕ ವರ್ಷಗಳನ್ನು ತೆಗೆದುಕೊಂಡು ಅಂತಿಮವಾಗಿ ಪದವಿಯನ್ನು ಪಡೆಯುತ್ತಾರಾದರೆ, ವಾಸ್ತವಿಕವಾಗಿ SC ಪ್ರವರ್ಗಕ್ಕೆ ಸೇರದ ಎಲ್ಲಾ ವಿದ್ಯಾರ್ಥಿಗಳು ಹೆಚ್ಚು ಸಾಮಾನ್ಯವಾಗಿ ಸರಿಯಾದ ಸಮಯಕ್ಕೆ ಮುಗಿಸುತ್ತಾರೆ

ಎಂಬುದನ್ನು ವೆಲಾಸ್ಕರ್ ಕಂಡುಕೊಂಡರು. ಸಾಮಾನ್ಯವಾಗಿ ವೈದ್ಯಕೀಯ ಕಾಲೇಜುಗಳನ್ನು ಪ್ರವೇಶಿಸುವ SC ವಿದ್ಯಾರ್ಥಿಗಳ ಶೈಕ್ಷಣಿಕ ಹಿನ್ನೆಲೆಯು SC ಪ್ರವರ್ಗಕ್ಕೆ ಸೇರದ ವಿದ್ಯಾರ್ಥಿಗಳದಕ್ಕಿಂತ ಹೆಚ್ಚು ಕಳಪೆ ಮಟ್ಟದ್ದಾಗಿರುತ್ತದೆ ಎಂಬುದನ್ನು, ಮತ್ತು ಕೆಲವು ಅಪವಾದಗಳನ್ನು ಹೊರತುಪಡಿಸಿದರೆ, ಅವರ ಶೈಕ್ಷಣಿಕ ಸಾಧನೆಯು OBC ಹಾಗೂ ಸಾಮಾನ್ಯ ಪ್ರವರ್ಗದಡಿಯಲ್ಲಿ ಪ್ರವೇಶ ದಾಖಲಾತಿ ಪಡೆದ ವಿದ್ಯಾರ್ಥಿಗಳಿಗಿಂತ ಕಳಪೆ ಮಟ್ಟದ್ದಾಗಿರುತ್ತದೆ ಎಂಬುದನ್ನು ಸಹ ಅವರು ಗಮನಿಸಿದರು. ಆದಾಗ್ಯೂ, ಮುಂಬೈನಲ್ಲಿ ಇಂಜಿನಿಯರಿಂಗ್ ಕಾಲೇಜುಗಳಿಗಿಂತ ವೈದ್ಯಕೀಯ ಕಾಲೇಜುಗಳಲ್ಲಿ ಶಿಕ್ಷಣವನ್ನು ಮುಂದುವರಿಸುವ ಮತ್ತು  ಪದವಿ ಪಡೆಯುವ ಸಾಧ್ಯತೆಯು ಗಮನಾರ್ಹವಾಗಿ ಹೆಚ್ಚಿತ್ತು - ಪ್ರಾಯಶಃ ರಾಷ್ಟ್ರೀಯ ಸಂಸ್ಕೃತಿ ಹಾಗೂ ನಿರ್ದಿಷ್ಟವಾಗಿ ಇಂಗ್ಲಿಷ್  ಭಾಷೆಯೊಂದಿಗೆ ಅಷ್ಟೇನೂ ಹಿತಕರವಾದ ಸಂಬಂಧವಿರದ SC ವಿದ್ಯಾರ್ಥಿಗಳಿಗೆ  ಆ ವೈದ್ಯಕೀಯ ಕಾಲೇಜುಗಳಲ್ಲಿನ ಸಾಮಾಜಿಕ ಪರಿಸರವು ಹೆಚ್ಚು ಸ್ಥಳೀಯ ಸೊಗಡನ್ನು ಹೊಂದಿದ್ದು ಮತ್ತು ಆದ್ದರಿಂದ ಅದು ಅವರಿಗೆ ಹೆಚ್ಚು ಸರಿಹೋಗುವಂತದ್ದಾಗಿತ್ತು ಎಂಬ ಕಾರಣಕ್ಕಿರಬಹುದು ಎಂದವರು ಕಂಡುಕೊಂಡರು.[12]

ಪರಿಶಿಷ್ಟ ಜಾತಿ ಮತ್ತು ಪಂಗಡದ ವಿದ್ಯಾರ್ಥಿಗಳ ಶೈಕ್ಷಣಿಕ ಸಾಧನೆಯನ್ನು ಕುರಿತ ಇತ್ತೀಚಿನ ಪುರಾವೆಯು ಅತ್ಯುತ್ತಮವಾಗಿ ವಿನ್ಯಾಸಗೊಂಡು ನಡೆಸಿದ ಮತ್ತು  1990 ರ ದಶಕದಲ್ಲಿ ಪ್ರಕಟವಾದ ಎರಡು ಅಧ್ಯಯನಗಳಲ್ಲಿ ಲಭ್ಯವಿದೆ. ಇವುಗಳಲ್ಲಿ ಮೊದಲನೆಯದು ಈ ಹಿಂದೆ ಉಲ್ಲೇಖಿಸಲಾದ ಪಟವರ್ಧನ್ ಮತ್ತು ಪಾಲ್ಕೀಕರ್ (1992) ಅವರು ಮಾಡಿದ ಅಧ್ಯಯನವಾಗಿದೆ. ಈ ಲೇಖಕರು 1970 ರಿಂದ 1980ರವರೆಗಿನ ಅವಧಿಯಲ್ಲಿ ಮೀಸಲಾತಿ ಸೀಟುಗಳ ಮೂಲಕ ಪ್ರವೇಶ ದಾಖಲಾತಿ ಪಡೆದ ವಿದ್ಯಾರ್ಥಿಗಳ ಮತ್ತು ಸಾಮಾನ್ಯ ಪ್ರವರ್ಗದಡಿಯಲ್ಲಿ  ಪ್ರವೇಶ ದಾಖಲಾತಿ ಪಡೆದ ವಿದ್ಯಾರ್ಥಿಗಳ ಒಂದು ಪ್ರಾತಿನಿಧಿಕ ಮಾದರಿ ಗುಂಪಿನ ಶೈಕ್ಷಣಿಕ ದಾಖಲೆಗಳನ್ನು (ಕಾಲೇಜಿನಲ್ಲಿನ ಪ್ರವೇಶದ ದಾಖಲಾತಿ ಮತ್ತು ಪ್ರತಿ ವರ್ಷದ ದಾಖಲೆಗಳನ್ನೂ ಸೇರಿಸಿ) ಸಂಕಲಿಸಿದರು;  ಅಲ್ಲದೆ, ಮೀಸಲಾತಿ ಸೀಟು ಮತ್ತು ಸಾಮಾನ್ಯ ಪ್ರವರ್ಗದ ಅಡಿಯಲ್ಲಿ ಪ್ರವೇಶ ದಾಖಲಾತಿ ಪಡೆದ ಗಣನೀಯ ಪ್ರಮಾಣದ ಪದವೀಧರರಿಗೆ ಪ್ರಶ್ನಾವಳಿಗಳನ್ನೂ ಕಳುಹಿಸಿದರು, ಮತ್ತು ಸ್ಪಂದಿಸಿದ ಪ್ರತಿಯೊಬ್ಬರೊಂದಿಗೂ ವೈಯಕ್ತಿಕವಾಗಿ ಸಂದರ್ಶನಗಳನ್ನು ನಡೆಸಲಾಯಿತು. ಈ ಕೆಳಗಿನವು ಮೀಸಲಾತಿ ಸೀಟುಗಳನ್ನು ಪಡೆದ ವಿದ್ಯಾರ್ಥಿಗಳ ಕಾಲೇಜಿನಲ್ಲಿನ-ಸಾಧನೆಗೆ ಸಂಬಂಧಿಸಿದಂತೆ ಅವರು ಕಂಡುಕೊಂಡಂತಹ ಪ್ರಮುಖ ಶೋಧಕಗಳು; ವಿಭಾಗ III ರಲ್ಲಿ ನಾನು ಕಾಲೇಜು ನಂತರದ ವೃತ್ತಿ ಸಾಧನೆಗೆ ಸಂಬಂಧಿಸಿದಂತೆ ಅವರ ಶೋಧಕಗಳನ್ನು ಪುನರಾವಲೋಕನ ಮಾಡುತ್ತೇನೆ.

[12] ಈ ಅನುಮಾನಿತ ಸಿದ್ಧಾಂತವನ್ನು Velaskar  ಈ ಲೇಖನದ ಲೇಖಕರಿಗೆ ಇ-ಮೇಲ್ (ಜನವರಿ 24, 2002) ಮುಖಾಂತರ ತಿಳಿಸಿದ್ದಾರೆ.

ನಿರೀಕ್ಷಿಸಿದಂತೆ, ವಿದ್ಯಾರ್ಥಿ ಪ್ರವರ್ಗಾನುಸಾರ ಪರೀಕ್ಷೆಯ ಸರಾಸರಿ ಅಂಕಗಳ ಶ್ರೇಯಾಂಕ ಕ್ರಮದಲ್ಲಿ ಅನುಕ್ರಮವಾಗಿ ಸಾಮಾನ್ಯ ಪ್ರವರ್ಗದಡಿಯಲ್ಲಿ ಪ್ರವೇಶ ದಾಖಲಾತಿ ಪಡೆದ ವಿದ್ಯಾರ್ಥಿಗಳು ಮೇಲಿದ್ದು, ನಂತರ OBC, SC, ST ವಿದ್ಯಾರ್ಥಿಗಳಿದ್ದರು.[13] ಹೆಚ್ಚುಕಡಮೆ ಅದೇ ರೀತಿಯ ಕ್ರಮವು, ಆದರೆ ವಿಲೋಮವಾಗಿ, ಒಂದು ಪರೀಕ್ಷೆಯಲ್ಲಿ ತೇರ್ಗಡೆಯಾಗಲು ಎಷ್ಟು ಪ್ರಯತ್ನಗಳು ಬೇಕಿತ್ತು, ಒಂದು ಪದವಿ ಕೋರ್ಸನ್ನು ಪೂರ್ಣಗೊಳಿಸಲು ಎಷ್ಟು ವರ್ಷಗಳು ತೆಗೆದುಕೊಳ್ಳಲಾಯಿತು, ಮತ್ತು ಇವತ್ತಲ್ಲ ನಾಳೆ ಕಾಲೇಜನ್ನು ಬಿಡುವವರ ಪ್ರಮಾಣಕ್ಕೂ ಅನ್ವಯಿಸುತ್ತದೆ. ಆದರೆ ಅಂತಿಮವಾಗಿ ಗಮನಾರ್ಹ ಸಂಖ್ಯೆಯ SC ಮತ್ತು ST ವಿದ್ಯಾರ್ಥಿಗಳು ಪದವಿಯನ್ನು ಪಡೆಯುತ್ತಾರೆ: 1972-76ರ ಅವಧಿಯಲ್ಲಿ ಪ್ರವೇಶ ದಾಖಲಾತಿ ಪಡೆದ ವಿದ್ಯಾರ್ಥಿಗಳಲ್ಲಿ (ಮತ್ತು 1984ರ ಹೊತ್ತಿಗೆ ಪದವಿ ಪಡೆದವರು), ಪದವಿ ಪಡೆದ SC ವಿದ್ಯಾರ್ಥಿಗಳ ಪ್ರಮಾಣವು 92% ಇದ್ದರೆ ST ವಿದ್ಯಾರ್ಥಿಗಳದ್ದು 87% ಇತ್ತು.

ಒಟ್ಟಿನಲ್ಲಿ, ಬಿ.ಜೆ ಮೆಡಿಕಲ್ ಕಾಲೇಜಿಗೆ ಪ್ರವೇಶ ದಾಖಲಾತಿ ಪಡೆಯುವ ಹೊತ್ತಿಗೆ SC ಮತ್ತು ST ವಿದ್ಯಾರ್ಥಿಗಳು ಶೈಕ್ಷಣಿಕವಾಗಿ ಇತರ ವಿದ್ಯಾರ್ಥಿಗಳಿಗಿಂತ ಹಿಂದಿದ್ದಾರೆ, ಮತ್ತು ಅವರ ವಿದ್ಯಾಭ್ಯಾಸವು ಮುಂದುವರೆದಂತೆ ಅವರು ಇನ್ನಷ್ಟು ಹಿಂದೆ ಬೀಳುತ್ತಾರೆ ಎಂದು ಪಟವರ್ಧನ್ ಮತ್ತು ಪಾಲ್ಶೀಕರ್ ಕಂಡುಕೊಂಡರು. ಆದರೆ ದಾಖಲಾತಿ ಪಡೆದ SC ಮತ್ತು ST ವಿದ್ಯಾರ್ಥಿಗಳಲ್ಲಿ, ಕಾಲೇಜನ್ನು ತೊರೆಯುವುದರಿಂದ, ತಮ್ಮ ಪದವಿ ಕೋರ್ಸನ್ನು ಪೂರ್ಣಗೊಳಿಸಲು ಎಂಟು ವರ್ಷಕ್ಕಿಂತಲೂ ಹೆಚ್ಚು ವರ್ಷಗಳನ್ನು ತೆಗೆದುಕೊಳ್ಳುವುದರಿಂದ, ಅಥವಾ ಅವರ ಅಂತಿಮ ಪರೀಕ್ಷೆಗಳಲ್ಲಿ ತೇರ್ಗಡೆಯ ಕನಿಷ್ಟತಮ ಅಂಕಗಳಿಗಿಂತ ಸ್ವಲ್ಪವಷ್ಟೇ ಹೆಚ್ಚು ಅಂಕಗಳನ್ನು ಪಡೆದು ಪದವಿ ಗಳಿಸುವುದರಿಂದ - ಸುಮಾರು 25-30% ವಿದ್ಯಾರ್ಥಿಗಳು ಮಾತ್ರ ನಿರೀಕ್ಷಿಸಿದಕ್ಕಿಂತಲೂ ಹೆಚ್ಚು ತೃಪ್ತಿದಾಯಕವಾಗಿರದ ಸಾಧನೆ ಮಾಡುತ್ತಾರೆ ಎಂದವರು ಕಂಡುಕೊಂಡರು. ಮೇಲಾಗಿ, ಕಾಲಾಂತರದಲ್ಲಿ SC ಮತ್ತು ST ಮೀಸಲಾತಿ ಸೀಟುಗಳಿಗೆ ವಿದ್ಯಾರ್ಥಿಗಳ ಪ್ರವೇಶ ದಾಖಲಾತಿ ಅಂಕ-ಮಿತಿಯು ಏರುತ್ತಿದ್ದ ಕಾರಣ ಅವರ ಅಧ್ಯಯನ ಅವಧಿಯಿಂದೀಚೆಗೆ SC ಮತ್ತು ST ವಿದ್ಯಾರ್ಥಿಗಳ ಯಶಸ್ಸಿನ ಪ್ರಮಾಣವು ಸಂಭಾವ್ಯ ಹೆಚ್ಚಾಗಿದೆ ಎಂದು ಲೇಖಕರು ಭಾವಿಸುತ್ತಾರೆ.

ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ SC ಮತ್ತು ST ವಿದ್ಯಾರ್ಥಿಗಳ ಸಾಧನೆಯ ಹೆಚ್ಚು ಇತ್ತೀಚಿನ ವ್ಯವಸ್ಥಿತ ಅಧ್ಯಯನವು ಕಿರ್ಪಾಲ್ ಮತ್ತು ಗುಪ್ತಾ (1999) ಅವರಿಂದ ನಡೆಸಲಾಗಿದ್ದು ಅವರು ತಮ್ಮ ಗಮನವನ್ನು ಪ್ರತಿಷ್ಠಿತ IIT ಸಂಸ್ಥೆಗಳ ಮೇಲೆ ಕೇಂದ್ರೀಕರಿಸಿದರು. ಭಾರತದ ರಾಷ್ಟ್ರ ಮಟ್ಟದ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಅತ್ಯಂತ ಪ್ರತಿಷ್ಠಿತವಾದ ಈ IITಗಳಲ್ಲಿ ಸಾಮಾನ್ಯ ಪ್ರವರ್ಗದ ಸೀಟುಗಳಿಗೆ ಇರುವ ಪೈಪೋಟಿಯು ಭಯಂಕರವಾಗಿರುವುದರಿಂದ ವಾಸ್ತವಿಕವಾಗಿ IIT ಸಂಸ್ಥೆಯಲ್ಲಿ ದಾಖಲಾತಿ

[13] Patwardhan ಮತ್ತು Palshikarರವರ ಮಾದರಿಯಲ್ಲಿನ ವಿಮುಕ್ತ ಬುಡಕಟ್ಟಿನ ವಿದ್ಯಾರ್ಥಿಗಳು ಪರೀಕ್ಷೆಯಲ್ಲಿ SC ಮತ್ತು ST ವಿದ್ಯಾರ್ಥಿಗಳಿಗಿಂತ ಹೆಚ್ಚಿನ ಅಂಕಗಳನ್ನು ಗಳಿಸುತ್ತಿದ್ದರಾದರೂ, ಅವರಲ್ಲಿ ಕಾಲೇಜು ಬಿಡುವ ಪ್ರಮಾಣ ಹೆಚ್ಚಿತ್ತು.

ಪಡೆಯುತ್ತಿರುವ ಎಲ್ಲಾ SC ಮತ್ತು ST ವಿದ್ಯಾರ್ಥಿಗಳು SC ಮತ್ತು ST ಮೀಸಲಾತಿ ಸೀಟಿನ ಪ್ರವರ್ಗಗಳ ಅಡಿಯಲ್ಲೇ ದಾಖಲಾತಿ ಪಡೆಯುತ್ತಿದ್ದಾರೆ ಎಂದು ಭಾವಿಸುವುದರಲ್ಲಿ ತಪ್ಪೇನಿಲ್ಲ.[14] 1970 ರ ದಶಕದಲ್ಲಿ IIT-ಮುಂಬೈಯಲ್ಲಿ SC ಮತ್ತು ST ವಿದ್ಯಾರ್ಥಿಗಳ ಕುರಿತು ಆರಂಭದಲ್ಲಿ ನಡೆದ ಹಲವಾರು ಅಧ್ಯಯನಗಳನ್ನು ಅನುಸರಿಸಿ ( ಕಿರ್ಪಾಲ್ (Kirpal) 1978; ಕಿರ್ಪಾಲ್ ಮತ್ತಿತರರು (Kirpal et al) 1985a, 1985b), ಈ ಎರಡು ವಿದ್ವಾಂಸರು 1981 ರಿಂದ 1992ರವರೆಗಿನ ಅವಧಿಯಲ್ಲಿ IIT ಸಂಸ್ಥೆಗಳಲ್ಲಿ ಪ್ರಮುಖವಾದ ಎಲ್ಲಾ ಐದು IIT ಸಂಸ್ಥೆ (ಮುಂಬೈ, ಕಾನ್ಪುರ್, ದೆಲ್ಲಿ, ಖರಗ್‌ಪುರ್, ಚೆನ್ನೈ) ಗಳ BTech ಕೋರ್ಸುಗಳಿಗೆ ಮೀಸಲಾತಿ ಸೀಟುಗಳ ಮೂಲಕ ಪ್ರವೇಶ ದಾಖಲಾತಿ ಪಡೆದ ವಿದ್ಯಾರ್ಥಿಗಳ ಕುರಿತು ಒಂದು ಸಮೃದ್ಧ ದತ್ತಾಂಶಗಳ ಸಮುಚ್ಚಯವನ್ನು ಸಂಕಲಿಸಿದರು.

ಮೊದಲನೆಯದಾಗಿ, ಎಲ್ಲಾ SC ಮತ್ತು ST ವಿದ್ಯಾರ್ಥಿಗಳ ಕ್ರೋಡೀಕರಿಸಿದ ಸರಾಸರಿ ಪದವಿಯ ಪ್ರಮಾಣವು 84% ಇದ್ದರೆ ಸಾಮಾನ್ಯ ಪ್ರವರ್ಗದಡಿಯಲ್ಲಿ ಪ್ರವೇಶಾತಿ ಪಡೆದ ವಿದ್ಯಾರ್ಥಿಗಳ ಪ್ರಮಾಣವು 94% ಇತ್ತು ಎಂದು ಕಿರ್ಪಾಲ್ ಮತ್ತು ಗುಪ್ತಾ ಕಂಡುಕೊಂಡರು.[15] 1980ರಲ್ಲಿ ಮೀಸಲಾತಿ ಸೀಟುಗಳ ಮೂಲಕ ಪ್ರವೇಶಾತಿ ಪಡೆದ ವಿದ್ಯಾರ್ಥಿಗಳು ಕಾಲೇಜು ತೊರೆಯುವ ಸರಾಸರಿ ಶೇಕಡ 16% ಪ್ರಮಾಣವನ್ನು, ಅದಕ್ಕಿಂತ ಹೆಚ್ಚಿನ ಸಂಖ್ಯೆಯಲ್ಲಿ 1970ರಲ್ಲಿ ಕಿರ್ಪಾಲ್ ಮತ್ತಿತರರು (1985a) ಮತ್ತು ಚಿಟ್ನಿಸ್ (1986) ಅವರು ಕಂಡುಕೊಂಡಂತಹ ಅಂಥ ವಿದ್ಯಾರ್ಥಿಗಳಲ್ಲಿನ ಕಾಲೇಜು ತೊರೆಯುವವರ ಪ್ರಮಾಣಕ್ಕೆ ಹೋಲಿಸಿದಾಗ ಬಹಳಷ್ಟು ಕಡಮೆ ಎಂದೇ ಹೇಳಬಹುದು. ಆರಂಭದಲ್ಲಿನ ಆ ಹೆಚ್ಚಿನ ಪ್ರಮಾಣದ ಪರಿಣಾಮವಾಗಿ, IIT ಗಳು ಅನೇಕ ಅರ್ಜಿ ಹಾಕಿದ SC ಮತ್ತು ST ವಿದ್ಯಾರ್ಥಿಗಳಿಗೆ ಒಂದು ವರ್ಷದ ಅವಧಿಯ ಪರಿಹಾರಾಕ ಕಾರ್ಯಕ್ರಮವನ್ನೂ ಒಳಗೊಂಡಂತೆ ಗಮನಾರ್ಹವಾಗಿ ಸುಧಾರಿತ ಸೇರಿಸಿಕೊಳ್ಳುವ ಪ್ರಕ್ರಿಯೆ, ಸಿದ್ಧತೆ ಮತ್ತು ವಿದ್ಯಾರ್ಥಿಗಳನ್ನು ಉಳಿಸಿಕೊಳ್ಳುವ ಪ್ರಯತ್ನಗಳನ್ನು ಪ್ರಾರಂಭಿಸಿದವು. IIT ಗಳಲ್ಲಿ ಈ ವಿದ್ಯಾರ್ಥಿಗಳ ಶೈಕ್ಷಣಿಕ ಸಾಧನೆಗೆ ಸಂಬಂಧಸಿದಂತೆ ಇರುವ ಕಿರ್ಪಾಲ್ ಮತ್ತು ಗುಪ್ತಾರ ಪ್ರಮುಖ ಶೋಧಕಗಳನ್ನು 1989-1992 ವರ್ಷಗಳ ಅವಧಿಯಲ್ಲಿ ಪ್ರವೇಶ ದಾಖಲಾತಿ ಪಡೆದ ಸಾಮಾನ್ಯ ಪ್ರವರ್ಗದ ಹಾಗೂ SC ಮತ್ತು ST ವಿದ್ಯಾರ್ಥಿಗಳ ಸುಮಾರು 10% ಮಾದರಿಯೊಂದರ

---

[14] Kirpal ಮತ್ತು Gupta ಅವರ ಪ್ರಕಾರ (1999), ವರ್ಷದಲ್ಲಿ ಅಂದಾಜು ಸುಮಾರು 80,000 ಅರ್ಜಿದಾರರಲ್ಲಿ ಕೇವಲ 2,250 ವಿದ್ಯಾರ್ಥಿಗಳು ಮಾತ್ರ (100 ಕ್ಕಿಂತ ಕಡಮೆ SC ಮತ್ತು ST ವಿದ್ಯಾರ್ಥಿಗಳನ್ನು ಒಳಗೊಂಡಂತೆ) ದಾಖಲಾತಿ ಪಡೆಯುತ್ತಾರೆ. ಅಂದರೆ ಪ್ರವೇಶ ದಾಖಲಾತಿಯ ಅನುಪಾತ 2.8% ರಷ್ಟು.

[15] IITಗಳಲ್ಲಿ, IIT-ಖರಗ್‌ಪುರ ಹೆಚ್ಚಿನ ಸಂಖ್ಯೆಯ (ಅಸಮ ಪ್ರಮಾಣದಲ್ಲಿ) SC ಹಾಗೂ ST ವಿದ್ಯಾರ್ಥಿಗಳನ್ನು ದಾಖಲಿಸಿಕೊಳ್ಳುತ್ತದೆ, ಮತ್ತು ಉಳಿದ ನಾಲ್ಕು IIT ಗಳಿಗೆ ಹೋಲಿಸಿದರೆ ಇಲ್ಲಿ ಗಮನಾರ್ಹವಾಗಿ ಹೆಚ್ಚಿನ ಪ್ರಮಾಣದಲ್ಲಿ SC, ST ವಿದ್ಯಾರ್ಥಿಗಳು ಪದವೀಧರರಾಗಿ ಹೊರ ಬೀಳುತ್ತಾರೆ. ಹೀಗಾಗಿ ಪಠ್ಯದಲ್ಲಿ ಉಲ್ಲೇಖಿಸಿದ ಒಟ್ಟು ಅಂಕಿಅಂಶಗಳು ಹೆಚ್ಚು ಪ್ರತಿಷ್ಠಿತ ಸಂಸ್ಥೆಗಳಾಗಿರುವ ಮುಂಬೈ, ದಿಲ್ಲಿ, ಕಾನ್ಪುರ್ ಮತ್ತು ಚೆನ್ನೈನ IIT ಗಳಲ್ಲಿ ದಾಖಲಾದ SC, ST ವಿದ್ಯಾರ್ಥಿಗಳ ಯಶಸ್ಸನ್ನು ಉತ್ಪ್ರೇಕ್ಷಿಸುತ್ತದೆ.

'ಸರಾಸರಿ ಸಂಚಿತ ಸಾಧನೆಯ ಸೂಚ್ಯಂಕ (Mean Cumulative Performance Index)' (MCPI (ಎಮ್‌ಸಿಪಿಐ)) ಎಂಬುದಾಗಿ ಸಂಕ್ಷೇಪಿಸಬಹುದು. ಈ MCPI ಅಂಕಿಅಂಶಗಳು 436 ಸಾಮಾನ್ಯ ಪ್ರವರ್ಗದ ವಿದ್ಯಾರ್ಥಿಗಳಿಗೆ 7.88 ಇದ್ದರೆ, 115 SC ವಿದ್ಯಾರ್ಥಿಗಳಿಗೆ 6.23 ಹಾಗೂ 21 ST ವಿದ್ಯಾರ್ಥಿಗಳಿಗೆ 5.93 ಇತ್ತು. IIT ಪರೀಕ್ಷೆಗಳಲ್ಲಿ SC ಮತ್ತು ST ವಿದ್ಯಾರ್ಥಿಗಳು ಅವರ ಸಾಧನೆಯಲ್ಲಿ ಸಾಮಾನ್ಯ ಪ್ರವರ್ಗದ ವಿದ್ಯಾರ್ಥಿಗಳಿಗಿಂತ ಸಾಕಷ್ಟು ಹಿಂದೆ ಬಿದ್ದಿರುತ್ತಾರೆ ಎನ್ನುವುದು ಸ್ಪಷ್ಟವಾಗಿದೆ, ಮತ್ತು ಆಶ್ಚರ್ಯಕರವೇನಲ್ಲ. ಮೇಲಾಗಿ, ಪದವಿ ಪಡೆದವರು ಸಾಮಾನ್ಯವಾಗಿ ಸಾಮಾನ್ಯ ಪ್ರವರ್ಗದಡಿಯಲ್ಲಿ ಪ್ರವೇಶ ದಾಖಲಾತಿ ಪಡೆದ ಅವರ ಸಮಾನಸ್ಕಂಧರಿಗಿಂತ ಹೆಚ್ಚು ವರ್ಷಗಳನ್ನು ತೆಗೆದುಕೊಳ್ಳುತ್ತಾರೆ. ಇನ್ನೂ, ಈಗ ಪ್ರತಿಷ್ಠಿತ IIT ಸಂಸ್ಥೆಗಳಲ್ಲಿ SC ಮತ್ತು ST ವಿದ್ಯಾರ್ಥಿಗಳು ಪದವಿ ಪಡೆಯುವ ಪ್ರಮಾಣವು 80% ಗಿಂತ ಹೆಚ್ಚಿರುವುದು ಮೀಸಲಾತಿ ಸೀಟುಗಳ ಈ ಫಲಾನುಭವಿಗಳು ಮತ್ತು ಅವರನ್ನು ಸೇರಿಸಿಕೊಳ್ಳುವ ಸಂಸ್ಥೆಗಳು ಪ್ರಮುಖವಾದಂತಹ ಯಶಸ್ಸುಗಳನ್ನು ಸಾಧಿಸುತ್ತಿದ್ದಾರೆ ಎಂಬುದನ್ನು ಸೂಚಿಸುತ್ತದೆ.

**ಮೀಸಲಾತಿ ನೀತಿ ಫಲಾನುಭವಿಗಳ ಸಾಪೇಕ್ಷ ಕಳಪೆ ಶೈಕ್ಷಣಿಕ ಮಟ್ಟದ ಸಾಧನೆಗಿರುವ ಕಾರಣಗಳು**

ಉನ್ನತ ಶಿಕ್ಷಣದಲ್ಲಿ SC ಮತ್ತು ST ವಿದ್ಯಾರ್ಥಿಗಳ ಅನುಭವವನ್ನು ಅಧ್ಯಯನ ಮಾಡಿರುವ ವಿದ್ವಾಂಸರು ಸಂಸ್ಥೆ, ಸನ್ನಿವೇಶಗಳು ಮತ್ತು ಸಮಯ ಅವಧಿಗೆ ಅನುಗುಣವಾಗಿ, ಪದವಿ ಪ್ರಮಾಣಗಳಲ್ಲಿ ಕಂಡುಬಂದ ವ್ಯಾಪಕವಾದ ವ್ಯತ್ಯಾಸಗಳನ್ನು ವರದಿ ಮಾಡುತ್ತಾರೆ. ಆದಾಗ್ಯೂ, SC ಮತ್ತು ST ವಿದ್ಯಾರ್ಥಿಗಳ ಶೈಕ್ಷಣಿಕ ಸಾಧನೆಯು ಸರಾಸರಿ ಅವರ ಸಮಾನಸ್ಕಂಧರಿಗಿಂತ ಬಹಳಷ್ಟು ಕಡಮೆ ಇದೆ ಎಂಬ ತೀರ್ಮಾನಕ್ಕೆ ಅವರಲ್ಲಿ ಒಮ್ಮತವಿದೆ. SC ಮತ್ತು ST ವಿದ್ಯಾರ್ಥಿಗಳು ಸಾಮಾನ್ಯವಾಗಿ ಹೆಚ್ಚು ಪ್ರತಿಷ್ಠಿತವಿರದ ವಿಶ್ವವಿದ್ಯಾಲಯಗಳನ್ನು ಪ್ರವೇಶಿಸುತ್ತಾರೆ, ಹೆಚ್ಚು ಅವಕಾಶಗಳಿರದಂತಹ ಅಧ್ಯಯನ ಕ್ಷೇತ್ರಗಳಲ್ಲಿ ಕಂಡುಬರುತ್ತಾರೆ, ಅವರ ಪದವಿ ಶಿಕ್ಷಣವನ್ನು ಪೂರ್ಣಗೊಳಿಸಲು ಹೆಚ್ಚಿನ ಅವಧಿಯನ್ನು ತೆಗೆದುಕೊಳ್ಳುತ್ತಾರೆ, ಹೆಚ್ಚಿನ ಪ್ರಮಾಣದಲ್ಲಿ ಶಿಕ್ಷಣವನ್ನು ಅರ್ಧಕ್ಕೆ ನಿಲ್ಲಿಸುತ್ತಾರೆ, ಮತ್ತು ಅವರ ಪರೀಕ್ಷೆಗಳಲ್ಲಿ ಕಡಮೆ ಅಂಕಗಳನ್ನು ತೆಗೆದುಕೊಳ್ಳುತ್ತಾರೆ. ಈ ವಿದ್ಯಾರ್ಥಿಗಳಲ್ಲಿ ಹೆಚ್ಚಿನವರು ಯಾವುದೋ ಒಂದು ರೀತಿಯಲ್ಲಿ ಭಾರತದ ಮೀಸಲಾತಿ ನೀತಿಗಳಿಂದ ಪ್ರಯೋಜನ ಪಡೆಯುವಂತರಾಗಿದ್ದು ಅವರ ಸಾಪೇಕ್ಷ ಕಳಪೆ ಸಾಧನೆಗೆ ನೀಡಬಹುದಾದಂತಹ ಸಮಂಜಸವಾದ ಕಾರಣಗಳಿಗೇನೂ ಕೊರತೆ ಇಲ್ಲ.

ಮೊದಲನೆಯದಾಗಿ, ಸಾಪೇಕ್ಷ ಕೆಲವು ಅಪವಾದಗಳನ್ನು ಹೊರತುಪಡಿಸಿ, SC ಮತ್ತು ST ವಿದ್ಯಾರ್ಥಿಗಳು ಅವರ ಸಮಾನಸ್ಕಂಧರಿಗಿಂತ ವಿಭಿನ್ನವಾದ ಹೆಚ್ಚು ಸವಲತ್ತುಗಳಿಲ್ಲದ ಸಮಾಜೋ-ಆರ್ಥಿಕ ಹಿನ್ನೆಲೆಗಳಿಂದ ಬರುತ್ತಾರೆ. ಹಿಂದಿನ ವಿಭಾಗದಲ್ಲಿ ಉಲ್ಲೇಖಿಸಲಾದ ಎಲ್ಲ ವಿದ್ವಾಂಸರ ಅಧ್ಯಯನಗಳು ಸಾಪೇಕ್ಷವಾಗಿ SC ಮತ್ತು ST ವಿದ್ಯಾರ್ಥಿಗಳ ಕೆಳ ಮಟ್ಟದ ಸಮಾಜೋ-ಆರ್ಥಿಕ ಸ್ಥಿತಿಗೆ ಪುರಾವೆಯನ್ನು ಒದಗಿಸುತ್ತವೆ. ಉದಾಹರಣೆಗೆ, ತಮ್ಮ ಮಾದರಿಯಲ್ಲಿನ SC ವಿದ್ಯಾರ್ಥಿಗಳಲ್ಲಿ ಕೇವಲ 5% ಅಷ್ಟು ಮಾತ್ರ ಕಾಲೇಜು-ಶಿಕ್ಷಿತರಾದ ಕನಿಷ್ಠ ಒಬ್ಬ ಪಾಲಕರನ್ನು ಹೊಂದಿದ್ದರೆ, ಅದೇ SC ಪ್ರವರ್ಗಕ್ಕೆ

ಸೇರದ ವಿದ್ಯಾರ್ಥಿಗಳಲ್ಲಿ ಆ ಪ್ರಮಾಣವು ಶೇಕಡ 32% ಇತ್ತು; ಪಾಲಕರಿಬ್ಬರೂ ಅಶಿಕ್ಷಿತರಾಗಿರುವುದಕ್ಕೆ ಸಂಬಂಧಿಸಿದಂತೆ SC ವಿದ್ಯಾರ್ಥಿಗಳಲ್ಲಿ ಅದು 34% ಇದ್ದರೆ, SC ಪ್ರವರ್ಗಕ್ಕೆ ಸೇರದ ವಿದ್ಯಾರ್ಥಿಗಳಲ್ಲಿ ಅದು 11% ಇತ್ತು ಎಂಬುದನ್ನು ಐಕಾರಾ (1980:ಕೋಷ್ಟಕ 4.2) ಅವರು ಕಂಡುಕೊಂಡರು. ಇದಲ್ಲದೆ, 88% ರಷ್ಟು SC ವಿದ್ಯಾರ್ಥಿಗಳು ಅವರ ವಿದ್ಯಾಭ್ಯಾಸವನ್ನು ಬೆಂಬಿಸಲು ಕನಿಷ್ಠ ಭಾಗಶಃ ವಿದ್ಯಾರ್ಥಿವೇತನವನ್ನು ಪಡೆಯುತ್ತಿದ್ದರು, ಮತ್ತು ಅವರಲ್ಲಿ ಕೇವಲ 4% ರಷ್ಟು ಮಾತ್ರ ಧನಸಹಾಯದ ಬೆಂಬಲಕ್ಕಾಗಿ ಅವರ ಪಾಲಕರು ಅಥವಾ ಬಂಧುಗಳ ಮೇಲೆ ಹೆಚ್ಚಿನದಾಗಿ ಅಥವಾ ಸಂಪೂರ್ಣವಾಗಿ ಅವಲಂಬಿತರಾಗಿದ್ದರು; ಆದರೆ ಅನುರೂಪವಾಗಿ SC ಪ್ರವರ್ಗಕ್ಕೆ ಸೇರದ ವಿದ್ಯಾರ್ಥಿಗಳಲ್ಲಿ ಆ ಪ್ರಮಾಣವು ಅನುಕ್ರಮವಾಗಿ 14% ಮತ್ತು 64% ಇತ್ತು. ಪರೀಕ್ಷೆಗಳಲ್ಲಿ ನಾಪಾಸಾಗುವುದು SC ವಿದ್ಯಾರ್ಥಿಗಳು ಕಾಲೇಜನ್ನು ಅರ್ಧದಲ್ಲೇ ಬಿಡುವುದಕ್ಕೆ ಇದ್ದ ಮೂಲ ಕಾರಣ ಎಂದು ಸಹ ಐಕಾರಾ (1980: ಕೋಷ್ಟಕ 3) ಗಮನಿಸಿದರು; ಆದರೆ ಬಹುಮಟ್ಟಿಗೆ ಅಷ್ಟೇ ಮುಖ್ಯವಾದ ಕಾರಣ ತಮ್ಮ ಹಾಗೂ ತಮ್ಮ ಕುಟುಂಬದವರಿಗೆ ಆರ್ಥಿಕ ಬೆಂಬಲವನ್ನು ಒದಗಿಸುವ ಸಲುವಾಗಿ ಉದ್ಯೋಗವನ್ನು ಹುಡುಕಿಕೊಳ್ಳುವ ಆಗತ್ಯತೆ ಆಗಿತ್ತು. SC ವಿದ್ಯಾರ್ಥಿಗಳಲ್ಲಿ ಕಾಲೇಜನ್ನು ತೊರೆಯುವ (wastage) ಮತ್ತು ಅದೇ ತರಗತಿಯಲ್ಲಿ ಉಳಿಯುವ (stagnation) ಹೆಚ್ಚಿನ ಸಂಭವವನ್ನು ಕಡಮೆಮಾಡಬೇಕೆಂದರೆ ಗಮನಾರ್ಹವಾಗಿ ಹೆಚ್ಚಿನ ಮಟ್ಟದಲ್ಲಿನ ಹಣಕಾಸಿನ ನೆರವು ಅಗತ್ಯವೆಂದು ಐಕಾರಾ ತೀರ್ಮಾನಿಸಿದರು.

ಪುಣೆಯ ಬಿ.ಜೆ ವೈದ್ಯಕೀಯ ಕಾಲೇಜಿನ ವಿದ್ಯಾರ್ಥಿಗಳ ಕುರಿತು ನಡೆಸಿದ ತಮ್ಮ ಅಧ್ಯಯನದಲ್ಲಿ ಸಾಮಾನ್ಯ ಪ್ರವರ್ಗದಡಿಯಲ್ಲಿ ಪ್ರವೇಶ ದಾಖಲಾತಿ ಪಡೆದ ವಿದ್ಯಾರ್ಥಿಗಳ ಶೇಕಡ 40% ಪಾಲಕರು ಅಥವಾ ಪೋಷಕರು ವೃತ್ತಿಪರ ಉದ್ಯೋಗದಲ್ಲಿದ್ದರೆ ಅವರಲ್ಲಿ ಕೇವಲ ಶೇಕಡ 1% ಮಾತ್ರ ಕೂಲಿಕಾರ್ಮಿಕರಾಗಿದ್ದರು ಎಂದು ಪಟವರ್ಧನ್ ಮತ್ತು ಪಾಲ್ಶೀಕರ್ (1992) ಕಂಡುಕೊಂಡರು; ಅಲ್ಲದೆ ಸಾಮಾನ್ಯ ಪ್ರವರ್ಗದಡಿಯಲ್ಲಿ ಪ್ರವೇಶ ದಾಖಲಾತಿ ಪಡೆದ ಶೇಕಡ 53% ರಷ್ಟು ವಿದ್ಯಾರ್ಥಿಗಳು ಬ್ರಾಹ್ಮಣ ಕುಟುಂಬಗಳಿಂದ ಬಂದವರಾಗಿದ್ದರು ಎಂದೂ ಸಹ ಕಂಡುಕೊಂಡರು. SC ಮತ್ತು ST - ಎರಡೂ ಪ್ರವರ್ಗದ ವಿದ್ಯಾರ್ಥಿಗಳ ಪಾಲಕರು ಅಥವಾ ಪೋಷಕರಲ್ಲಿ ಕೇವಲ ಶೇಕಡ 9% ರಷ್ಟು ಮಾತ್ರ ವೃತ್ತಿಪರ ಉದ್ಯೋಗದಲ್ಲಿದ್ದರು, ಹಾಗೂ ಕೂಲಿಕಾರ್ಮಿಕರಾಗಿ ಶೇಕಡ 21% (SC ಪ್ರವರ್ಗ) ಮತ್ತು 17% (ST ಪ್ರವರ್ಗ) ರಷ್ಟು ಇದ್ದರು.

ಪ್ರತಿಷ್ಠಿತ IIT ಸಂಸ್ಥೆಗಳಲ್ಲಿ, ಸಾಮಾಜಿಕ ಮತ್ತು ಆರ್ಥಿಕ ಪರಿಸ್ಥಿತಿಗೆ ಸಂಬಂಧಿಸಿದಂತೆ SC ಮತ್ತು ST ವಿದ್ಯಾರ್ಥಿಗಳ ಕುಟುಂಬ ಹಿನ್ನೆಲೆಗಳು ಸಾಪೇಕ್ಷವಾಗಿ ಉನ್ನತವಾಗಿದ್ದರೂ ಸರಾಸರಿಯಾಗಿ ಸಾಮಾನ್ಯ ಪ್ರವರ್ಗದಡಿಯಲ್ಲಿ ಪ್ರವೇಶ ದಾಖಲಾತಿ ಪಡೆದ ವಿದ್ಯಾರ್ಥಿಗಳಿಗಿಂತ ಬಹಳಷ್ಟು ಕೆಳಗಿತ್ತು. ತಮ್ಮ ಮಾದರಿಯಲ್ಲಿನ IITಗಳಲ್ಲಿ ಓದುತ್ತಿದ್ದ ಶೇಕಡ 54% ಸಾಮಾನ್ಯ ಪ್ರವರ್ಗದಡಿಯಲ್ಲಿ ಪ್ರವೇಶ ದಾಖಲಾತಿ ಪಡೆದ ವಿದ್ಯಾರ್ಥಿಗಳ ತಂದೆಯಂದಿರು ಉನ್ನತ ಕಾರ್ಯನಿರ್ವಾಹಕ ಸ್ಥಾನದಲ್ಲಿದ್ದರು ಹಾಗೂ 22% ವಿದ್ಯಾರ್ಥಿಗಳ ತಂದೆಯಂದಿರು ಶಿಕ್ಷಣ ತಜ್ಞರಾಗಿದ್ದರು; ಶೇಕಡ 66% ವಿದ್ಯಾರ್ಥಿಗಳ ತಂದೆಯಂದಿರು

ಸ್ನಾತಕೋತ್ತರ ಅಥವಾ ವೃತ್ತಿಪರ ಪದವಿಗಳನ್ನು ಹೊಂದಿದ್ದರು ಎಂದು ಕಿರ್ಪಾಲ್ ಮತ್ತು ಗುಪ್ತಾರವರು ವರದಿ (1999:ಕೋಷ್ಟಕ 2.3, 2.4) ಮಾಡಿದರು. ಅನುರೂಪವಾಗಿ SC ವಿದ್ಯಾರ್ಥಿಗಳಿಗೆ ಈ ಅಂಕಿಅಂಶಗಳು ಕ್ರಮವಾಗಿ 27%, 21%, ಹಾಗೂ 34% ಇತ್ತು; ಮತ್ತು ST ವಿದ್ಯಾರ್ಥಿಗಳಲ್ಲಿ ಅದು ಕ್ರಮವಾಗಿ 29%, 10%, ಹಾಗೂ 24% ಇತ್ತು. ಸಾಮಾನ್ಯ ಪ್ರವರ್ಗದಡಿಯಲ್ಲಿ ಪ್ರವೇಶ ದಾಖಲಾತಿ ಪಡೆದ ವಿದ್ಯಾರ್ಥಿಗಳಲ್ಲಿ ಶೇಕಡ 84% ರಷ್ಟು ಮಾಧ್ಯಮಿಕ ಶಾಲೆಗಳಲ್ಲಿ ಇಂಗ್ಲಿಷ್ ಮಾಧ್ಯಮದ ಶಿಕ್ಷಣವನ್ನು ಪಡೆದವರಾಗಿದ್ದರೆ SC ವಿದ್ಯಾರ್ಥಿಗಳಲ್ಲಿ ಆ ಪ್ರಮಾಣವು ಶೇಕಡ 63% ಹಾಗೂ ST ವಿದ್ಯಾರ್ಥಿಗಳಲ್ಲಿ ಶೇಕಡ 38% ಇತ್ತು ಎಂದೂ ಸಹ ಕಿರ್ಪಾಲ್ ಮತ್ತು ಗುಪ್ತಾ (1999: ಕೋಷ್ಟಕ 2.7) ವರದಿ ಮಾಡಿದರು.

ಮುಂಬೈ ವೈದ್ಯಕೀಯ ಕಾಲೇಜುಗಳನ್ನು ಕುರಿತು ಮಾಡಿದ ತಮ್ಮ ಅಧ್ಯಯನದಲ್ಲಿ, ಸಾಮಾನ್ಯವಾಗಿ ಈ ಕಾಲೇಜಿಗೆ ಸೇರುವ SC ವಿದ್ಯಾರ್ಥಿಗಳು ಕಳಪೆ ಮಟ್ಟದ ಸಮಾಜೋ-ಆರ್ಥಿಕ ಹಾಗೂ ಶೈಕ್ಷಣಿಕ ಹಿನ್ನೆಲೆಗಳನ್ನು ಹೊಂದಿರುವುದನ್ನು ವೆಲಾಸ್ಕರ್ (1986) ದೃಢೀಕರಿಸಿರುತ್ತಾರೆ, ಮತ್ತು ಅದು ಅವರ ಶೈಕ್ಷಣಿಕ ಸಾಧನೆಯು OBC ವಿದ್ಯಾರ್ಥಿಗಳ ಅಥವಾ ಸಾಮಾನ್ಯ ಪ್ರವರ್ಗದಡಿಯಲ್ಲಿ ಪ್ರವೇಶ ದಾಖಲಾತಿ ಪಡೆದ ವಿದ್ಯಾರ್ಥಿಗಳಿಗಿಂತ ಬಹಳಷ್ಟು ಕಳಪೆಯಾಗಿರುವುದಕ್ಕೆ ಕಾರಣ ಎಂದು ವಿವರಿಸಿ ಸಹಾಯ ಮಾಡುತ್ತದೆ. SC ವಿದ್ಯಾರ್ಥಿಗಳು ಇತರ ವರ್ಗದ ವಿದ್ಯಾರ್ಥಿಗಳಿಗೆ ಹೋಲಿಸಿದರೆ ಕಡಮೆ ಗುಣಮಟ್ಟದ ಪ್ರಾಥಮಿಕ ಹಾಗೂ ಮಾಧ್ಯಮಿಕ ಶಾಲೆಗಳಿಗೆ ಹೋಗುತ್ತಾರೆ; ಮತ್ತು ಇತರ ವರ್ಗದ ಅನೇಕ ಮಕ್ಕಳಿಗೆ ಸ್ವತಃ ತಮನ್ನು ಪರೀಕ್ಷೆಗಳಿಗೆ ಉತ್ತಮವಾಗಿ ತಯಾರಿಮಾಡಿಕೊಳ್ಳಲು ಅನುವುಮಾಡಿಕೊಡುವಂತಹ ವಿಶೇಷ ರೀತಿಯದ ಬೋಧನೆ ಅಥವಾ ಸಿದ್ಧಗೊಳಿಸುವ ತರಗತಿಗಳಿಗೆ ಸೇರಲು ಸಾಧ್ಯವಾಗುವಂತೆ ಅವರಲ್ಲಿ ಕೆಲವೇ ಕೆಲವರಿಗಷ್ಟೇ ಆರ್ಥಿಕವಾಗಿ ಸಾಧ್ಯವಾಗುವುದು. ಆದಾಗ್ಯೂ, ಇತರ ಅನೇಕ ವಿದ್ವಾಂಸರು ಗಮನಿಸಿದಂತೆಯೇ, ವೆಲಾಸ್ಕರ್ ಅವರು ಕೂಡ ಇತರ ಪ್ರವರ್ಗದ ವಿದ್ಯಾರ್ಥಿಗಳಿಗೆ ಸರಿಸಾಟಿಯಾಗಿ ಸಾಧನೆ ಮಾಡುವಂತಹ SC ವಿದ್ಯಾರ್ಥಿಗಳು ಅಲ್ಪ ಸಂಖ್ಯೆಯಲ್ಲಿರುವುದನ್ನು ಗಮನಿಸಿದರು. ಆದರೆ ಅಂಥ SC ವಿದ್ಯಾರ್ಥಿಗಳು, ಎಲ್ಲೋ ಕೆಲವು ಅಸಾಧಾರಣದ ಅಪವಾದಗಳನ್ನು ಹೊರತುಪಡಿಸಿದರೆ, ಆರ್ಥಿಕವಾಗಿ ಉತ್ತಮ ಸ್ಥಿತಿಯುಳ್ಳ ಕುಟುಂಬಗಳಿಂದ ಬಂದಿರುತ್ತಾರೆ ಮತ್ತು ಇಂಗ್ಲಿಷ್ ಮಾಧ್ಯಮದ ಪ್ರೌಢ ಶಾಲೆಗಳಲ್ಲಿ ಶಿಕ್ಷಣ ಪಡೆದಂತವರಾಗಿರುತ್ತಾರೆ.

ಹೆಚ್ಚಿನ SC ವಿದ್ಯಾರ್ಥಿಗಳ ಸಾಪೇಕ್ಷ ಕಳಪೆ ಮಟ್ಟದ ಶೈಕ್ಷಣಿಕ ಸಾಧನೆಯನ್ನು ಅವರ ಸಮಾಜೋ-ಆರ್ಥಿಕ ಹಿನ್ನೆಲೆಗಳಲ್ಲಿನ ವ್ಯತ್ಯಾಸಗಳಿಗಿಂತ ಹೆಚ್ಚಿನದಾಗಿ ಅವರ ಸಮಾಜೋ-ಸಾಂಸ್ಕೃತಿಕ ಹಿನ್ನೆಲೆಗಳಲ್ಲಿನ ವ್ಯತ್ಯಾಸಗಳ ಮೂಲಕ ವಿವರಿಸಬಹುದು ಎಂದು ವೆಲಾಸ್ಕರ್ ವಾದಿಸುತ್ತಾರೆ. SC ವಿದ್ಯಾರ್ಥಿಗಳ ಕುಟುಂಬಗಳು ಖಂಡಿತವಾಗಿಯೂ ಉಳ್ಳವರಲ್ಲ, ಆದಾರೆ - ಆಗಾಗ ಇರುತ್ತಿದ್ದ ಹಣಕಾಸಿನ ಸಮಸ್ಯೆಗಳ ಹೊರತಾಗಿಯೂ - 1980 ರ ದಶಕದ ಹೊತ್ತಿಗೆ ಅವರ ಸಮಾಜೋ-ಆರ್ಥಿಕ ಸ್ಥಿತಿಯನ್ನು (ಎಸ್‌ಇಎಸ್ (SES–socio–economic status)) ಸಾಮಾನ್ಯ ಪ್ರವರ್ಗದಡಿಯಲ್ಲಿ ಪ್ರವೇಶ ದಾಖಲಾತಿ ಪಡೆದ ವಿದ್ಯಾರ್ಥಿಗಳ (ಹೆಚ್ಚು ಉಳ್ಳವರಲ್ಲದ) ಒಂದು ಗಮನಾರ್ಹ ಪ್ರಮಾಣದಷ್ಟು ಕುಟುಂಬಗಳಿಗೆ

ಹೋಲಿಸಬಹುದಿತ್ತು. ಸಾಮಾನ್ಯ ಪ್ರವರ್ಗದಡಿಯಲ್ಲಿ ಪ್ರವೇಶ ದಾಖಲಾತಿ ಪಡೆದ ವಿದ್ಯಾರ್ಥಿಗಳಿಗೆ ಸಂಬಂಧಿಸಿದಂತೆ SC ವಿದ್ಯಾರ್ಥಿಗಳಲ್ಲಿರುವ ಒಂದು ಹೆಚ್ಚು ಗಮನಾರ್ಹ ಕೊರತೆಯೇನೆಂದರೆ ಅದು ಅವರಲ್ಲಿನ 'ಸಾಮಾಜಿಕ ಸಂಪತ್ತು.' SC ವಿದ್ಯಾರ್ಥಿಗಳು ಅನುಭವಿಸುವ ಸಾಮಾಜಿಕ ಸಂಪತ್ತಿನ ಕೊರತೆಗೆ ಅವರ ಹೆಚ್ಚು ಶಿಕ್ಷಣ ಪಡೆದಿರದಂತಹ ಕುಟುಂಬ ಸದಸ್ಯರು, ಜ್ಞಾನವನ್ನು ವರ್ಧಿಸುವ ಸಾಂಸ್ಕೃತಿಕ ಚಟುವಟಿಗಳಲ್ಲಿ ಹೆಚ್ಚು ಭಾಗವಹಿಸದಿರುವಿಕೆ, ಮತ್ತು ಸಾಮಾನ್ಯವಾಗಿ ಕಲಿಕೆಗೆ ಹೆಚ್ಚು ಅನುಕೂಲವಾಗಿರದ ಮನೆಯ ವಾತಾವರಣವು ಸಾಕ್ಷಿಯಾಗಿದೆ. ಎಲ್ಲಕ್ಕಿಂತ ನಿರ್ಣಾಯಕವಾಗಿ, SC ವಿದ್ಯಾರ್ಥಿಗಳಿಗೆ ಸಾಮಾನ್ಯವಾಗಿ ಆಧುನಿಕ ಭಾರತದಲ್ಲಿ ಸಾಮಾಜಿಕ ಸಂಪತ್ತಿನ ಅತಿಮುಖ್ಯ ಮೂಲ ಎಂದು ಪರಿಗಣಿಸಲಾಗುವ ಇಂಗ್ಲಿಷ್ ಭಾಷೆಯ ಮೇಲೆ ಒಳ್ಳೆಯ ಹಿಡಿತವಿಲ್ಲದಿರುವುದು ಕೊರತೆಯಾಗಿದೆ.[16] SC ವಿದ್ಯಾರ್ಥಿಗಳ ಮಟ್ಟದಷ್ಟೇ ಸಮಾಜೋ-ಆರ್ಥಿಕ ಹಿನ್ನೆಲೆಯನ್ನು ಹೊಂದಿರುವಂತ ಸಾಮಾನ್ಯ ಪ್ರವರ್ಗದಡಿಯಲ್ಲಿ ಪ್ರವೇಶ ದಾಖಲಾತಿ ಪಡೆದ ವಿದ್ಯಾರ್ಥಿಗಳು ಗಮನಾರ್ಹವಾಗಿ ಉತ್ತಮವಾದ ಇಂಗ್ಲಿಷ್ ಭಾಷೆಯ ಸಾಮರ್ಥ್ಯಗಳನ್ನೂ ಒಳಗೊಂಡಂತೆ ಹೆಚ್ಚು ದೊಡ್ಡ ಪ್ರಮಾಣದಲ್ಲಿ ಸಾಮಾಜಿಕ ಸಂಪತ್ತನ್ನು ಹೊಂದಿರುವ ಹೆಚ್ಚು ಸಾಧ್ಯತೆ ಇದೆ. ಸಾಮಾನ್ಯ ಪ್ರವರ್ಗದಡಿಯಲ್ಲಿ ಪ್ರವೇಶ ದಾಖಲಾತಿ ಪಡೆದ ವಿದ್ಯಾರ್ಥಿಗಳಲ್ಲಿ ಬ್ರಾಹ್ಮಣರ ಅತಿ-ಪ್ರಾತಿನಿಧ್ಯವೂ ಕೂಡ, ಉನ್ನತ ಸಮಾಜೋ-ಆರ್ಥಿಕ ಸ್ಥಾನಮಾನಕ್ಕಿಂತ ಭಿನ್ನವಾಗಿರುವಂತಹ ಒಂದು ಬಲವದ ಸಮಾಜೋ-ಸಾಂಸ್ಕೃತಿಕ ಹಿನ್ನೆಲೆಯು ಮಹತ್ವವೆಂದು ಸೂಚಿಸುತ್ತದೆ. ಅನೇಕ ಬ್ರಾಹ್ಮಣ ಕುಟುಂಬಗಳ ಸಮಾಜೋ-ಆರ್ಥಿಕ ಸ್ಥಾನಮಾನವು ಕೆಳಮಟ್ಟದಲ್ಲಿ ಇದೆಯಾದರೂ ಅಂತಹ ಕುಟುಂಬಗಳೂ ಸಹ ಸಾಮಾಜಿಕ ಸಂಪತ್ತಿಗೆ ಸಂಬಂಧಿಸಿದಂತೆ ದಲಿತ ಕುಟುಂಬಗಳಿಗಿಂತ ಹೆಚ್ಚು ಸಿರಿವಂತರಾಗಿರುವ ಸಾಧ್ಯತೆ ಇದೆ.

ಸಾಮಾನ್ಯವಾಗಿ ಅವರ ಶೈಕ್ಷಣಿಕ ಹಿನ್ನೆಲೆಗಳು ಹಾಗೂ ಸಾಧನೆ ಕೆಳ ಮಟ್ಟದು ಎಂಬ ಕಾರಣಕಷ್ಟೇ ಬಲವಾಗಿ ಅವರ ಸಮಾಜೋ-ಸಾಂಸ್ಕೃತಿಕ ಹಿನ್ನೆಲೆಗಳ ಕಾರಣಕ್ಕೆ ಇತರ ವಿದ್ಯಾರ್ಥಿಗಳು SC ವಿದ್ಯಾರ್ಥಿಗಳನ್ನು ತಮ್ಮ ಸರಿಸಮ ಎಂಬಂತೆ ಸ್ವೀಕರಿಸುವುದಿಲ್ಲ ಎಂದು ವೆಲಾಸ್ಕರ್ ಸೂಚಿಸುತ್ತಾರೆ. ಈ IITಗಳಲ್ಲಿಯೂ ಅದೇ ರೀತಿಯ ವಾಸ್ತವಕ್ಕೆ ಕಿರ್ಪಾಲ್ ಮತ್ತು ಗುಪ್ತಾ (1999: 4 ಮತ್ತು 5ನೆಯ ಅಧ್ಯಾಯ) ಬಹಳಷ್ಟು ಪುರಾವೆಯನ್ನು ಮುಂದಿಡುತ್ತಾರೆ. ಹೆಚ್ಚು ಸವಲತ್ತುವುಳ್ಳ ಸಾಮಾನ್ಯ ಪ್ರವರ್ಗದಡಿಯಲ್ಲಿ ಪ್ರವೇಶ ದಾಖಲಾತಿ ಪಡೆಯುವ ವಿದ್ಯಾರ್ಥಿಗಳು ಸಾಮಾನ್ಯವಾಗಿ ಶೈಕ್ಷಣಿಕ ಯಶಸ್ಸಿಗೆ ಹೆಚ್ಚು ಅನುಕೂಲವಾದ ಮನೆಯ ವಾತಾವರಣದಿಂದ ಪ್ರಯೋಜನ ಪಡೆದಿರುತ್ತಾರಲ್ಲದೆ, ಶೈಕ್ಷಣಿಕವಲ್ಲದ ಸೌಲಭ್ಯಗಳು ಹಾಗೂ ಉತ್ತಮ ಶೈಕ್ಷಣಿಕ ಪರಿಸರವನ್ನೂ ಹೊಂದಿರುವ ಶಾಲೆಗಳಲ್ಲಿನ ಮಾಧ್ಯಮಿಕ ಶಿಕ್ಷಣದಿಂದಲೂ ಕೂಡ ಪ್ರಯೋಜನ ಪಡೆದಿರುತ್ತಾರೆ. ಇವೆಲ್ಲವೂ ಸಾಪೇಕ್ಷವಾಗಿ ಅವರ ಆತ್ಮವಿಶ್ವಾಸದ ಸ್ವಭಾವಕ್ಕೆ ಹಾಗೂ ಅವರ ಭಾಷಾ ಪ್ರೌಢಿಮೆಗೆ ಕಾರಣವಾಗಿದ್ದು, ಅವೆರಡೂ ಸಂದರ್ಶನಗಳು ಹಾಗೂ

---

[16] ಭಾರತದ ಶೈಕ್ಷಣಿಕ ಅಸಮಾನತೆಗೆ ಸಂಬಂಧಿಸಿದಂತೆ ಇಂಗ್ಲಿಷ್ ಭಾಷೆಯ ಪಾತ್ರವನ್ನು ಕುರಿತ ಒಂದು ಉಪಯುಕ್ತ ವಿಶ್ಲೇಷಣೆಗಾಗಿ ನೋಡಿ Kumar (1997).

ಮೌಖಿಕ ಪರೀಕ್ಷೆಗಳಲ್ಲಿ ಉಪಯೋಗಕ್ಕೆ ಬರುತ್ತವೆ. SC ಪ್ರವರ್ಗಕ್ಕೆ ಸೇರದ ವಿದ್ಯಾರ್ಥಿಗಳು ಅವರಿಗೆ ತೋರಿಸುವ ಅಸಡ್ಡೆಯ ಕಾರಣ SC ವಿದ್ಯಾರ್ಥಿಗಳು ಗಣನೀಯ ಪ್ರಮಾಣದಲ್ಲಿ ಸಾಮಾಜಿಕ ಅಂತರವನ್ನು ಅನುಭವಿಸುತ್ತಾರೆ ಮತ್ತು ಅದು ಸ್ವಂತ ಅವರದೇ ಕೀಳರಿಮೆಯ ಭಾವನೆಗಳಿಂದ ಮತ್ತಷ್ಟು ಹೆಚ್ಚಾಗುತ್ತದೆ. ಕಾಲೇಜುಗಳು ಮತ್ತು ವಿಶ್ವವಿದ್ಯಾಲಯಗಳಲ್ಲಿ SC ವಿದ್ಯಾರ್ಥಿಗಳಿಗೆ ತೋರಿಸುವ ಸಾಮಾಜಿಕ ತಾರತಮ್ಯತೆಯು ಭಾರತದ ವಾಸ್ತವದ ಒಂದು ಸತ್ಯ ಸಂಗತಿ; ಆದರೆ ಅದು ಮೂಲತಃ ಜಾತಿ ಅಸ್ಮಿತೆ ಆಧಾರಿತದ್ದಾಗಿದೆಯೇ ಅಥವಾ ಸಾಂಸ್ಕೃತಿಕ ಭಿನ್ನತೆಗಳ ಮೇಲೆ ಆಧಾರಿತದ್ದಾಗಿದೆಯೇ ಎಂಬುದು ಅಷ್ಟೇನೂ ಸ್ಪಷ್ಟವಾಗಿಲ್ಲ. ಈ ರೀತಿಯ ಪ್ರತಿಕೂಲ ಪರಿಸ್ಥಿತಿಗಳಿಂದ ಹೊರಬರಲು ಓರ್ವ SC ವಿದ್ಯಾರ್ಥಿಗೆ ವಿಶೇಷವಾದ ಒಂದು ಬಲವಾದ ಪ್ರೇರಣೆಯ ಅಗತ್ಯ ಮಾತ್ರವಲ್ಲದೆ, ಅದರ ಜೊತೆಗೆ ಸ್ನೇಹ ಹಾಗೂ ಇತರ ವಿದ್ಯಾರ್ಥಿಗಳಿಂದ ನೆರವನ್ನೂ ಒಳಗೊಂಡಂತೆ ಒಂದು ಅನುಕೂಲಕರ ಪರಿಸರದ ಅಗತ್ಯವೂ ಕೂಡ ಇದೆ.

1970ರ ದಶಕದಲ್ಲಿ ಹಾಗೂ 1980 ರ ಪೂರ್ವಾರ್ಧದಲ್ಲಿ ಆಂಧ್ರಪ್ರದೇಶದ ಹಲವು ಉನ್ನತ ಶೈಕ್ಷಣಿಕ ಸಂಸ್ಥೆಗಳ ಕುರಿತು ಅವರು ಇತರರೊಂದಿಗೆ ಕೈಗೊಂಡ ಸಮೀಕ್ಷೆಗಳನ್ನಾಧರಿಸಿದ ಸಂಶೋಧನಾ ಅಧ್ಯಯನಗಳ ಸರಣಿಯೊಂದರ ಬಗ್ಗೆ ಪರ್ಮಾಜಿ (Parmaji) (1985) ವರದಿ ಮಾಡುತ್ತಾರೆ. 'ಮುಂದುವರೆದ ಜಾತಿಗಳು' ಮತ್ತು 'ಹಿಂದುಳಿದ ಜಾತಿಗಳ' ನಡುವೆ ಹಾಗೂ SCಗಳು ಮತ್ತು STಗಳನ್ನು ಪ್ರತ್ಯೇಕಿಸುತ್ತಾ ಅವರು ವಿವಿಧ ಪರೀಕ್ಷೆಗಳಲ್ಲಿನ ಸಾಧನೆಯು ಜಾತಿಯ ಸ್ಥಾನಮಾನದೊಂದಿಗೆ ಒಂದು ಸಕಾರಾತ್ಮಕವಾದ ಹಾಗೂ ಗಮನಾರ್ಹವಾದ ಸಹಸಂಬಂಧ ಹೊಂದಿದೆ ಎಂಬುದನ್ನು ಕಂಡುಕೊಂಡರು. ಅವರು ಕೀಳುಮಾಡಿದ ಜಾತಿಗಳ ಸಾಪೇಕ್ಷವಾದ ಕಳಪೆ ಮಟ್ಟದ ಸಾಧನೆಗೆ ಕೆಳಮಟ್ಟದ ಸಮಾಜೋ-ಆರ್ಥಿಕ ಸ್ಥಾನಮಾನಕ್ಕಿಂತಲೂ ಹೆಚ್ಚಾಗಿ ಸಾಂಸ್ಕೃತಿಕ ಕೊರತೆಯು ಕಾರಣ ಎಂದವರು ಅಭಿಪ್ರಾಯಪಟ್ಟರು. ಏಕೆಂದರೆ, ಅದೇ ರೀತಿಯ ಸಮಾಜೋ-ಆರ್ಥಿಕ ಸ್ಥಾನಮಾನವನ್ನು ಹೊಂದಿದ್ದ ಜಾತಿಗಳಿಂದ ಬಂದಂತಹ ವಿದ್ಯಾರ್ಥಿಗಳಲ್ಲಿ 'ಸಂಸ್ಕೃತೀಕರಣ'ಗೊಂಡ ಜಾತಿಗಳ ಸಾಧನೆಯು ಇತರರಿಗಿಂತ ಉತ್ತಮವಾಗಿತ್ತು ಎಂದವರು ಕಂಡುಕೊಂಡರು. ಎಂ.ಎನ್ ಶ್ರೀನಿವಾಸ (M N Srinivas) (1962)ರ ಪರಿಕಲ್ಪನೆಯನ್ನು ಆಧರಿಸಿದ್ದ ಅವರ ಪರಿಕಲ್ಪನೆಯ ಪ್ರಕಾರ 'ಸಂಸ್ಕೃತೀಕರಣ' ವೆಂದರೆ ಕೀಳುಮಾಡಿದ ಜಾತಿಗಳು ಬ್ರಾಹ್ಮಣರ ಸಂಸ್ಕೃತಿಯನ್ನು ಅನುಕರಿಸಿದ್ದು ತತ್ಪರಿಣಾಮವಾಗಿ ಅವರು ಶ್ರೇಷ್ಠ ಭಾಷಾ ಸಾಮರ್ಥ್ಯಗಳನ್ನು ಮತ್ತು ಸಾಂಸ್ಕೃತಿಕ ಮಟ್ಟಗಳನ್ನು ದಕ್ಕಿಸಿಕೊಳ್ಳುವುದನ್ನು ಸೂಚಿಸುತ್ತದೆ ಎನ್ನುವುದಾಗಿತ್ತು. ಆಸಕ್ತಿದಾಯಕವೆಂದರೆ, ಒಂದು ವಸತಿ ಕಾಲೇಜು ಅಥವಾ ವಿಶ್ವವಿದ್ಯಾಲಯದಲ್ಲಿ ಉನ್ನತ ಶಿಕ್ಷಣವನ್ನು ಪಡೆಯುತ್ತಿದ್ದ ವಿದ್ಯಾರ್ಥಿಗಳಲ್ಲಿ, ಪ್ರವೇಶ ಪಡೆದಾಗಿನಿಂದ ಹಿಡಿದು ಪದವಿ ಪಡೆಯುವ ತನಕ ಅವರ ಪರೀಕ್ಷೆಯ ಸಾಧನೆಯಲ್ಲಿನ ಸುಧಾರಣೆಯ ಮಟ್ಟವು ವಿಲೋಮವಾಗಿ ಜಾತಿ ಸ್ಥಾನಮಾನಕ್ಕೆ (ಯಾವುದೇ ಒಂದು ದತ್ತ ಹಂತದಲ್ಲಿ ಕಂಡುಬರುವ ಪರಿಪೂರ್ಣ ಸಾಧನೆಗೆ ವಿರುದ್ಧವಾಗಿ) ಸಹಸಂಬಂಧವಿದೆ ಎಂದು ಸೂಚಿಸುವ ಕೆಲವು ಪುರಾವೆಯನ್ನೂ ಸಹ ಪರ್ಮಾಜಿಯವರು ಕಂಡುಕೊಂಡರು. ಅವರು ಶಿಕ್ಷಣದ ನಂತರದ ಒಂದು ಹಂತದಲ್ಲಿ ಒಂದು ಉತ್ತೇಜನಕಾರಿಯದ

ಸಾಮಾಜಿಕ ಪರಿಸರ ಲಭ್ಯವಾದರೆ ಅದು ಕೀಳುಮಾಡಿದ ಜಾತಿಗಳಿಗೆ ಮೊದಲಿದ್ದ ಸಾಂಸ್ಕೃತಿಕ ಅಭಾವವನ್ನು ನೀಗಿಸಬಹುದು ಎಂಬ ತೀರ್ಮಾನಕ್ಕೆ ಬರುತ್ತಾರೆ.

ಸಾಮಾಜಿಕ-ಆರ್ಥಿಕ ಸ್ಥಾನಮಾನಕ್ಕೂ ಶೈಕ್ಷಣಿಕ ಸಾಧನೆಗೂ ಇರುವ ಸಂಬಂಧವನ್ನು ಅಧ್ಯಯನ ಮಾಡಿರುವ ಎಲ್ಲಾ ವಿದ್ವಾಂಸರೂ ಉನ್ನತ ಸಮಾಜೋ-ಆರ್ಥಿಕ ಸ್ಥಾನಮಾನವು ಉನ್ನತ ಶೈಕ್ಷಣಿಕ ಸಂಸ್ಥೆಗಳಲ್ಲಿನ ಉತ್ತಮ ಶೈಕ್ಷಣಿಕ ಸಾಧನೆಯೊಂದಿಗೆ ಸಹಸಂಬಂಧವಿರುವುದನ್ನು ದೃಢೀಕರಿಸುತ್ತಾರೆ. ಇದು ಪ್ರತಿ ವಿದ್ಯಾರ್ಥಿಗಳ ಪ್ರಮುಖ ಪ್ರವರ್ಗಗಳಿಗೆ ಸಂಬಂಧಿಸಿದಂತೆ (ಸಾಮಾನ್ಯ ಪ್ರವರ್ಗದಡಿಯಲ್ಲಿ ಪ್ರವೇಶ ದಾಖಲಾತಿ ಪಡೆದ ವಿದ್ಯಾರ್ಥಿಗಳು, SC, ST ಇತ್ಯಾದಿ) ಹಾಗೂ ಇಡೀ ವಿದ್ಯಾರ್ಥಿ ಸಮುದಾಯದಾದ್ಯಂತ ಕೂಡ ನಿಜವಾಗಿದೆ. ಆದಾಗ್ಯೂ, ಈ ಸಹಸಂಬಂಧದಲ್ಲಿ ಅನಿರೀಕ್ಷಿತವಾದ ಒಂದು ಆಸಕ್ತಿದಾಯಕ ವಿಷಯವನ್ನು ಪಟವರ್ಧನ್ ಮತ್ತು ಪಾಲ್ಶೀಕರ್ (1992) ಗಮನಿಸಿರುತ್ತಾರೆ. ಪುಣೆಯ ಪ್ರಮುಖ ವೈದ್ಯಕೀಯ ಕಾಲೇಜಿನ ವಿದ್ಯಾರ್ಥಿಗಳ ಅವರ ಮಾದರಿಯೊಂದರಲ್ಲಿ, ಅತ್ಯಂತ ಕೆಳ ಸಮಾಜೋ-ಆರ್ಥಿಕ ಮಟ್ಟದಲ್ಲಿನ ಕುಟುಂಬಗಳಿಂದ ಬಂದಂತಹ ವಿದ್ಯಾರ್ಥಿಗಳು (ಅಶಿಕ್ಷಿತ ಮತ್ತು/ಅಥವಾ ಕೂಲಿಕಾರ್ಮಿಕರ ಕುಟುಂಬಗಳು) ಅವರ ಪರೀಕ್ಷೆಗಳಲ್ಲಿ ಮಧ್ಯಂತರದ ಸಮಾಜೋ-ಆರ್ಥಿಕ ಮಟ್ಟ (ಕೆಳ-ಸ್ತರದ ಸರ್ಕಾರಿ ನೌಕರರು, ಶಾಲಾ ಶಿಕ್ಷಕರು) ದಲ್ಲಿನ ಕುಟುಂಬಗಳಿಂದ ಬಂದಂತ ವಿದ್ಯಾರ್ಥಿಗಳಿಗಿಂತ ಉತ್ತಮ ಸಾಧನೆ ಮಾಡಿದ್ದರು ಎಂದವರು ಕಂಡುಕೊಂಡರು. ಅದೇ ರೀತಿಯಲ್ಲಿ, ದಲಿತರಲ್ಲಿಯೇ ವಿಶೇಷ ಅನುಕೂಲತೆಗಳಿಗೆ ಅರ್ಹರಾಗಿರುವ ಉಪಜಾತಿಯ ವಿದ್ಯಾರ್ಥಿಗಳ (ಮಹಾರ್ ಸಮುದಾಯ) ಸಾಧನೆಯು ಇತರ ದಲಿತ ಉಪಜಾತಿಯ ವಿದ್ಯಾರ್ಥಿಗಳ ಸಾಧನೆಯಷ್ಟು ಉತ್ತಮವಾಗಿರಲಿಲ್ಲ. ಕೆಳಗಿನ ಸ್ತರದಿಂದ ಮೇಲಿನ ಸ್ತರಕ್ಕೆ ಬರಲು ಇನ್ನೂ ಕೂಡ ಕಷ್ಟಪಡುತ್ತಿರುವಂತಹ ಕುಟಂಬಗಳಿಂದ ಬರುವ ವಿದ್ಯಾರ್ಥಿಗಳಿಗೆ ಹೋಲಿಸಿದರೆ, ಸಮಾಜೋ-ಆರ್ಥಿಕ ಹಾಗೂ ಜಾತಿಯ ಕೆಳಗಿನ ಸ್ತರದಿಂದ ಮೇಲಿನ ಸ್ತರಕ್ಕೆ ಬಂದಂತಹ ಕುಟಂಬಗಳಿಂದ ಬರುವ ವಿದ್ಯಾರ್ಥಿಗಳು ಹೆಚ್ಚು ತಲೆಕೆಡಿಸಿಕೊಳ್ಳದೆ (ಅವರಿಗೆ ದೊರೆಕಿದ ಸವಲತ್ತುಗಳ ಕಾರಣ) ಇರುವುದು ಅದಕ್ಕೆ ಕಾರಣವಿರಬಹುದು ಎಂದು ಲೇಖಕರು ಭಾವಿಸುತ್ತಾರೆ (ಪಟವರ್ಧನ್ ಮತ್ತು ಪಾಲ್ಶೀಕರ್ 1992:33-34).

## III

## ಮೀಸಲಾತಿ ನೀತಿ ಫಲಾನುಭವಿಗಳ ವಿಶ್ವವಿದ್ಯಾಲಯ-ನಂತರದ ವೃತ್ತಿ ಪಥಗಳ ಕುರಿತ ಪುರಾವೆ

ಸಕಾರಾತ್ಮಕ ತಾರತಮ್ಯತೆಯ ನೀತಿಗಳಿಗೆ ಅದರ ಉದ್ದೇಶಗಳನ್ನು ಸಾಧಿಸಲು ಎಷ್ಟರ ಮಟ್ಟಿಗೆ ಸಾಧ್ಯವಾಗಿದೆ ಎನ್ನುವುದನ್ನು ಅಳೆಯುವ ಯಾವುದೇ ಪ್ರಯತ್ನಗಳಲ್ಲಿ, ಫಲಾನುಭವಿಗಳ ದೀರ್ಘಾಧಿಯ ವೃತ್ತಿ ಪಥಗಳನ್ನು ಕುರಿತಿರುವ ಪುರಾವೆಯನ್ನು ಪರಿಗಣಿಸುವುದು ಅತಿಮುಖ್ಯ. ಈ ಬಗೆಯ ವ್ಯವಸ್ಥಿತವಾದ ಪುರಾವೆಯನ್ನು ಪಡೆದುಕೊಳ್ಳುವುದು ಕಷ್ಟ, ಏಕೆಂದರೆ ಕಾಲೇಜು ಮತ್ತು/ಅಥವಾ ವಿಶ್ವವಿದ್ಯಾಲಯದಿಂದ

ಪದವಿ ಪಡೆದ - ಅಥವಾ ಓದನ್ನು ಅರ್ಧಕ್ಕೇ ಬಿಟ್ಟ - ಹಲವು ವರ್ಷಗಳ ನಂತರ ಹಳೆಯ ವಿದ್ಯಾರ್ಥಿಗಳ ಪ್ರಾತಿನಿಧಿಕ ಮಾದರಿಗಳ ಪಥಗಳ ಕುರಿತು ಮಾಹಿತಿಯನ್ನು ಒಟ್ಟುಗೂಡಿಸುವುದನ್ನು ಬೇಡುತ್ತದೆ. ಆದ್ದರಿಂದ, ಭಾರತದ ಮೀಸಲಾತಿ ನೀತಿಗಳ SC ಮತ್ತು ST ಫಲಾನುಭವಿಗಳಿಗೆ ಸಂಬಂಧಿಸಿದ ವಿಷಯದಲ್ಲಿ ಕೆಲವಷ್ಟೇ ಅಂತಹ ವ್ಯವಸ್ಥಿತ ಪುರಾವೆ ಲಭ್ಯವಿರುವುದು ಆಶ್ಚರ್ಯಕರವಿಲ್ಲದಿದ್ದರೂ ಸಹ ವಿಷಾದನೀಯ. ನಿರ್ದಿಷ್ಟ ಸಂಸ್ಥೆಗಳಲ್ಲಿನ ಅವರ ಉನ್ನತ ಶಿಕ್ಷಣದ ಅನುಭವಗಳನ್ನು ಅನುಸರಿಸಿ ದಲಿತ ಮತ್ತು ಆದಿವಾಸಿ ವಿದ್ಯಾರ್ಥಿಗಳ ವೃತ್ತಿ ಪಥಗಳನ್ನು ಒಂದಲ್ಲ ಒಂದು ರೀತಿಯಲ್ಲಿ ಉದ್ದೇಶಿಸಿದ ನಾಲ್ಕು ಅಧ್ಯಯನಗಳ ಕುರಿತಿರುವ ಶೋಧಕಗಳನ್ನು ನಾನು ಇಲ್ಲಿ ವರದಿ ಮಾಡುತ್ತೇನೆ.[17]

ವಾಂಖೆಡೆಯವರು (1978) ಮಹಾರಾಷ್ಟ್ರದಲ್ಲಿನ ಔರಂಗಬಾದಿನ ಮಿಲಿಂದ್ ಕಲಾ ಕಾಲೇಜಿನ (MCA) ವಿದ್ಯಾರ್ಥಿಗಳ ಒಂದು ಮಾದರಿಯನ್ನು ಕುರಿತು ಅಂತಹ ಅಧ್ಯಯನ ಮಾಡಿದವರಲ್ಲಿ ಮೊದಲಿನವರಾಗಿದ್ದರು. ಭಾರತದಲ್ಲಿ ವಿಶೇಷವಾಗಿ ದಲಿತರಿಗೆಂದೇ ಸ್ಥಾಪಿಸಲ್ಪಟ್ಟ MCA ಕಾಲೇಜು ಮೊದಲ ಉನ್ನತ ಶಿಕ್ಷಣ ಸಂಸ್ಥೆಯಾಗಿದೆ. ಬಿ. ಆರ್. ಅಂಬೇಡ್ಕರ್‌ರವರಿಂದ ಸ್ಥಾಪಿಸಲ್ಪಟ್ಟು ಮತ್ತು ಅವರ People's Education Society (ಪೀಪಲ್ಸ್ ಎಜ್ಯುಕೇಶನ್ ಸೊಸೈಟಿ) ಯಿಂದ ನಡೆಸಲ್ಪಡುತ್ತಿದ್ದ ಅದು ನಂತರದಲ್ಲಿ ಅದೇ ಪ್ರಕಾರ ಔರಂಗಾಬಾದಿನಲ್ಲಿ ಅನೇಕ ಪ್ರೌಢಶಾಲೆಗಳನ್ನು ಮತ್ತು ಹಲವಾರು ಹೆಚ್ಚು ಕಾಲೇಜುಗಳನ್ನು (ಕಾನೂನು, ವಾಣಿಜ್ಯ, ವಿಜ್ಞಾನ) ಸ್ಥಾಪಿಸಿತು. ಈ ಸಂಸ್ಥೆಗಳಲ್ಲಿ, ಹೆಚ್ಚಿನ ವಿದ್ಯಾರ್ಥಿಗಳು ಮತ್ತು ಬೋಧನಾಂಗ ದಲಿತರೇ ಆಗಿರುತ್ತಾರೆ, ಮತ್ತು ವಿದ್ಯಾರ್ಥಿಗಳು ಭಾರತದಲ್ಲಿನ ಇತರ ಸರ್ಕಾರಿ ಪ್ರೌಢಶಾಲೆಗಳು ಮತ್ತು ಕಾಲೇಜುಗಳಲ್ಲಿ ಸಿಗುವುದಕ್ಕಿಂತ ಹೆಚ್ಚಿನದಾಗಿ ವಿದ್ಯಾರ್ಥಿವೇತನ, ವಿಶೇಷ ಸೌಲಭ್ಯಗಳು ಮತ್ತು ವಿಶೇಷ ಗಮನವನ್ನು ಪಡೆಯುತ್ತಾರೆ. MCA ಯಲ್ಲಿ ಓದುವ ದಲಿತ ವಿದ್ಯಾರ್ಥಿಗಳು ಸ್ಪಷ್ಟವಾಗಿ ಭಾರತದ ಉನ್ನತ ಶಿಕ್ಷಣದಲ್ಲಿನ ಮೀಸಲಾತಿ ಸೀಟುಗಳ ಫಲಾನುಭವಿಗಳಲ್ಲ. ಅದೇನೇ ಆದರೂ ಅವರ ಅನುಭಗಳು ಅಂಥ ನೀತಿಗಳ ಕುರಿತು ಒಂದು ಅಧ್ಯಯನ ಮಾಡುವುದಕ್ಕೆ ಪ್ರಸ್ತುತ, ಏಕೆಂದರೆ ಉನ್ನತ ಶಿಕ್ಷಣದ ಹೆಚ್ಚು ಪ್ರತಿಷ್ಠಿತ ಸರ್ಕಾರ ನಡೆಸುವ ಸಂಸ್ಥೆಗಳಲ್ಲಿ ಮೀಸಲಾತಿ ಸೀಟುಗಳಿಗೆ ಸಂಭಾವ್ಯ ಅರ್ಹರಾಗುವಂತಹ ದಲಿತ ವಿದ್ಯಾರ್ಥಿಗಳನ್ನು ಅವು ಪ್ರತಿನಿಧಿಸುವ ಕಾರಣ. ಆದ್ದರಿಂದ, ಅವರನ್ನು ಒಂದು ರೀತಿಯ ಪ್ರಾತಿನಿಧಿಕ ಮಾದರಿ ಗುಂಪನ್ನಾಗಿ ಪರಿಗಣಿಸಬಹುದಾಗಿದ್ದು, ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿನ ಮೀಸಲಾತಿ ನೀತಿಗಳ ನಿಜವಾದ ಫಲಾನುಭವಿಗಳ ಅನುಭವಗಳನ್ನು ಅವರ ಅನುಭವಗಳೊಂದಿಗೆ ಹೋಲಿಸಿ ನೋಡಬಹುದಾಗಿದೆ.

ವಾಂಖೆಡೆ ಅವರ ಸಂಶೋಧನೆಯನ್ನು 1972 ರಲ್ಲಿ ಬಿ.ಎ ಮುಗಿಸಿದಂತ ಆ MCA ವಿದ್ಯಾರ್ಥಿಗಳ ಮೇಲೆ ಕೇಂದ್ರೀಕರಿಸಿದರು. ಈ ವಿದ್ಯಾರ್ಥಿಗಳಲ್ಲಿ ಹೆಚ್ಚಿನವರು ದಲಿತರಲ್ಲಿ ಉಪಜಾತಿಯಾದ ಮಹಾರ್ ಜಾತಿಗೆ ಸೇರಿದವರಾಗಿದ್ದರು, ಮತ್ತು ಹೆಚ್ಚಿನವರು ಪುರುಷರು, ಅವಿವಾಹಿತರು ಹಾಗೂ ನವ-

[17] ನನಗೆ ಗೊತ್ತಿರುವ ಮಟ್ಟಿಗೆ ಕೇವಲ ಇಂತಹ ಅಧ್ಯಯನಗಳು ಮಾತ್ರ ಇವೆ ಅಷ್ಟೇ.

ಬೌದ್ಧರಾಗಿದ್ದರು (1956 ರಲ್ಲಿ ಅಂಬೇಡ್ಕರ್ ಅವರು ಬೌದ್ಧ ಮತಕ್ಕೆ ಮತಾಂತರಗೊಂಡ ಸಂದರ್ಭದಲ್ಲಿ ಬೌದ್ಧ ಧರ್ಮಕ್ಕೆ ಮಂತಾತರಗೊಂಡಂತಹ ದಲಿತರಿಗೆ ನೀಡಿದ ಪದನಾಮ).[18] ಅದೇ ಗುಂಪಿನಲ್ಲಿ ತಮ್ಮ ಬಿ.ಎ ಪೂರ್ಣಗೊಳಿಸುವುದರೊಳಗೆ ಕಾಲೇಜನ್ನು ತೊರೆದ ವಿದ್ಯಾರ್ಥಿಗಳ ಸಂಖ್ಯೆಯ ದತ್ತಾಂಶ ಲಭ್ಯವಿಲ್ಲವಾದರೂ MCA ಯಿಂದ ಪದವಿ ಪಡೆದವರ ಸಂಖ್ಯೆಯು ಗಣನೀಯವಾಗಿದೆ, ಮತ್ತು ದಾಖಲಾತಿ ಆದವರಲ್ಲಿನ ಹೆಚ್ಚಿನ ವಿದ್ಯಾರ್ಥಿಗಳು ಅಂತಿಮವಾಗಿ ಪದವಿ ಪಡೆಯುವ ಸಾಧ್ಯತೆ ಇದೆ.

1972 ರ ಮಧ್ಯ ಭಾಗದಲ್ಲಿ, ಪದವಿ ಮುಗಿಸಿದ MCA ಕಾಲೇಜಿನ ಎಲ್ಲಾ 170 ವಿದ್ಯಾರ್ಥಿಗಳಿಗೆ ಪ್ರಶ್ನಾವಳಿಗಳನ್ನು ಕಳುಹಿಸಲಾಯಿತು, ಮತ್ತು ಅವರಲ್ಲಿ ಸುಮಾರು ಮುಕ್ಕಾಲು ಪಾಲು ವಿದ್ಯಾರ್ಥಿಗಳಿಂದ ಪ್ರತಿಕ್ರಿಯೆಗಳನ್ನು ವಾಂಖೆಡೆ ಪಡೆದರು. ಪ್ರತಿಕ್ರಿಯಿಸಿದವರಲ್ಲಿ ಸುಮಾರು ಅರ್ಧದಷ್ಟು ಜನ ಸ್ನಾತಕೋತ್ತರ ಹಂತದ ಮುಂದಿನ ಶಿಕ್ಷಣವನ್ನು ಮಾಡುತ್ತಿದ್ದರು ಎಂದು ಅವರು ಕಂಡುಕೊಂಡರು; ಅವರಲ್ಲಿ, ಸುಮಾರು ಶೇಕಡ 40% ತಮ್ಮ ಕೋರ್ಸನ್ನು ಪೂರ್ಣಗೊಳಿಸಿ ಪದವಿಯನ್ನೂ ಪಡೆದುಕೊಂಡಿದ್ದರು. ಸಮೀಕ್ಷೆಯ ಸಮಯದಲ್ಲಿ, MCA ಪದವೀಧರರಲ್ಲಿ ಸುಮಾರು ಮೂರನೆ ಒಂದು ಭಾಗದಷ್ಟಿನವರು ನಿರುದ್ಯೋಗಿಗಳಾಗಿದ್ದರು ಹಾಗೂ ಆರನೆ ಒಂದು ಭಾಗದಷ್ಟಿನವರು ಮುಂದಿನ ವಿದ್ಯಾಭ್ಯಾಸವನ್ನು ಮಾಡುತ್ತಿದ್ದರು. ಉಳಿದ ಅರ್ಧದಷ್ಟವರು ಕನಿಷ್ಟತಮ ಅರ್ಹತೆಗೆ ಕೇವಲ ಪೂರ್ಣಗೊಳಿಸಿದ ಮಾಧ್ಯಮಿಕ ಶಾಲಾ ಶಿಕ್ಷಣ ಸಾಕಾಗುವ ಕಡಮೆ-ವೇತನದ ಉದ್ಯೋಗಗಳಲ್ಲಿ ಕೆಲಸಮಾಡುತ್ತಿದ್ದರು. SC ಪ್ರವರ್ಗಕ್ಕೆ ಕ್ಲಾಸ್ I ಅಥವಾ II (ಗುಮಾಸ್ತ ಅಥವಾ ಕೀಳು ಉದ್ಯೋಗಗಳು ಅಲ್ಲದ ಆಡಳಿತಕ್ಕೆ ಸಂಬಂಧಿಸಿದ ಉದ್ಯೋಗ) ಸರ್ಕಾರಿ ನೌಕರಿಗಳಿಗೆ ಮೀಸಲಾತಿಗಳಿರುವುದರ ಹೊರತಾಗಿಯೂ ಸಹ, ಪದವೀಧರರಲ್ಲಿ ಯಾರೊಬ್ಬರೂ ಅಂಥ ನೌಕರಿಯನ್ನು ಗಿಟ್ಟಿಸಿಕೊಂಡಿರಲಿಲ್ಲ. ಆದಾಗ್ಯೂ, ಹೆಚ್ಚಿನ ಪದವೀಧರರು ಅವರ ತಂದೆಗಳಿಗಿಂತ ಉತ್ತಮವಾದ ಉದ್ಯೋಗಗಳನ್ನು (ಉದಾಹರಣೆಗೆ ಕೂಲಿ ಕೆಲಸಗಳ ಬದಲು ಸೇವಾ ಉದ್ಯೋಗಗಳು) ಕಂಡುಕೊಂಡರು, ಮತ್ತು ಅವರ ಆದಾಯವು ಅವರ ತಂದೆಯರ ಆದಾಯಕ್ಕಿಂತ ಸರಾಸರಿ ಮೂರುಪಟ್ಟಿನಷ್ಟು ಹೆಚ್ಚಿತ್ತು.

ವಾಂಖೆಡೆಯವರಿಗೆ ಅವರ ಶೋಧಕಗಳು ಸೀಮಿತ ಪ್ರಮಾಣದಲ್ಲಿ ಸಾಮಾಜಿಕ ಪ್ರಗತಿಯನ್ನು ಬಿಂಬಿಸಿದ್ದರಿಂದ ನಿರಾಸೆಯಾಗಿತ್ತು. ಅವರ ಪರಿಭಾಷೆಯಲ್ಲಿ ಒಂದು ಅನುಕೂಲಕರ ಕಾಲೇಜು ಶೈಕ್ಷಣಿಕ ವಾತಾವರಣದ ಹೊರತಾಗಿಯೂ ದಲಿತ ವಿದ್ಯಾರ್ಥಿಗಳ ವೃತ್ತಿ ಪಥಗಳು ಒಂದು ಸಾಂಪ್ರದಾಯಿಕ ನೆಲೆಯ 'ಹಿಂದುಳಿದ ಹಿನ್ನೆಲೆ'ಯಿಂದ 'ಅವಕಾಶ ವಂಚಿತ ಶಿಕ್ಷಿತ ವರ್ಗ' ಕ್ಕೆ ಬದಲಾದಂತೆ ತೋರಿತಷ್ಟೇ. ಇದು ಹೆಚ್ಚಿನ ಭಾಗ, ಉನ್ನತ ಮಟ್ಟದ ಶಿಕ್ಷಣವನ್ನು ಬೇಡುವ ಸ್ಥಾನಗಳಿಗೆ ಶಿಕ್ಷಿತ ಉದ್ಯೋಗಾಕಾಂಕ್ಷಿಗಳ ಗಣನೀಯವಾದ ಅತ್ಯಾಧಿಕ ಸಂಖ್ಯೆಯಿಂದ ಪೀಡಿತ ಆರ್ಥಿಕ ವ್ಯವಸ್ಥೆಯಲ್ಲಿ ಸಾಮಾನ್ಯವಾಗಿ ಭಾರತದ

[18] ಈ ನವ-ಬೌದ್ಧ ವಿದ್ಯಾರ್ಥಿಗಳು ಹಿಂದೂ ಪರಿಶಿಷ್ಟ ಜಾತಿಗಳಿಗಾಗಿ ಗೊತ್ತುಮಾಡಲಾದ ಸರ್ಕಾರದ ಧನ ಸಹಾಯದಿಂದ ನಡೆಯುವ ಹಾಸ್ಟೆಲ್‌ಗಳಂತಹ ವಿಶೇಷ ಸೌಕರ್ಯಗಳನ್ನು ಪಡೆಯುವ ಸಲುವಾಗಿ ಹಿಂದೂ ಸ್ಥಾನಮಾನವುಳ್ಳವರು ಎಂದು ಹೇಳಿಕೊಳ್ಳಬೇಕಿತ್ತು ಎಂಬುದನ್ನು Wankhede ಅವರು ಗಮನಿಸುತ್ತಾರೆ.

ಕಾಲೇಜು ಪದವೀಧರರಿಗೆ ಒಂದು ಉತ್ತಮ ಭವಿಷ್ಯ ಇಲ್ಲದಿರುವುದು ಕಾರಣವಾಗಿದೆ ಎಂಬುದರಲ್ಲಿ ಯಾವ ಸಂದೇಹವೂ ಇಲ್ಲ. ಆದರೆ SC ಮತ್ತು ST ವಿದ್ಯಾರ್ಥಿಗಳಿಗೆ ನೀಡುವ ಮೀಸಲಾತಿಗಳು ಪ್ರಮುಖವಾದಂತ ಸಕಾರಾತ್ಮಕ ಪರಿಣಾಮ ಬೀರಬೇಕೆಂದರೆ, ಬಹುಶಃ ಅವು ಅಸಮಾನ್ಯವಾಗಿ ಒಳ್ಳೆಯ ಉದ್ಯೋಗಗಳನ್ನು ದಕ್ಕಿಸಿಕೊಳ್ಳಲು ಉತ್ತಮ ಸ್ಥಾನದಲ್ಲಿರುವ ಪದವೀಧರರನ್ನು ಹೊಂದಿರುವಂತಹ ಸಂಸ್ಥೆಗಳಲ್ಲಿ ಮೀಸಲಾತಿ ಸೀಟುಗಳನ್ನು  ಕಾಯ್ದಿರಿಸಬೇಕೆಂದು ಅದು ಸೂಚಿಸುತ್ತದೆ.

ವೆಲಾಸ್ಕರ್ ಅಧ್ಯಯನ (1986) ಮಾಡಿದ ಮುಂಬೈ ವೈದ್ಯಕೀಯ ಕಾಲೇಜುಗಳು ಅಂತಹ ಸಂಸ್ಥೆಗಳಲ್ಲಿ ಒಂದಾಗಿದ್ದು ಅವು ರಾಷ್ಟ್ರೀಯ ಮಾನದಂಡಗಳ ಪ್ರಕಾರ ಉತ್ತಮ ಕಾಲೇಜುಗಳೆಂದು ಪರಿಗಣಿಸಲಾಗಿವೆ.[19]  ಹಿಂದೆ ನಾವು ನೋಡಿದಂತೆ, ಮೀಸಲಾತಿ ಸೀಟುಗಳ ಮೂಲಕ ಈ ಕಾಲೇಜುಗಳಿಗೆ ದಾಖಲಾತಿಯಾದ ಹೆಚ್ಚಿನ  SC ವಿದ್ಯಾರ್ಥಿಗಳು ಪದವಿಯನ್ನು ಪಡೆಯುತ್ತಾರಾದರೂ ಅದನ್ನು ಪಡೆಯಲು ಅವರು ಸಾಮಾನ್ಯವಾಗಿ SC  ಪ್ರವರ್ಗಕ್ಕೆ ಸೇರದ ವಿದ್ಯಾರ್ಥಿಗಳಿಗಿಂತ ಹೆಚ್ಚಿನ ವರ್ಷಗಳನ್ನು ತೆಗದುಕೊಳ್ಳುವುದನ್ನು ವೆಲಾಸ್ಕರ್ ಕಂಡುಕೊಂಡರು. ಅವರು ಪದವಿಯ ನಂತರದ ಒಂದು ವ್ಯವಸ್ಥಿತವಾದ ಸಮೀಕ್ಷೆ ಮಾಡಲಿಲ್ಲವಾದರೂ ಹೆಚ್ಚಿನ ಮಟ್ಟಿಗೆ SC ಪದವೀಧರರೆಲ್ಲರು ಒಂದು ಜವಾಬ್ದಾರಿಯುತ ಮತ್ತು ಉತ್ತಮ ಸಂಬಳವಿರುವ ವೈದ್ಯಕೀಯ ಸ್ಥಾನಗಳನ್ನು ಗಿಟ್ಟಿಸಿಕೊಂಡಿದ್ದರು ಎಂಬುದನ್ನು ದೃಢಪಡಿಸಿಕೊಳ್ಳಲು ಅವರಿಗೆ ಸಾಧ್ಯವಾಯಿತು.

ವೆಲಾಸ್ಕರ್ ಅವರ ವಿಶೇಷ ಪರಿಣಿತಿಯ ಕ್ಷೇತ್ರಗಳ ಆಯ್ಕೆಗಳಿಗೆ ಸಂಬಂಧಿಸಿದಂತೆ ಹಾಗೂ ಪದವಿಯ ನಂತರ ಸೇರಿಕೊಳ್ಳುವ ಅವರ ವೃತ್ತಿಗಳಿಗೆ ಸಂಬಂಧಿಸಿದಂತೆ SC ಹಾಗೂ  SC ಪ್ರವರ್ಗಕ್ಕೆ ಸೇರದ ವಿದ್ಯಾರ್ಥಿಗಳ ನಡುವೆ ಕೆಲವು ಆಸಕ್ತಿಕರ ವ್ಯತ್ಯಾಸಗಳಿರುವುದನ್ನೂ ಕೂಡ ಕಂಡುಕೊಂಡರು. SC ವಿದ್ಯಾರ್ಥಿಗಳು ಸಾಪೇಕ್ಷವಾಗಿ ಸಿದ್ದಾಂತಕ್ಕಿಂತ ಹೆಚ್ಚು ನೈದಾನಿಕ ಕೋರ್ಸುಗಳು ಮತ್ತು ತರಬೇತಿಗಳಿಗೆ ಒಲವನ್ನು ತೋರಿದ್ದರು ಹಾಗೂ ಅದರಲ್ಲಿ ಉತ್ತಮ ಸಾಧನೆಯನ್ನು ಮಾಡಿದ್ದರು. SC ಪದವೀಧರರು ಸಾಮಾನ್ಯ ವೃತ್ತಿಗರು ಆಗುವ ಸಾಧ್ಯತೆ ಹೆಚ್ಚಿದ್ದರೆ, SC ಪ್ರವರ್ಗಕ್ಕೆ ಸೇರದ ಪದವೀಧರರು ಹೆಚ್ಚು ಸಾಮಾನ್ಯವಾಗಿ ವಿಶೇಷ್ಣರಾದರು (ಸಾಮಾನ್ಯವಾಗಿ ಸಲಹೆ ನೀಡುವಂತವರಾದರು).  ಸ್ಪಷ್ಟವಾಗಿ SC ಪ್ರವರ್ಗಕ್ಕೆ ಸೇರದ ಪದವೀಧರರಿಗಿಂತ ಹೆಚ್ಚಿನದಾಗಿ SC ಪದವೀಧರರು ರೋಗಿಗಳೊಂದಿಗೆ ಉತ್ತಮ ಸಂಪರ್ಕ ಹಾಗೂ ಸಂಬಂಧಗಳನ್ನು ಬೆಳೆಸಿಕೊಳ್ಳುವುದಕ್ಕೆ ಅತಿ ಹೆಚ್ಚು ಪ್ರಾಮುಖ್ಯತೆ ನೀಡಿದ್ದರು. ಸಾಮಾನ್ಯವಾಗಿ, SC ವೈದ್ಯಕೀಯ ವಿದ್ಯಾರ್ಥಿಗಳು (ಮತ್ತು ತುಲನಾತ್ಮಕವಾಗಿ ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಹಿಂದುಳಿದ (SES)  ಸಾಮಾನ್ಯ ಪ್ರವರ್ಗದಡಿಯಲ್ಲಿ ಪ್ರವೇಶ ದಾಖಲಾತಿ ಪಡೆದ ವಿದ್ಯಾರ್ಥಿಗಳೂ ಸೇರಿದಂತೆ) ಸೇವೆಗಳನ್ನು  ನೀಡುವುದಕ್ಕೆ ಮತ್ತು ಬಡ ಸಮುದಾಯಗಳಿಗೆ ಸಹಾಯ ಮಾಡುವುದಕ್ಕೆ ಹೆಚ್ಚು ಪ್ರೇರಿತರಾಗಿದ್ದರೆ, ಉತ್ತಮ ಸಾಮಾಜಿಕ ಮತ್ತು ಆರ್ಥಿಕ ಸ್ಥಾನಮಾನವನ್ನು

---

[19] ಜನವರಿ 24, 2002 ರಂದು ಈ ಲೇಖಕರಿಗೆ Velaskar ರವರಿಂದ ಬಂದ ಇ-ಮೇಲ್ ಪ್ರಕಾರ.

ಹೊಂದಿದ್ದ ಸಾಮಾನ್ಯ ಪ್ರವರ್ಗದಡಿಯಲ್ಲಿ ಪ್ರವೇಶ ದಾಖಲಾತಿ ಪಡೆದ ವಿದ್ಯಾರ್ಥಿಗಳು (ಸಾಮಾನ್ಯವಾಗಿ ವೈದ್ಯಕೀಯ/ವೃತ್ತಿಪರ ಕುಟುಂಬಗಳಿಂದ ಬಂದವರು) ಅವರ ವೃತ್ತಿ ಆಕಾಂಕ್ಷೆಗಳಿಗೆ ಸಂಬಂಧಿಸಿದಂತೆ ಹೆಚ್ಚು ಭೌತಿಕವಾದ ಮನೋಭಾವನೆಯನ್ನು ಹೊಂದಿದವರಾಗಿದ್ದರು ಎಂದು ವೆಲಾಸ್ಕರ್ ಕಂಡುಕೊಂಡರು.

ಇಲ್ಲಿಯವರೆಗೆ ಉನ್ನತ ಶಿಕ್ಷಣದಲ್ಲಿ ಭಾರತದ ಮೀಸಲಾತಿ ನೀತಿಗಳ ಫಲಾನುಭವಿಗಳ ಪದವಿಯ ನಂತರದ ವೃತ್ತಿ ಪಥಗಳನ್ನು ಗುರುತುಮಾಡಿದಂತಹ ಉತ್ತಮ ಹಾಗೂ ಹೆಚ್ಚು ವ್ಯವಸ್ಥಿತವಾದ ಪ್ರಯತ್ನವು ಪಟವರ್ಧನ್ ಮತ್ತು ಪಾಲ್ಶೀಕರ್ (1992) ಅವರು ಮಾಡಿದ್ದಾಗಿದೆ. ಈ ವಿದ್ವಾಂಸರು ಮೊದಲಿಗೆ 1971 - 1982ರ ನಡುವೆ ಪುಣೆಯಲ್ಲಿನ ಬಿ.ಜೆ ವೈದ್ಯಕೀಯ ಕಾಲೇಜಿನಿಂದ ಪದವಿ ಪಡೆದಂತಹ ಒಂದು ದೊಡ್ಡ ಶ್ರೇಣೀಕೃತ ಮಾದರಿಯ ವೈದ್ಯರಿಗೆ ಪ್ರಶ್ನಾವಳಿಗಳನ್ನು ಪ್ರಶ್ನಾವಳಿಗಳನ್ನು ಕಳುಹಿಸಿದರು. ಅವರಿಗೆ ಒಟ್ಟು 100 ಪ್ರತಿಕ್ರಿಯೆಗಳು ಬಂದವಾಗಿದ್ದು, ಅವು ತಕ್ಕಮಟ್ಟಿಗೆ ಇಡೀ ಮಾದರಿಯನ್ನು (ಪ್ರತಿಕ್ರಿಯಿಸಿದವರ ಮೂಲಭೂತ ಗುಣಲಕ್ಷಣಗಳನ್ನು ದೊಡ್ಡ ಗುಂಪಿನವರ ಲಕ್ಷಣಗಳಿಗೆ ಹೋಲಿಸಿದ ಆಧಾರದ ಮೇಲೆ) ಪ್ರತಿನಿಧಿಸುತ್ತಿತ್ತು ಎಂದು ಅವರು ಕಂಡುಕೊಂಡರು. ಅವರಿಗೆ ಪ್ರತಿಕ್ರಿಯಿಸಿದವರು ಪ್ರಮುಖ ಪ್ರವೇಶ ದಾಖಲಾತಿಯ ಪ್ರವರ್ಗಗಳಲ್ಲಿ ಈ ರೀತಿಯಲ್ಲಿ ಹಂಚಿಹೋಗಿದ್ದರು: ಸಾಮಾನ್ಯ ಪ್ರವರ್ಗದಡಿಯಲ್ಲಿ - 26; OBCಗಳು - 34; SCಗಳು - 30; STಗಳು - 3; ವಿಮುಕ್ತ ಬುಡಕಟ್ಟಿನವರು (Vimukta tribes (VTs))- 7. ಕೊನೆಯ ನಾಲ್ಕು ಪ್ರವರ್ಗಗಳು (ಇವುಗಳ ಸಂಖ್ಯಾ ಮಾದರಿಯು ಹೆಚ್ಚಿತ್ತು) ಮೀಸಲಾತಿ ಸೀಟುಗಳ ಗುಂಪಾಗಿದ್ದು ಪ್ರತಿಕ್ರಿಯೆ ನೀಡಿದವರಲ್ಲಿ 74 ಮಂದಿ ಅದಕ್ಕೆ ಸೇರಿದವರಾಗಿದ್ದರು.

ಪ್ರತಿಕ್ರಿಯಿಸಿದ ಸಾಮಾನ್ಯ ಪ್ರವರ್ಗದಡಿಯಲ್ಲಿ ದಾಖಲಾತಿ ಪಡೆದವರ ಮತ್ತು ಮೀಸಲಾತಿ ಸೀಟುಗಳ ಮೂಲಕ ದಾಖಲಾತಿ ಪಡೆದವರಲ್ಲಿ (ವಿಶೇಷವಾಗಿ ಕೊನೆಯ ಮೂರು ಪ್ರವರ್ಗದವರಲ್ಲಿ) ನ ಕೌಟುಂಬಿಕ ಹಿನ್ನೆಲೆಗಳು ತಕ್ಕಮಟ್ಟಿಗೆ ಭಿನ್ನವಾಗಿದ್ದವು. ಕೇವಲ ಎಂಟರಲ್ಲಿ ಒಂದು ಭಾಗದಷ್ಟು SC,ST ಮತ್ತು ವಿಮುಕ್ತ ಬುಡಕಟ್ಟಿನ (ವಿಟಿ) ವೈದ್ಯರು ಉತ್ತಮ-SES ಕುಟುಂಬಗಳಿಂದ ಬಂದಂತವರಾಗಿದ್ದರೆ, ಕೆಲವೇ ಕೆಲವು ಸಾಮಾನ್ಯ ಪ್ರವರ್ಗದಡಿಯಲ್ಲಿ ದಾಖಲಾತಿ ಪಡೆದ ವೈದ್ಯರು ಕೆಳ ಸ್ತರದ SES ಕುಟುಂಬಗಳಿಂದ ಬಂದಂತವರಾಗಿದ್ದರು. ಹೆಚ್ಚಿನ SC,ST ಮತ್ತು ವಿಮುಕ್ತ ಬುಡಕಟ್ಟಿನ (ವಿಟಿ) ವೈದ್ಯರಿಗೆ ಅವರ ವೈದ್ಯಕೀಯ ಕೋರ್ಸಿನ ಅಧ್ಯಯನವು (ಮುಖ್ಯವಾಗಿ ಮೌಖಿಕ (viva voce) ಪರೀಕ್ಷೆಗಳು) ಬಹಳ ಕಷ್ಟವೆನಿಸಿತ್ತು; ಮತ್ತು ಅನೇಕವೇಳೆ ಅವರ ಶೈಕ್ಷಣಿಕ ಸಾಧನೆಯು ಶೈಕ್ಷಣಿಕವಲ್ಲದ ಅಂಶಗಳಾದಂತಹ ಶಿಕ್ಷಕರ ಅಸಡ್ಡೆ ಮತ್ತು ಕೆಲವೊಮ್ಮೆ ತಿರಸ್ಕಾರದಿಂದಲೂ ಕೂಡ ಬಿಗಡಾಯಿಸುತ್ತಿತ್ತು ಎಂದು ಅವರು ಭಾವಿಸಿದ್ದರು. ಪ್ರತಿಕ್ರಿಯೆ ನೀಡಿದ 100 ಮಂದಿಯ ಇಡೀ ಗುಂಪಿನಲ್ಲಿ, ನಾಲ್ವರು ಸ್ನಾತಕೋತ್ತರ ವೈದ್ಯಕೀಯ ಪದವಿಯ ಕೋರ್ಸನ್ನು ಮುಗಿಸುವ ಹಂತದಲ್ಲಿದ್ದರು; ಉಳಿದವರಲ್ಲಿ, ಮೂರನೆ ಒಂದು ಭಾಗದಷ್ಟು ಮಂದಿ ಸರ್ಕಾರಿ ವೈದ್ಯಕೀಯ ಸೇವೆಗಳಲ್ಲಿದ್ದರು ಮತ್ತು ಮೂರರಲ್ಲಿ ಎರಡು ಭಾಗದಷ್ಟು ಮಂದಿ ಖಾಸಗಿ ವೈದ್ಯಕೀಯ ಕ್ಷೇತ್ರದಲ್ಲಿದ್ದರು. SC, ST ಮತ್ತು ವಿಟಿ ವೈದ್ಯರು ಅಸಮಾನ ಪ್ರಮಾಣದಲ್ಲಿ, ಸಾಮಾನ್ಯವಾಗಿ ಖಾಸಗಿ ಕ್ಷೇತ್ರದಲ್ಲಿ ಕಂಡುಬರುವುದಕ್ಕಿಂತ ಹೆಚ್ಚು ಸುಭದ್ರ, ಆದರೆ ಬಹಳಷ್ಟು ಕಡಮೆ ಲಾಭದಾಯಕ ಸ್ಥಾನದ ಸರ್ಕಾರಿ

ಸೇವೆಯಲ್ಲಿ ಸೇರಿರುವ ಸಾಧ್ಯತೆ ಇದ್ದವು. ಇದಕ್ಕೆ ಬಹುಶಃ ಅವರಲ್ಲಿ ಇದ್ದ ಆತ್ಮವಿಶ್ವಾಸದ ಕೊರತೆ, ಬಂಡವಾಳ ಮತ್ತು ಸಂಪನ್ಮೂಲಗಳ ಕೊರತೆ, ಸಾಹಸ ಪ್ರಯತ್ನ ಮಾಡಲು ಹಿಂಜರಿಕೆ ಇವೆಲ್ಲದರ ಮಿಶ್ರಣ ಕಾರಣವಾಗಿರಬಹುದು - ಮತ್ತು ಇನ್ನು ಕೆಲವು ಉದಾಹರಣೆಯಲ್ಲಿ ಸರ್ಕಾರಿ ಕ್ಷೇತ್ರದಲ್ಲಿ (ಅದರ ಉದ್ಯೋಗದಲ್ಲಿನ ಮೀಸಲಾತಿಗಳಿಂದ ಅವರು ನೇರ ಲಾಭ ಪಡೆಯುತ್ತಾರೋ ಇಲ್ಲವೋ) ತಮ್ಮನ್ನು ಹೆಚ್ಚು ನ್ಯಾಯುತವಾಗಿ ಪರಿಗಣಿಸಬಹುದಾದ ಸಾಧ್ಯತೆ ಇದೆ ಎಂಬ ಭಾವನೆ SC,ST ಮತ್ತು ವಿಟಿ ವೈದ್ಯರಲ್ಲಿರುವುದು ಕಾರಣವಾಗಿರಬಹುದು.

ಒಟ್ಟಿನಲ್ಲಿ, ಪ್ರಶ್ನಾವಳಿಗೆ ಪ್ರತಿಕ್ರಿಯಿಸಿದ ಮೂರು ಅತ್ಯಂತ ಕಡಮೆ-ಪ್ರಾತಿನಿಧ್ಯವಿರುವ ಗುಂಪುಗಳಿಂದ ಬಂದಂತಹ ವೈದ್ಯರ ವೃತ್ತಿ ಜೀವನವು ಸಾಕಷ್ಟು ಚೆನ್ನಾಗಿಯೇ ನಡೆಯುತ್ತಿದ್ದವು: ಅವರಲ್ಲಿ ಸುಮಾರು ಅರ್ಧದಷ್ಟು ಖಾಸಗಿ ಕ್ಷೇತ್ರದಲ್ಲಿದ್ದರೆ ಇನ್ನರ್ಧದಷ್ಟು ಮಂದಿ ಸರ್ಕಾರಿ ಸೇವೆಯಲ್ಲಿದ್ದರು, ಮತ್ತು ಪ್ರತಿಕ್ರಿಯಿಸಿದವರಲ್ಲಿ ಸುಮಾರು ಎಲ್ಲರೂ OBC ಹಾಗೂ ಸಾಮಾನ್ಯ ಪ್ರವರ್ಗದಡಿಯಲ್ಲಿ ಪ್ರವೇಶ ದಾಖಲಾತಿ ಪಡೆದಂತಹ ಅವರ ಸಮಾನಸ್ಕಂಧರು ಗಳಿಸುತ್ತಿದ್ದದ್ದಕ್ಕಿಂತ ಕಡೆಮೆ ಇದ್ದರೂ ಅವರ ಪಾಲಕರಿಗಿಂತ ಹೆಚ್ಚಿನ ಪ್ರಮಾಣದಲ್ಲಿ ಆದಾಯಗಳನ್ನು ಹಾಗೂ ಒಟ್ಟಾರೆಯ ಸಮಾಜೋ-ಆರ್ಥಿಕ ಸ್ಥಾನಮಾನವನ್ನು ಗಳಿಸಿದ್ದರು. ಖಾಸಗಿ ಕ್ಷೇತ್ರದಲ್ಲಿನ ಹೆಚ್ಚಿನ SC, ST ಮತ್ತು ವಿಟಿ ವೈದ್ಯರು ಪ್ರಮುಖವಾಗಿ ಸ್ವಂತ ತಮ್ಮದೇ ಸಮುದಾಯದಿಂದ ಬರುವ ರೋಗಿಗಳಿಗೆ ಸೇವೆ ಸಲ್ಲಿಸುವ, ದೂರದ ಗ್ರಾಮೀಣ ಪ್ರದೇಶಗಳಲ್ಲಿ ಅಥವಾ ಬಡತನವಿರುವ ನಗರ ಪ್ರದೇಶಗಳಲ್ಲಿನ ಪರಿಸ್ಥಿತಿಯಲ್ಲಿ ತಮ್ಮನ್ನು ಕಂಡುಕೊಳ್ಳುತ್ತಾರೆ ಎಂದು ನಾವು ಭಾವಿಸಬಹುದಾಗಿದೆ. ಪ್ರಶ್ನಾವಳಿಗೆ ಪ್ರತಿಕ್ರಿಯೆ ನೀಡಿದವರಲ್ಲಿ ಇದು ನಿಜವಾಗಿರಲಿಲ್ಲ. SC, ST ಮತ್ತು ವಿಟಿ ವೈದ್ಯರ ಸ್ಥಳಗಳು ಮತ್ತು ಅವರಿಗೆ ಬರುವ ರೋಗಿಗಳು ಸಾಮಾನ್ಯ ಪ್ರವರ್ಗದ ಅಥವಾ OBC ಪ್ರವರ್ಗದ ವೈದ್ಯರದಷ್ಟು ಉನ್ನತ ಸ್ತರದಲ್ಲಿ ಇರಲಿಲ್ಲವಾದರೂ, ಮತ್ತು ಮೇಲ್ಜಾತಿಯ ರೋಗಿಗಳು ಚಿಕಿತ್ಸೆಗೆಂದು ಮೊದಲಿನವರ ಬಳಿಗೆ ಹೆಚ್ಚು ಆಗಾಗ್ಗೆ ಹೋಗದೆ ನಂತರದವರ ಬಳಿ ಹೋಗುತ್ತಾರಾದರೂ, ಸಾಮಾನ್ಯವಾಗಿ SC, ST ಹಾಗೂ ವಿಟಿ ವೈದ್ಯರು ಒಂದು ವಿಶಾಲವಾದ ವೈವಿಧ್ಯಮಯ ಸಮುದಾಯ ಹಾಗೂ ಗುಂಪುಗಳಿಗೆ ಸೇವೆ ಸಲ್ಲಿಸುತ್ತಾರೆ.

ಪಟವರ್ಧನ್ ಮತ್ತು ಪಾಲ್ಶೀಕರ್ (1992) ಅವರ ಪ್ರಶ್ನಾವಳಿಗಳಿಗೆ ಪ್ರತಿಕ್ರಿಯಿಸಿದ 100 ವೈದ್ಯರಲ್ಲಿ 42 ವೈದ್ಯರೊಂದಿಗೆ ವೈಯಕ್ತಿಕ ಸಂದರ್ಶನಗಳನ್ನು ನಡೆಸುವಂತೆಯೂ ಕೂಡ ವ್ಯವಸ್ಥೆ ಮಾಡಿದ್ದು, ಅದರಿಂದ ಅವರು ತಮ್ಮ ಪ್ರತಿಯೊಂದು ಪ್ರವೇಶ ದಾಖಲಾತಿಯ ಐದು ಪ್ರವರ್ಗಗಳಿಂದ ಸಾಕಷ್ಟು ಪ್ರಾತಿನಿಧಿಕ ಮಾದರಿಯಾಗಿರುವ ವೈದ್ಯರ ಬದುಕಿನ ರೀತಿ ಮತ್ತು ದೃಷ್ಟಿಕೋನಗಳನ್ನು ಕುರಿತು ವಿಸ್ತೃತವಾದ ಆಖ್ಯಾನಗಳನ್ನು ಒದಗಿಸಲು ಅವರಿಗೆ ಸಾಧ್ಯವಾಯಿತು. ಈ ಸಂದರ್ಶನಗಳು ಮೀಸಲಾತಿ ಸೀಟುಗಳ ಪದವೀಧರರು, ವಿಶೇಷವಾಗಿ SC, ST ಮತ್ತು ವಿಟಿ ವೈದ್ಯರು, ಸಮಾಜೋ-ಆರ್ಥಿಕದ ಮಾಪಕದಲ್ಲಿ ಯಶಸ್ವಿಯಾಗಿ ಗಮನಾರ್ಹವಾದ ಪ್ರಗತಿ ಸಾಧಿಸಿದ್ದಾರೆ ಎಂಬುದನ್ನು, ಮತ್ತು ವಾಸ್ತವಿಕವಾಗಿ ಮೀಸಲಾತಿ ಸೀಟುಗಳ ಎಲ್ಲಾ ಪದವೀಧರರು ಪ್ರಶ್ನಾತೀತವಾಗಿ ವೈದ್ಯರಾಗಿ ಸಮರ್ಥರು ಎಂಬ ಅವರ

ತೀರ್ಮಾನಗಳನ್ನು ಬಲಪಡಿಸಿದವು. ನಿಶ್ಚಯವಾಗಿಯೂ, ಅಧ್ಯಯನದ ಲೇಖಕರು ಹೆಚ್ಚು ಅವಕಾಶ ವಂಚಿತ ಮೀಸಲಾತಿ ಸೀಟುಗಳ ವಿದ್ಯಾರ್ಥಿಗಳು ಸಮರ್ಥ ವೈದ್ಯರೆಂಬ ಅರ್ಹತೆಯನ್ನು ಪಡೆಯಲು ಮತ್ತು ಖಾಸಗಿಯಾಗಿ ವೃತ್ತಿ ಅಭ್ಯಾಸ ಮಾಡಲು ಅಸಮರ್ಥರು ಎಂಬ ಜನಪ್ರಿಯ ನಂಬಿಕೆಯನ್ನು ಸ್ಪಷ್ಟವಾಗಿ ಅಲ್ಲಗಳೆಯುತ್ತಾರೆ. ಸಂದರ್ಶನದ ಪುರಾವೆಯು ಸ್ಪಷ್ಟವಾಗಿ ಉನ್ನತ-SES ಕುಟುಂಬಗಳ ಹಿನ್ನೆಲೆಗಳು ಹೇಗೆ ಹೆಚ್ಚಿನ ಸಾಮಾನ್ಯ ಪ್ರವರ್ಗದಡಿಯಲ್ಲಿ ಪ್ರವೇಶ ದಾಖಲಾತಿ ಪಡೆದ ವಿದ್ಯಾರ್ಥಿಗಳಿಗೆ ಮತ್ತು ಕೆಲವು OBC ವಿದ್ಯಾರ್ಥಿಗಳಿಗೆ ವೃತ್ತಿಜೀವನದಲ್ಲಿ ಮುನ್ನಡೆ ಹಾಗೂ ಯಶಸ್ಸನ್ನು ಸಾಧಿಸಲು ಸುಗುಮಗೊಳಿಸುವಂತಹ ಬಂಡವಾಳ, ಸಂಪರ್ಕ ಹಾಗೂ ಇತರ ರೀತಿಯ ಬೆಂಬಲದ ರೂಪದಲ್ಲಿ ನಿರ್ಣಾಯಕ ಪ್ರಯೋಜನಗಳನ್ನು ಒದಗಿಸುತ್ತವೆ ಎಂಬುದನ್ನೂ ಸಹ ತೋರಿಸುತ್ತದೆ. ಅದೇ ಮತ್ತೊಂದೆಡೆ, ಕೆಲವೇ ಕೆಲವು ಹೆಚ್ಚು ಯಶಸ್ವಿಯಾದ SC, ST ಮತ್ತು VT ವೈದ್ಯರು - ಅಂದರೆ ಸಾಮಾನ್ಯ ಪ್ರವರ್ಗದಡಿಯಲ್ಲಿ ಪ್ರವೇಶ ದಾಖಲಾತಿ ಪಡೆದ ವೈದ್ಯರಿಗೆ ತುಲನಾತ್ಮಕವಾಗಿ, ವೈದ್ಯಕೀಯ ಶಿಕ್ಷಣದಲ್ಲಿ ಸ್ನಾತಕೋತ್ತರ ಪದವಿ ಕೋರ್ಸುಗಳನ್ನು ಪೂರ್ಣಗೊಳಿಸಿ ಅತ್ಯಂತ ಉನ್ನತ ಪ್ರತಿಷ್ಠಿತ ಸ್ಥಾನಗಳನ್ನು ಹೊಂದಿರುವಂತಹವರು - ಶ್ರೀಮಂತ ವೃತ್ತಿಪರ ಪ್ರತಿಷ್ಠಿತರ ವರ್ಗವನ್ನು ಸೇರಿಕೊಂಡು ತಮ್ಮ ಸಂಪರ್ಕಗಳನ್ನು ಸೀಮಿತಗೊಳಿಸಿಕೊಳ್ಳುವ ಮತ್ತು ಸ್ವಂತ ತಮ್ಮ ಅವಕಾಶ ವಂಚಿತ ಜಾತಿ ಹಾಗೂ ಬುಡಕಟ್ಟು ಸಮುದಾಯದ ಸಂಭವನೀಯ ನಾಯಕತ್ವವನ್ನು ವಹಿಸುಕೊಳ್ಳುವ ಅವಕಾಶವನ್ನು ತ್ಯಜಿಸುವ ಸಾಧ್ಯತೆ ಇದೆಯೆಂದು ಸೂಚಿಸುವುದಕ್ಕೆ ಪುರಾವೆ ಇದೆ.

ಐದು ಪ್ರಮುಖವಾದ IIT ಸಂಸ್ಥೆಗಳಲ್ಲಿನ ಮೀಸಲಾತಿ ನೀತಿಗಳ ಕುರಿತು ಮಾಡಿದ ತಮ್ಮ ಅಧ್ಯಯನದಲ್ಲಿ, ಕಿರ್ಪಾಲ್ ಮತ್ತು ಗುಪ್ತಾ (1999) ಆ ಸಂಸ್ಥೆಗಳ ಪದವೀಧರರಿಂದ ಯಾವುದೇ ಪುರಾವೆಯನ್ನು ಸಂಗ್ರಹಿಸಲಿಲ್ಲ. ಆದಾಗ್ಯೂ, ಅವರು ಅವರ ಮಾದರಿಯಲ್ಲಿ ಪ್ರಸ್ತುತ ಓದುತ್ತಿದ್ದ SC, ST ವಿದ್ಯಾರ್ಥಿಗಳನ್ನು ಅವರ ಭವಿಷ್ಯದ ಯೋಜನೆಗಳನ್ನು ಕುರಿತು ಮತ್ತು ವೃತ್ತಿ ಸಂಬಂಧಿತ ಗುರಿಗಳನ್ನು ಕುರಿತು ಪ್ರಶ್ನೆಗಳನ್ನು ಕೇಳಿದರು. ಪ್ರತಿಕ್ರಿಯಿಸಿದವರಲ್ಲಿ 60% ವಿದ್ಯಾರ್ಥಿಯರು ಭವಿಷ್ಯದಲ್ಲಿ ಸ್ನಾತಕೋತ್ತರ ಶಿಕ್ಷಣ ಕೋರ್ಸುಗಳಿಗೆ ಪ್ರವೇಶ ದಾಖಲಾತಿ ಪಡೆಯುವಾಗ ಅಥವಾ ಸರ್ಕಾರಿ ಉದ್ಯೋಗಗಳಿಗೆ (ಸಾರ್ವಜನಿಕ ಕ್ಷೇತ್ರದ ಉದ್ಯಮ ಮತ್ತು ಆಡಳಿತಾತ್ಮಕ ಸೇವೆಗಳಲ್ಲಿನ ಉದ್ಯೋಗಗಳನ್ನೂ ಒಳಗೊಂಡಂತೆ) ಅರ್ಜಿ ಹಾಕುವಾಗ ಮೀಸಲಾತಿಯ ಅವಕಾಶಗಳನ್ನು ಪಡೆದುಕೊಳ್ಳುವ ಯೋಚನೆಯನ್ನು ಹೊಂದಿದ್ದಾಗಿ ಸೂಚಿಸಿದರು.[20] ವೃತ್ತಿ ಗುರಿಗಳ ಒಂದು ಶ್ರೇಯಾಂಕ

---

[20] ಉನ್ನತ ಶಿಕ್ಷಣದಲ್ಲಿನ ಮೀಸಲಾತಿಗಳಿಂದ ಪ್ರಯೋಜನ ಪಡೆದ ಅನೇಕ SC ಮತ್ತು ST ಪದವೀಧರರು ಸ್ನಾತಕೋತ್ತರ ವಿದ್ಯಾಭ್ಯಾಸದಲ್ಲಿ ಅಥವಾ ಸಾರ್ವಜನಿಕ ಉದ್ಯೋಗದಲ್ಲಿ ಮತ್ತಷ್ಟು ಮೀಸಲಾತಿಗಳಿಂದ ಪ್ರಯೋಜನ ಪಡೆಯುತ್ತಾರೆ ಎಂಬ ಸಂಗತಿಯು, ಅವರ ವೃತ್ತಿಯಲ್ಲಿನ ಸಾಧನೆಗಳನ್ನು ಮೀಸಲಾತಿಗಳಿಗೆ ಅವರಿಗಿದ್ದ ಆರಂಭಿಕ ಲಭ್ಯಾವಕಾಶದ ಪರಿಣಾಮಗಳಿಗೆ ಯಾವುದೋ ಒಂದು ರೀತಿಯಲ್ಲಿ ಉತ್ಪ್ರೇಕ್ಷಿಸಿ ಆರೋಪಿಸಬಹುದು ಎಂಬುದನ್ನು ಸೂಚಿಸುತ್ತದೆ. ಆದಾಗ್ಯೂ, ಹೀಗಿದ್ದರೂ ಸಹ, SC ಮತ್ತು ST ಸಮುದಾಯದವರು ಮುಂದಿನ ಹಂತದ ವಿದ್ಯಾಭ್ಯಾಸದಲ್ಲಿ ಅಥವಾ ಮೀಸಲಾತಿಯಿಂದ ಪ್ರಯೋಜನ ಪಡೆದಂತಹ ಉದ್ಯೋಗದಲ್ಲಿ ಯಶಸ್ವಿಯಾಗುವ ಸಾಮರ್ಥ್ಯವು, ಅವರಿಗೆ

ಕ್ರಮದಲ್ಲಿ, ಹೆಚ್ಚು ಸಾಮಾನ್ಯವಾಗಿ ಹೇಳಿದ ಗುರಿಯೆಂದರೆ (ಪ್ರತಿಯೊಂದಕ್ಕೂ ಶೇಕಡ ಸುಮಾರು 20% ಪ್ರತಿಕ್ರಿಯೆ ನೀಡಿದವರ ಆಧಾರದ ಮೇಲೆ) ಅದು ಸಾರ್ವಜನಿಕ ಕ್ಷೇತ್ರ ಉದ್ಯಮದಲ್ಲಿ ಅಥವಾ ಆಡಳಿತಾತ್ಮಕ ಸೇವೆಯಲ್ಲಿನ ಉದ್ಯೋಗವಾಗಿತ್ತು; ಸುಮಾರು ಶೇಕಡ 15% ಖಾಸಗಿ ಕ್ಷೇತ್ರದ ಉದ್ಯೋಗಗಳನ್ನು ಉಲ್ಲೇಖಿಸಿದರು, ಶೇಕಡ 5% ತಮ್ಮದೇ ಸ್ವಂತ ವ್ಯಾಪಾರ ಸ್ಥಾಪಿಸುವುದಾಗಿ ಹೇಳಿದರು, ಮತ್ತು ಉಳಿದ ಸುಮಾರು ಅರ್ಧದಷ್ಟಿನವರು ಉನ್ನತ ಪದವಿ (ಸಾಮಾನ್ಯವಾಗಿ ವಿದೇಶದಲ್ಲಿ) ಯನ್ನು ಪಡೆದುಕೊಳ್ಳುವುದರ ಮೇಲೆ ಕೇಂದ್ರೀಕರಿಸಿದರು. ಮೀಸಲಾತಿ ನೀತಿ ಫಲಾನುಭವಿಗಳ ಅವರ ಒಟ್ಟಾರೆಯ ಸಮೀಕ್ಷೆಯಿಂದ ಕಿರ್ಪಾಲ್ ಮತ್ತು ಗುಪ್ತಾ ಹೀಗೆ ತೀರ್ಮಾನಿಸಿದರು: "ಮೀಸಲಾತಿಗಳು ಉತ್ತಮ ಆರ್ಥಿಕ ಸ್ಥಿತಿಗಳಲ್ಲಿ ಮತ್ತು ಉತ್ತಮ ವೃತ್ತಿ ಆಯ್ಕೆಯ ಅವಕಾಶಗಳಲ್ಲಿ ಬಿಂಬಿಸಿದಂತೆ ಪ್ರಮುಖವಾಗಿ ಅವರ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಯನ್ನು ಸುಧಾರಿಸುವುದರ ಮೂಲಕ ಫಲಾನುಭವಿಗಳಿಗೆ ನೆರವಾಗುತ್ತಿದ್ದವು ಎಂಬುದು ಸುಸ್ಪಷ್ಟವಾಗಿತ್ತು. ಆದರೆ... ಅಷ್ಟೇ ಸ್ಪಷ್ಟವಾಗಿ ಆತ್ಮವಿಶ್ವಾಸ, ಸಮಾಜದಲ್ಲಿ ಸ್ವೀಕೃತಿ, ಮುಖ್ಯವಾಹಿನಿಯ ವಿದ್ಯಾರ್ಥಿಗಳೊಂದಿಗೆ ಒಂದಾಗುವಿಕೆ ಹಾಗೂ ತಮ್ಮ ಸ್ವಂತ ಕಾಲುಗಳ ಮೇಲೆ ತಾವು ನಿಲ್ಲುವ ಸಾಮರ್ಥ್ಯದಂತಹ ಆಂತರಿಕ ಬೆಳವಣಿಗೆಯಲ್ಲಿ ಸಾಮಾನ್ಯವಾಗಿ ಕೊರತೆಯಿದ್ದವು" (ಕಿರ್ಪಾಲ್ ಮತ್ತು ಗುಪ್ತಾ 1999:156-57).

## IV

### ತೀರ್ಮಾನ

ಉನ್ನತ ಶಿಕ್ಷಣದ ಎಲ್ಲಾ ಹಂತಗಳಲ್ಲಿಯೂ ಮೀಸಲಾತಿ ನೀತಿಗಳು SC ಮತ್ತು ST ವಿದ್ಯಾರ್ಥಿಗಳನ್ನು ವಿಶ್ವವಿದ್ಯಾಲಯದ ಗುಣಮಟ್ಟದ ಶ್ರೇಣಿಯಲ್ಲಿ ಮೇಲ್ಮುಖವಾಗಿ ಮರುಹಂಚಿಕೆ ಮಾಡುತ್ತವೆಯಷ್ಟೇ ಅಲ್ಲ, ಅದು ಇಲ್ಲದೆ ಹೋಗಿದ್ದಲ್ಲಿ ಉನ್ನತ ಶಿಕ್ಷಣವನ್ನು ಪಡೆಯಲು ಪ್ರಯತ್ನ ಮಾಡದಂತಹ SC ಮತ್ತು ST ವಿದ್ಯಾರ್ಥಿಗಳನ್ನು ಗಮನಾರ್ಹ ಸಂಖ್ಯೆಯಲ್ಲಿ ವಿಶ್ವವಿದ್ಯಾಲಯಗಳಲ್ಲಿ ದಾಖಲಾತಿ ಆಗುವಂತೆ ಅವರನ್ನು ಆಕರ್ಷಿಸುತ್ತದೆಯೂ ಕೂಡ. ನನ್ನ ಒಂದು ಅತ್ಯಂತ ಸ್ಥೂಲ ಅಂದಾಜಿನ ಪ್ರಕಾರ ಮೀಸಲಾತಿ ನೀತಿಗಳು 1990ರ ದಶಕದ ಉತ್ತರಾರ್ಧದಲ್ಲಿ ಭಾರತದ ವಿಶ್ವವಿದ್ಯಾಲಯಗಳಲ್ಲಿ ಓದುತ್ತಿದ್ದ 7,00,000 SC ಮತ್ತು ST ವಿದ್ಯಾರ್ಥಿಗಳಲ್ಲಿ ಸುಮಾರು ಅರ್ಧದಷ್ಟವರಿಗೆ ಒಂದೋ ಸಾಪೇಕ್ಷ ಸಾಧಾರಣವಾದ ಒಂದಕ್ಕೆ ಸೇರಲು ತೃಪ್ತಿಯಾಗುವುದರ ಬದಲು ಸಾಪೇಕ್ಷ ಅಪೇಕ್ಷಣೀಯವಾದ ಸಂಸ್ಥೆ ಅಥವಾ ಕೋರ್ಸಿಗೆ ಲಭ್ಯಾವಕಾಶ ಪಡೆಯಲು ಅನುವುಮಾಡಿಕೊಟ್ಟಿತು, ಇಲ್ಲವೇ ಉನ್ನತ ಶಿಕ್ಷಣವನ್ನು ಪಡೆಯುವ ಎಲ್ಲಾ ಸಾಧ್ಯತೆಯನ್ನು ತೊರೆಯುವುದರ ಬದಲು ವಿಶ್ವವಿದ್ಯಾಲಯದಲ್ಲಿ ದಾಖಲಾತಿಯಾಗಲು ಅನುವುಮಾಡಿಕೊಟ್ಟಿತು. ಮೀಸಲಾತಿ ನೀತಿಗಳ ಬಹುಪಾಲಿನ SC ಮತ್ತು ST ಪ್ರವರ್ಗದ ಫಲಾನುಭವಿಗಳು ವಿಶ್ವವಿದ್ಯಾಲಯದ

---

ಬೇಕಾದ ಸಿದ್ಧತೆ ಹಾಗೂ ತರಬೇತಿಯನ್ನು ಒದಗಿಸಿದ ಉನ್ನತ ಶಿಕ್ಷಣ ಸಂಸ್ಥೆಗಳಿಗೆ ಅವರು ಆರಂಭದಲ್ಲಿ ಗಳಿಸಿದ್ದ ಲಭ್ಯಾವಕಾಶವು ಅದಕ್ಕೆ ಕಾರಣ ಎಂಬ ವಾಸ್ತವವನ್ನು ನಾವು ಗುರುತಿಸಬೇಕಾಗಿದೆ.

ಕೋರ್ಸುಗಳನ್ನು ಅಸಮರ್ಪಕ ಪೂರ್ವ ತಯಾರಿಯೊಂದಿಗೆ ಮತ್ತು ಅವರ ಸಮಾನಸ್ಕಂಧರಿಗಿಂತ ಕಡಮೆ ಮಟ್ಟದ ಶೈಕ್ಷಣಿಕ ಅರ್ಹತೆಗಳೊಂದಿಗೆ ಸೇರುತ್ತಾರೆ, ಮತ್ತು ಅವರು ತಮ್ಮ ಓದಿನಲ್ಲಿ ಅಷ್ಟು ಉತ್ತಮ ಸಾಧನೆ ಮಾಡದಿರುವುದು ಆಶ್ಚರ್ಯವಲ್ಲ. ಆದಾಗ್ಯೂ, SC ಮತ್ತು ST ವಿದ್ಯಾರ್ಥಿಗಳು ಮತ್ತು ಇತರ ಪ್ರವರ್ಗದ ವಿದ್ಯಾರ್ಥಿಗಳ ನಡುವಿನ ಪ್ರವೇಶಾರ್ಹತಾ ಪರೀಕ್ಷೆಯ ಅಂಕಗಳ ಅಂತರವು ಕಳೆದ ಕೆಲ ದಶಕಗಳಿಂದೀಚೆಗೆ ಕಡಮೆಯಾಗುತ್ತಾ ಬಂದಿದೆ.

ವಿಶ್ವವಿದ್ಯಾಲಯದ ಪ್ರವೇಶ ದಾಖಲಾತಿಯಲ್ಲಿ ಭಾರತದ ಮೀಸಲಾತಿ ನೀತಿಗಳ ಹೆಚ್ಚಿನ SC ಮತ್ತು ST ಫಲಾನುಭವಿಗಳು ಖಂಡಿತವಾಗಿಯೂ ದಲಿತ ಮತ್ತು ಆದಿವಾಸಿ ಸಮುದಾಯಗಳ 'ಕೆನೆ ಪದರ'ದಿಂದ ಬಂದಿರುತ್ತಾರೆ ಎಂಬುದರಲ್ಲಿ ಸ್ವಲ್ಪವೂ ಸಂದೇಹವಿಲ್ಲ; ಶಾಲಾ ಶಿಕ್ಷಣದಿಂದ ಹಿಡಿದು ಉನ್ನತ ಶಿಕ್ಷಣದವರೆಗೆ ವಿದ್ಯಾಭ್ಯಾಸವನ್ನು ಮುಂದುವರೆಸಿಕೊಂಡು ಹೋಗಲು ಮಾಡುವ ಯಾವುದೇ ಪ್ರಯತ್ನದಲ್ಲಿ ಬಡವರು ಎದುರಿಸುವ ಬಹಳಷ್ಟು ಅಡಚಣೆಗಳಿಂದ, ಅದು ಬೇರೆ ರೀತಿ ಇರವು ಸಾಧ್ಯತೆ ಇಲ್ಲವೇ ಇಲ್ಲ. ಫಲಾನುಭವಿಗಳು ಅಸಮಾನ ಪ್ರಮಾಣದಲ್ಲಿ SC ಮತ್ತು ST ಪ್ರವರ್ಗಗಳಲ್ಲಿನ ಉತ್ತಮ ಸ್ಥಿತಿಯುಳ್ಳ ಜಾತಿ ಮತ್ತು ಆದಿವಾಸಿ ಸಮುದಾಯಗಳಿಂದ ಬರುವ ಪ್ರವೃತ್ತಿ ಇದೆ ಎಂಬುದಕ್ಕೂ ಕೂಡ ಅನೇಕ ಪುರಾವೆಗಳಿವೆ. ಹೀಗೆ, ಮೀಸಲಾತಿ ನೀತಿಗಳು SC ಮತ್ತು ST ಸಮುದಾಯಗಳಲ್ಲಿನ ಅಸಮಾನತೆಗಳನ್ನು ಹೆಚ್ಚಿಸುವುದರ ಮೂಲಕ ನೇರ ಪರಿಣಾಮ ಬೀರಿವೆ. ಆದಾಗ್ಯೂ, ಇತರ ಪ್ರವರ್ಗಗಳ ವಿದ್ಯಾರ್ಥಿಗಳಿಗಿಂತ SC ಮತ್ತು ST ವಿದ್ಯಾರ್ಥಿಗಳ ಸರಾಸರಿ ಸಮಾಜೋ-ಆರ್ಥಿಕ ಸ್ಥಾನಮಾನವು ಗಮನಾರ್ಹವಾಗಿ ಕೆಳಗಿದೆ ಎನ್ನುವುದನ್ನೂ ಸಹ ಲಭ್ಯ ಪುರಾವೆಗಳು ಸೂಚಿಸುತ್ತವೆ. ಆದ್ದರಿಂದ ಮೀಸಲಾತಿ ನೀತಿಗಳು ಉಳಿದ ಜನಸಮುದಾಯದಿಂದ ಬರುವಂತ ಹೆಚ್ಚು ಉಳ್ಳವರಲ್ಲದ ವಿಶ್ವವಿದ್ಯಾಲಯದ ಅರ್ಜಿದಾರರಿಗಿಂತ ಉತ್ತಮ ಸ್ಥಿತಿಯಲ್ಲಿರುವ ದಲಿತ ಹಾಗೂ ಆದಿವಾಸಿ ವಿದ್ಯಾರ್ಥಿಗಳಿಗೆ ಪ್ರಯೋಜನವಾಗಿದೆ ಎಂಬ ಸಾಧ್ಯತೆಯು ಬಹಳ ಕಡಮೆ.

SC ಮತ್ತು ST ವಿದ್ಯಾರ್ಥಿಗಳ ಸರಾಸರಿ ಶೈಕ್ಷಣಿಕ ಸಾಧನೆ ಹಾಗೂ ಪದವಿ ಪಡೆಯುವ ಪ್ರಮಾಣವು ಇತರ ವಿದ್ಯಾರ್ಥಿಗಳಿಗಿಂತ ಸುಸ್ಪಷ್ಟವಾಗಿ ಕಳಪೆಮಟ್ಟದ್ದಾಗಿದೆ. ಹೆಚ್ಚಿನ SC, ST ವಿದ್ಯಾರ್ಥಿಗಳ ದುರ್ಬಲ ಶೈಕ್ಷಣಿಕ ಹಿನ್ನೆಲೆಗಳು ಮತ್ತು ಪದವಿಯ ಕೋರ್ಸೊಂದನ್ನು ಮುಗಿಸುವ ತನಕ ಅವರು ಎದುರಿಸುವ ವಿವಿಧ ರೀತಿಯ ಅಡಚಣೆಗಳನ್ನು ಪರಗಣಿಸಿದರೆ ಅದು ಅಷ್ಟೇನೂ ಆಶ್ಚರ್ಯಕರವಲ್ಲ. ಆದಾಗ್ಯೂ, ಭಾರತದ ಪ್ರತಿಷ್ಠಿತ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಪದವಿ ಪಡೆಯುವ ಪ್ರಮಾಣಕ್ಕೆ ಸಂಬಂಧಿಸಿದಂತೆ SC ಮತ್ತು ST ಹಾಗೂ ಇತರ ಪ್ರವರ್ಗಗಳ ವಿದ್ಯಾರ್ಥಿಗಳ ನಡುವಿನ ವ್ಯತ್ಯಯ ಅಷ್ಟೊಂದು ಗಮನಾರ್ಹವಾಗಿಲ್ಲ. ವಿದ್ಯಾರ್ಥಿಗಳ ಪ್ರವೇಶ ಅರ್ಹತೆಗಳಲ್ಲಿನ ಏರಿಕೆ ಮತ್ತು ಸ್ವತಃ ಸಂಸ್ಥೆಗಳೂ ಸಹ ತಮ್ಮ ಕಲಿಕಾ ಪರಿಸರವನ್ನು ಉತ್ತಮಗೊಳಿಸುವ ಮಾರ್ಗಗಳನ್ನು ಕಂಡುಕೊಂಡಿವೆಯಾದುದ್ದರಿಂದ, ಕಾಲ ಕಳೆದಂತೆ ಸಾಪೇಕ್ಷ ವಿಶಿಷ್ಟ ಸಂಸ್ಥೆಗಳಿಂದ SC, ST ವಿದ್ಯಾರ್ಥಿಗಳ ಪದವಿ ಪಡೆಯುವ ಪ್ರಮಾಣವು ಸುಧಾರಿಸುತ್ತಲೇ ಬಂದಿವೆ ಎನ್ನುವುದಕ್ಕೂ ಸಹ ಕೆಲವು ಪುರಾವೆ ಇದೆ.

ಭಾರತದ ಉನ್ನತ ಶಿಕ್ಷಣ ಸಂಸ್ಥೆಗಳನ್ನು ಪ್ರವೇಶಿಸುವ ವಿದ್ಯಾರ್ಥಿ ಸಮೂಹದ ವಿಶ್ವವಿದ್ಯಾಲಯ ಶಿಕ್ಷಣ ನಂತರದ ವೃತ್ತಿಗಳನ್ನು ಗುರುತಿಸಲು ಪ್ರಯತ್ನಿಸಿದಂತಹ ಅಧ್ಯಯನಗಳು ಬಹಳ ಕಡಮೆ ಇವೆ. ಆ ರೀತಿಯದ ಕೆಲವಷ್ಟೇ ಅಧ್ಯಯನಗಳು ಸಾಪೇಕ್ಷ ಪ್ರತಿಷ್ಠಿತ ಸಂಸ್ಥೆಗಳಿಂದ ಪದವಿ ಪಡೆದ SC ಮತ್ತು ST ವಿದ್ಯಾರ್ಥಿಗಳು ಜವಾಬ್ದಾರಿಯುತ ಮತ್ತು ಉತ್ತಮ ಸಂಬಳವಿರುವಂತ ಸ್ಥಾನಗಳನ್ನು ಗಿಟ್ಟಿಸಿಕೊಳ್ಳುತ್ತಾರೆ, ಹಾಗೂ ಸಾಮಾನ್ಯವಾಗಿ ST ಮತ್ತು SC ಪ್ರವರ್ಗಕ್ಕೆ ಸೇರದ ಅವರ ಸಮಾನಸ್ಕಂಧರು ಹೊಂದಿರುವಷ್ಟು ಅಲ್ಲದಿದ್ದರೂ ಅವರ ಪಾಲಕರಿಗಿಂತ ಅತ್ಯಂತ ಉನ್ನತವಾದ ಸಮಾಜೋ-ಆರ್ಥಿಕ ಸ್ಥಾನಮಾನವನ್ನು ಹೊಂದುತ್ತಾರೆ ಎಂಬುದನ್ನು ಸೂಚಿಸುತ್ತವೆ. ಸಾಧನೆಗೆ ಸಂಬಂಧಿಸಿದಂತೆ SC ಮತ್ತು ST ಹಾಗೂ SC ಮತ್ತು ST ಪ್ರವರ್ಗಕ್ಕೆ ಸೇರದ ವಿದ್ಯಾರ್ಥಿಗಳ ನಡುವಿನ ಅಂತರವು ವಿಶ್ವವಿದ್ಯಾಲಯದ ವಿದ್ಯಾಭ್ಯಾಸಗಳಲ್ಲಿನ ಶೈಕ್ಷಣಿಕ ಸಾಧನೆಯ ಸಾಂಪ್ರದಾಯಿಕ-ಮಾಪನದಲ್ಲಿರುವುದಕ್ಕಿಂತ ಗಮನಾರ್ಹವಾಗಿ ವಿಶ್ವವಿದ್ಯಾಲಯ ನಂತರದ ವೃತ್ತಿ ಸಾಧನೆಗಳಲ್ಲಿ ಕಡಮೆ ಇರುವಂತೆ ತೋರುತ್ತದೆ. ಇದು, ಒಂದೋ (1) ವಿಶ್ವವಿದ್ಯಾಲಯದಲ್ಲಿನ ಸಾಧನೆಯ ಸಾಂಪ್ರದಾಯಿಕ ಮಾಪನಗಳು ಈ ವಿದ್ಯಾರ್ಥಿಗಳು ಉನ್ನತ ಶಿಕ್ಷಣದಿಂದ ನಿಜಕ್ಕೂ ಪಡೆಯುತ್ತಿರುವುದಕ್ಕಿಂತ ಕಡಮೆ ಅಂದಾಜು ಮಾಡುತ್ತಿವೆ, ಇಲ್ಲವೇ (2) ವಿಶ್ವವಿದ್ಯಾಲಯದ ವಿದ್ಯಾಭ್ಯಾಸ ನಂತರ SC ಮತ್ತು ST ವಿದ್ಯಾರ್ಥಿಗಳು ಅವರ ಸಮಾನಸ್ಕಂಧರ ಸಮಕ್ಕೆ ಬರುವಲ್ಲಿ ಮತ್ತಷ್ಟು ಪ್ರಗತಿ ಸಾಧಿಸುತ್ತಾರೆ ಎನ್ನುವುದನ್ನು ಸೂಚಿಸುತ್ತದೆ.

ಸಕಾರಾತ್ಮಕ ತಾರತಮ್ಯದ ನೀತಿಗಳನ್ನು ಟೀಕಿಸುವ ಕೆಲವರು ಆದ್ಯತೆಯ ಆಧಾರದ ಮೇಲೆ ಕೋರ್ಸುಗಳಿಗೆ ಪ್ರವೇಶ ದಾಖಲಾತಿ ಪಡೆಯುವಂತ ಫಲಾನುಭವಿಗಳ ಸಾಧನೆಯು ಅದೆಷ್ಟು ಕಳಪೆಯೆಂದರೆ ಅಂತಹ ಆದ್ಯತೆಯನ್ನು ಅವರು ಪಡೆಯದೆ ಇದ್ದಿದ್ದರೆ ನಿಜಕ್ಕೂ ಅವರಿಗೆ ಒಳ್ಳೆಯದೇ ಆಗುತ್ತಿತ್ತೇನೋ ಎಂದು ಸಾಧಿಸುತ್ತಾರೆ. ಮೀಸಲಾತಿ ನೀತಿ ಫಲಾನುಭವಿಗಳ ವೃತ್ತಿ ಸಾಧನೆಗಳನ್ನು ಅಂಥ ನೀತಿಗಳು ಇಲ್ಲದಿದ್ದಲ್ಲಿ ನಿರೀಕ್ಷಿಸಬಹುದಾದ ಸಾಧನೆಗಳ ಪ್ರಮಾಣದೊಂದಿಗೆ ಹೋಲಿಸಿ ನೋಡಲು ಸಾಧ್ಯವಾಗಿಸುವಂತಹ ಯಾವುದೇ ಸೂಕ್ಷ್ಮ ರೀತಿಯ ಅಧ್ಯಯನಗಳನ್ನು ಮಾಡಿದಂತಿಲ್ಲ. ಆದಾಗ್ಯೂ, ಲಭ್ಯವಿರುವ ಸೀಮಿತ ಪುರಾವೆಯು SC ಮತ್ತು ST ವಿದ್ಯಾರ್ಥಿಗಳು ಒಳ್ಳೆಯ ಪ್ರಮಾಣದಲ್ಲಿ ಹೆಚ್ಚು ಪ್ರತಿಷ್ಠಿತ ಉನ್ನತ ಶಿಕ್ಷಣ ಸಂಸ್ಥೆಗಳಿಂದ ಪದಿವಿ ಪಡೆಯುತ್ತಿದ್ದಾರೆಂದು (ಅವರ ಶೈಕ್ಷಣಿಕ ಸಾಧನೆಯು ಅವರ ಸಮಾನಸ್ಕಂಧರಿಗಿಂತ ಕಡಮೆ ಇದ್ದರೂ ಕೂಡ), ಮತ್ತು ಹೆಚ್ಚಿನ ಭಾಗ ಈ ವಿದ್ಯಾರ್ಥಿಗಳು ಲಾಭದಾಯಕ ವೃತ್ತಿಗಳನ್ನು ಗಿಟ್ಟಿಸಿಕೊಳ್ಳುವಲ್ಲಿ ಯಶಸ್ವಿಯಾಗಿದ್ದಾರೆ ಎಂದು ಸೂಚಿಸುತ್ತದೆ. ಈ ಪುರಾವೆ, ಮತ್ತು ಒಂದು ಸಾಧಾರಣ ಶಾಲೆಯಿಂದ ಪಡೆಯುವ ಪದವಿಗಿಂತ ಒಂದು ಪ್ರತಿಷ್ಠಿತ ಸಂಸ್ಥೆಯಿಂದ ಪಡೆಯುವ ಪದವಿಯು ಉತ್ತಮ ವೃತ್ತಿಯೊಂದನ್ನು ಗಿಟ್ಟಿಸಿಕೊಳ್ಳಲು ಹೆಚ್ಚಿನ ಪ್ರಮಾಣದ ಅವಕಾಶಗಳನ್ನು ಒದಗಿಸುವುದನ್ನು ನಿರೀಕ್ಷಿಸಬಹುದು ಎಂಬ ತಳ್ಳಿಹಾಕಲಾಗದ ಸಂಗತಿಯು, ಹೆಚ್ಚು ಪ್ರತಿಷ್ಠಿತ ಶಾಲೆಗಳಲ್ಲಿನ SC ಮತ್ತು ST ವಿದ್ಯಾರ್ಥಿಗಳಿಗೆ ಅಂಥ ಸಂಸ್ಥೆಗಳಲ್ಲಿ ಮೀಸಲಾತಿ ಸೀಟುಗಳಿಗೆ ಲಭ್ಯಾವಕಾಶ ಇಲ್ಲದೆ ಇದಿದ್ದರೇ ಅವರಿಗೆ ಒಳ್ಳೆಯದು ಆಗುತ್ತಿತ್ತು ಎಂಬ ಸಾಧ್ಯತೆಯು ಬಹಳ ಕಡಮೆ ಎಂದು ಸೂಚಿಸುತ್ತವೆ.

ಉನ್ನತ ಶಿಕ್ಷಣದ ಸಂಸ್ಥೆಗಳ ಪ್ರವೇಶ ದಾಖಲಾತಿಯಲ್ಲಿನ ಮೀಸಲಾತಿ ನೀತಿಗಳು SC ಮತ್ತು ST ಸಮುದಾಯಗಳಲ್ಲಿಯೇ 'ಕೆನೆ ಪದರದ' ಗುಂಪುವೊಂದಕ್ಕೆ ಪ್ರಯೋಜನವಾಗುತ್ತದೆ ಎಂಬ ಸಂಗತಿಯು ಮೊದಲ ನೋಟಕ್ಕೆ ಈ ನೀತಿಗಳು ತಮ್ಮ ಉದ್ದೇಶವನ್ನು ಸಾಧಿಸುವಲ್ಲಿ ವಿಫಲವಾಗುತ್ತಿವೆ ಎಂಬುದಕ್ಕೆ ಪುರಾವೆಯಾಗಿದೆ ಎಂದು ಸಾಮಾನ್ಯವಾಗಿ ಟೀಕಾರರು ಒಂದು ತೀರ್ಮಾನಕ್ಕೆ ಬರುತ್ತಾರೆ. ಆದಾಗ್ಯೂ, ಈ ನೀತಿಗಳ ಮುಖ್ಯ ಉದ್ದೇಶವು SC ಮತ್ತು ST ಸಮುದಾಯಗಳಲ್ಲಿ ಶೈಕ್ಷಣಿಕ ಅವಕಾಶಗಳ ಹಂಚಿಕೆಯನ್ನು ಸುಧಾರಿಸುವುದು ಎಂದಾಗಿದ್ದಿದ್ದರೆ ಮಾತ್ರ ಅಂಥ ತೀರ್ಮಾನವು ಸಮರ್ಥನೀಯ ಎಂದು ಹೇಳಬಹುದಾಗಿತ್ತು. ಆದರೆ ಅಂಥ ನೀತಿಗಳನ್ನು ಉತ್ತೇಜಿಸಲು ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಮೀಸಲಾತಿ ನೀತಿಗಳನ್ನು ಒದಗಿಸುವುದು ಸ್ಪಷ್ಟವಾಗಿ ಸರಿಯಾದ ಕ್ರಮವಲ್ಲ; ಬದಲಿಗೆ ಪ್ರಾಥಮಿಕ ಹಾಗೂ ಮಾಧ್ಯಮಿಕ ಶಾಲಾ ಶಿಕ್ಷಣವನ್ನು SC ಮತ್ತು ST ಸಮುದಾಯಗಳಿಗೆ ಇರುವ ಲಭ್ಯಾವಕಾಶವನ್ನು ಹೆಚ್ಚಿಸುವುದು ಮತ್ತು SC ಮತ್ತು ST ಸಮುದಾಯಗಳು ದಾಖಲಾತಿ ಪಡೆಯುವ ಹೆಚ್ಚು ಸಾಧ್ಯತೆಯಿರುವ ಶಾಲೆಗಳ ಗುಣಮಟ್ಟವನ್ನು ಸುಧಾರಿಸುವುದು ಹೆಚ್ಚು ಪರಿಣಾಮಕಾರಿಯಾಗಬಲ್ಲದು.

ಉನ್ನತ ಶಿಕ್ಷಣ ಸಂಸ್ಥೆಗಳ ಪ್ರವೇಶ ದಾಖಲಾತಿಯಲ್ಲಿನ ಸಕಾರಾತ್ಮಕ ತಾರತಮ್ಯತೆಯ ನೀತಿಗಳನ್ನು ತೀರಾ ಅವಕಾಶ ವಂಚಿತ ಮತ್ತು ಹೆಚ್ಚು ಪ್ರಾತಿನಿಧ್ಯವಿರದ ಸಮುದಾಯದವರಿಗೆ ಪ್ರತಿಷ್ಠಿತ ಉದ್ಯೋಗಗಳಿಗೆ ಮತ್ತು ನಿರ್ಧಾರ-ಮಾಡುವ ಸ್ಥಾನಗಳಿಗೆ ಲಭ್ಯಾವಕಾಶವನ್ನು ಹೆಚ್ಚಿಸುವುದರ ಮೂಲಕ ಸಮಾಜದ ಮೇಲ್ಸ್ತರದ ಒಂದುಗೂಡುವಿಕೆಯನ್ನು ಉತ್ತೇಜಿಸುವ ಪ್ರಯತ್ನವನ್ನಾಗಿ ಅರ್ಥಮಾಡಿಕೊಳ್ಳಬೇಕಾಗಿದೆ.[21] [21] ಸಮಾಜದ ಪ್ರತಿಷ್ಠಿತರ ಅಂಥದೊಂದು ಏಕೀಕರಣವು ಈ ಕೆಲಗಿನವುಗಳನ್ನೂ ಒಳಗೊಂಡಂತೆ ವಿವಿಧ ರೀತಿಯ ಪ್ರಯೋಜನಗಳ ಭರವಸೆಯನ್ನು ನೀಡುತ್ತದೆ: ರಾಜಕೀಯ ವ್ಯವಸ್ಥೆಗೆ ಹೆಚ್ಚಿನ ಸಹಮತತೆ, ಅವಕಾಶ ವಂಚಿತ ಸಮುದಾಯಗಳೊಂದಿಗಿನ ಪರಿಚಿತತೆ ಹಾಗೂ ಅವರ ಬಗ್ಗೆ ತಿಳಿವಳಿಕೆಯನ್ನು ಒಳಗೊಳ್ಳುವ ಉದ್ಯೋಗಗಳಲ್ಲಿ ಉತ್ತಮ ಸಾಧನೆ; SC ಮತ್ತು ST ಸಮುದಾಯಗಳ ಸಾಮಾನ್ಯ ಜನರಿಗೆ ಸಂಪನ್ಮೂಲ ಹಾಗೂ ಉದ್ಯೋಗಗಳಿಗೆ ಹೆಚ್ಚು ಸಮಾನವಾದ ಅವಕಾಶ; ಭವಿಷ್ಯದಲ್ಲಿ ತಮಗೆ ಲಭ್ಯವಾಗುವ ಅವಕಾಶಗಳನ್ನು ಹೆಚ್ಚಿಸಿಕೊಳ್ಳಲು ದುಡಿಯುವುದರೆಡೆಗೆ SC ಮತ್ತು ST ಯುವಕರಿಗೆ ಹೆಚ್ಚಿನ ಪ್ರೇರಣೆ. ಈ ದೃಷ್ಟಿಕೋನದಿಂದ, ಉನ್ನತ ಶಿಕ್ಷಣದ ಪ್ರವೇಶ ದಾಖಲಾತಿಗಳಲ್ಲಿ ಮೀಸಲಾತಿ ನೀತಿಗಳ ಯಶಸ್ಸನ್ನು ಅಳೆಯಲು ಹೆಚ್ಚು ಮುಖ್ಯವಾಗುವುದು ಏನೆಂದರೆ ಅದು ಸಾಪೇಕ್ಷ ಪ್ರತಿಷ್ಠಿತ ಸಂಸ್ಥೆಗಳಲ್ಲಿನ ಫಲಾನುಭವಿಗಳು ಅವರ ಪದವಿ ಕೋರ್ಸುಗಳನ್ನು ಪೂರ್ಣಗೊಳಿಸುವಲ್ಲಿ ಯಶಸ್ವಿಯಾಗುತ್ತಾರೆಯೇ ಹಾಗೂ ನಂತರ ಮುಂದುವರೆದು ಲಾಭದಾಯಕ ವೃತ್ತಿಗಳನ್ನು ಗಿಟ್ಟಿಸಿಕೊಳ್ಳುವಲ್ಲಿ ಯಶಸ್ವಿಯಾಗುತ್ತಾರೆಯೇ ಎಂಬುದಾಗಿದೆ. ಈ ಪ್ರಶ್ನೆಗೆ ಸಂಬಂಧಿಸಿದಂತೆ ಲಭ್ಯವಿರುವ ಸೀಮಿತ ಪುರಾವೆಯು ಭಾರತದ ಪ್ರತಿಷ್ಠಿತ ಉನ್ನತ ಸಂಸ್ಥೆಗಳಲ್ಲಿ ಪ್ರವೇಶ ದಾಖಲಾತಿ

[21] ಸಕಾರಾತ್ಮಕ ತಾರತಮ್ಯತೆ ನೀತಿಗಳ ಉದ್ದೇಶ ಕುರಿತಿರುವ ಈ ಅರ್ಥೈಸುವಿಕೆಯು Elizabeth Anderson (2000, 2002) ಅವರಿಂದ ಹೆಚ್ಚು ಮನದಟ್ಟು ಮಾಡುವ ರೀತಿಯಲ್ಲಿ ವ್ಯಕ್ತಪಡಿಸಲಾಗಿದೆ.

ಪಡೆದ ಹೆಚ್ಚಿನ SC ಮತ್ತು ST ವಿದ್ಯಾರ್ಥಿಗಳು ಖಂಡಿತವಾಗಿಯೂ ಯಶಸ್ವಿಯಾಗಿ ಲಾಭದಾಯಕ ವೃತ್ತಿಗಳನ್ನು ಗಿಟ್ಟಿಸಿಕೊಳ್ಳುತ್ತಾರೆ ಎಂದು ಸೂಚಿಸುತ್ತದೆ - ನಿಶ್ಚಯವಾಗಿ ಮೀಸಲಾತಿ ನೀತಿಗಳು ಇಲ್ಲದಿದ್ದಾಗ ಅವರು ಪಡೆಯುವಂತದ್ದಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ .[22]

ಮೀಸಲಾತಿ ನೀತಿಯ ಫಲಾನುಭವಿಗಳ ವಿಶ್ವವಿದ್ಯಾಲಯ-ನಂತರದ ವೃತ್ತಿಗಳ ಕುರಿತಿರುವ ಸತ್ಯ ಸಂಗತಿಗಳ ಪುರಾವೆಯ ಅಭಾವವು ಈ ವಿಷಯವನ್ನು ಕುರಿತು ಇನ್ನೂ ಹೆಚ್ಚಿನ ಸಂಶೋಧನೆ ಸಂಶೋಧನೆ ಮಾಡಬೇಕಾದ ದೊಡ್ಡ ಅಗತ್ಯವಿದೆ ಎಂದು ಸೂಚಿಸುತ್ತದೆ. ಉನ್ನತ ಶಿಕ್ಷಣದಲ್ಲಿನ ಮೀಸಲಾತಿ ನೀತಿಗಳ ದೀರ್ಘಾವಧಿ ಪರಿಣಾಮಗಳನ್ನು ಕುರಿತು ಪಾಲ್ಕೀಕರ್ ಮತ್ತು ಪಟವರ್ಧನ್ (1992) ನಡೆಸಿದಂತಹ ಅದೇ ರೀತಿಯದ ಅನೇಕ ಹೆಚ್ಚು ವ್ಯವಸ್ಥಿತ ಪ್ರಾಯೋಗಿಕ ಅಧ್ಯಯನಗಳ ಅಗತ್ಯವಿದೆ. ಭವಿಷ್ಯದಲ್ಲಿ ಅನೇಕ ಅಂತಹ ಹೆಚ್ಚು ಅಧ್ಯಯನಗಳನ್ನು ಕೈಗೊಳ್ಳಲಾಗುವುದು ಎಂಬುದೇ ನಮ್ಮ ಆಶಯವಾಗಿದೆ.[23]

[22] ಭಾರತದಲ್ಲಿನ ಮೀಸಲಾತಿ ನೀತಿಗಳನ್ನು ಅಧ್ಯಯನ ಮಾಡುತ್ತಿರುವ ಇತರ ವಿದ್ವಾಂಸರು ಈ ತೀರ್ಮಾನವನ್ನು ಬೆಂಬಲಿಸುತ್ತಾರೆ. ಕಾನೂನಿನ ದೃಷ್ಟಿಕೋನದಿಂದ ಭಾರತದ ಮೀಸಲಾತಿ ನೀತಿಗಳನ್ನು ಬಹಳ ಸಮಗ್ರವಾಗಿ ಅಧ್ಯಯನ ಮಾಡಿರುವ ಲೇಖಕ Galanter ಹೀಗೆ ಬರೆಯುತ್ತಾರೆ: "...ಸರಿದೂಗಿಸುವ ತಾರತಮ್ಯತೆಯು (compensatory discrimination) ಒಂದು ಅಪೂರ್ಣ ಹಾಗೂ ದುಬಾರಿ ಎನ್ನಬಹುದಾದ ಯಶಸ್ಸನ್ನು ಸಾಧಿಸಿದೆ. ನೇರವಾಗಿ ಕೆಲವು ಪ್ರಯೋಜನಗಳು ಗ್ರಾಮಗಳಲ್ಲಿನ ಭೂರಹಿತ ಕೂಲಿಕಾರ್ಮಿಕರ ಅಪಾರವಾದ ಸಮೂಹವನ್ನು ತಲುಪಿದೆಯಾದರೂ, ಸರಿದೂಗಿಸುವ ತಾರತಮ್ಯತೆಯು ಈ ಗುಂಪುಗಳಲ್ಲಿ (SC ಮತ್ತು ST) ನಗರ ಕೇಂದ್ರಿತ, ಸುಶಿಕ್ಷಿತ ಮತ್ತು ಹೆಚ್ಚಿನದಾಗಿ ಸರ್ಕಾರಿ ಸೇವೆಗಳಲ್ಲಿ ಇರುವಂತಹ ಒಂದು ಮಧ್ಯಮ ವರ್ಗದ ಬೆಳವಣಿಗೆಯನ್ನು ಹೆಚ್ಚಿಸುವಲ್ಲಿ ಯಶಸ್ವಿಯಾಗಿದೆ ಎನ್ನುವುದನ್ನು ಅಲ್ಲಗಳೆಯಲಾಗುವುದಿಲ್ಲ. ಕೆಲವು ದಶಕಗಳ ಹಿಂದೆ ಕಲ್ಪಿಸಿಕೊಳ್ಳಲೂ ಸಾಧ್ಯವಾಗದಷ್ಟು ಮಟ್ಟಿಗೆ ಸಮಾಜದಲ್ಲಿನ ಪ್ರಮುಖ ಪಾತ್ರಗಳ ಜವಾಬ್ದಾರಿಯನ್ನು ವಹಿಸಲು ಈ ಗುಂಪುಗಳ ಸದಸ್ಯರನ್ನು ಕರೆತರಲಾಗಿದೆ..." [Galanter 1984:551]. Galanter ನಂತರದ, ತೀರ ಇತ್ತೀಚಿನ ಅವರ ಬರಹಗಳಲ್ಲಿ ಸಮಾಜ ವಿಜ್ಞಾನಿಗಳಾದ Mendelsohn ಮತ್ತು Vicziany ಈ ತೀರ್ಮಾನಕ್ಕೆ ಬಂದಿರುತ್ತಾರೆ: "ಖಂಡಿತವಾಗಿಯೂ ಅನೇಕ ಸಾವಿರ ಅಸ್ಪೃಶ್ಯರಿಗೆ ಮಹತ್ವದ ಪ್ರಯೋಜನಗಳನ್ನು ಒದಗಿಸಲಾಗಿವೆ, ಮತ್ತು ಸಾರ್ವಜನಿಕ ಉದ್ಯೋಗ ಮತ್ತು ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಇದ್ದ ಅಕ್ಷಮ್ಯ ತಾರತಮ್ಯತೆಯನ್ನು ನಿವಾರಿಸಲು ಸಾಧ್ಯವಾಗಿದೆ. ಮೇಲಾಗಿ, ಸಾಕಷ್ಟು ದೊಡ್ಡ ಸಂಖ್ಯೆಯಲ್ಲಿ ಕಂಡುಬರುವ ಯಶಸ್ವಿಯಾದ ಮತ್ತು ವೃತ್ತಿಯಲ್ಲಿ ಅನುಭವವನ್ನು ಪಡೆದ ಅಸ್ಪೃಶ್ಯರು ಹೆಚ್ಚು ವಿಸ್ತೃತವಾದ ಅಸ್ಪೃಶ್ಯ ಸಮುದಾಯದ ಮುನ್ನಡೆಗೆ ಅನುವು ಮಾಡಿಕೊಡುವ ವ್ಯಕ್ತಿಗಳಾಗಿದ್ದಾರೆ ಎಂಬುದನ್ನು ಕಡೆಗಣಿಸಲು ಸಾಧ್ಯವಿಲ್ಲ" [Mendelsohn and Vicziany 1998:146].

[23] 2001 ರಲ್ಲಿ ನಾನು IIT-ಮುಂಬೈಯಲ್ಲಿನ ಇನ್ನಿಬ್ಬರು ಸಮಾಜ ವಿಜ್ಞಾನಿಗಳೊಂದಿಗೆ ಸೇರಿ SC, ST ಹಾಗೂ ಇತರ IIT ಪದವೀಧರರ (ಒಂದು ಪ್ರಾತಿನಿಧಿಕ ಮಾದರಿ ಗುಂಪು) ವೃತ್ತಿ ಪಥವನ್ನು ವ್ಯವಸ್ಥಿತ ರೀತಿಯಲ್ಲಿ ಅಧ್ಯಯನ ಮಾಡಲು ಯತ್ನಿಸಿದೆ. ವಿಷಾದನೀಯ ಏನೆಂದರೆ, ಅಂತಿಮವಾಗಿ ನಮ್ಮ ಸಂಶೋಧನಾ ಪ್ರಸ್ತಾವನೆಯು ಸಂಬಂಧಪಟ್ಟ ಅಧಿಕಾರಿಗಳಿಂದ ಅನುಮೋದನೆ ಪಡೆಯಲಿಲ್ಲ ಎಂಬುದು - ಬಹುಶಃ ವಿಷಯವು ರಾಜಕೀಯವಾಗಿ ಸೂಕ್ಷ್ಮ ಸ್ವಭಾವವುಳ್ಳದ್ದು ಎಂಬ ಕಾರಣಕ್ಕೆ ಇದ್ದಿರಬಹುದು.

(ಈ ಲೇಖನದ ಹೆಚ್ಚಿನ ವಿಷಯವನ್ನು ಇತ್ತೀಚೆಗೆ ಪ್ರಕಟವಾದ *Affirmative Action in the United States and India: A Comparative Perspective*, Routledge, London, 2004, ಎಂಬ ನನ್ನ ಪುಸ್ತಕದಿಂದ ಆಯ್ದುಕೊಳ್ಳಲಾಗಿದೆ, ಮುಖ್ಯವಾಗಿ ಅಧ್ಯಾಯ 10 ಮತ್ತು 12ರಿಂದ.)

**ಸಂಪರ್ಕ**: tomw@umich.edu

**References**

Aikara, J (1980): 'Scheduled Castes and Higher Education: A Study of College Students in Mumbai', Dastane, Pune.

Anderson, E (2000): 'From Normative to Empirical Sociology in the Affirmative Action Debate: Bowen and Bok's 'The Shape of the River',' *Journal of Legal Education*, 50, pp 284-305.

– (2002): 'Integration, Affirmative Action and Strict rutiny', *New York University Law Review*, 77, pp 1195-1271.

Chanana, K (1993): 'Accessing Higher Education – The Dilemma of Schooling:Women, Minorities, Scheduled Castes and Scheduled Tribes in Contemporary India' in S Chitnis and P Altbach (eds), *Higher Education Reform in India,* Sage Publications, New Delhi, India.

Chitnis, S (1981): A Long Way to Go: Report on a Survey of Scheduled Caste High School and College Students in Fifteen States of India, Allied, New Delhi.

– (1986): 'Measuring up to Reserved Admissions' in V P Shah and B C Agrawal (eds), *Reservation: Policy, Programmes and Issues*, Rawat Publications, Jaipur.

Galanter, M (1984): *Competing Equalities: Law and the Backward Classes in India*, Oxford University Press, Delhi.

Henriques, J and J J Wankhede (1985): *One Step Forward, Yet Two Steps Behind: A Study of Wastage and Stagnation in Education of SC-ST in Maharashtra,* Report submitted to Ministry of Education, Government of India, New Delhi.

HRD (1997): *Selected Educational Statistics, 1996-97*, Ministry of Human Resources Development, Government of India, New Delhi.

Karlekar, M (1975): 'Higher Education and the Scheduled Castes', *Journal of Higher Education*, 1, pp 178-87.

Kirpal, V (1978): 'Higher Education for the Scheduled Castes and Scheduled Tribes', *Economic and Political Weekly*, Vol 13, pp 165-69.

Kirpal, V and M Gupta (1999): *Equality Through Reservations*, Rawat Publications, Jaipur.

Kirpal, V, N Swamidasan, A Gupta and R K Gupta (1985a): 'Scheduled Caste and Tribe Students in Higher Education: A Study of an IIT', *Economic and Political Weekly*, 20: 1238-48.

– (1985b): 'Wastage among Scheduled Caste and Scheduled Tribe Students', *Journal of Higher Education*, 11: 111-16.

Kumar, K (1997): 'Educational Inequality and Language' in R P Sinha (ed), *Inequality in Indian Education*, Vikas Publishing House, New Delhi.

Mendelsohn, O and M Vicziany (1998): *The Untouchables: Subordination, Poverty and the State in Modern India*, Cambridge University Press, Cambridge, UK.

Parmaji (1985): *Caste Reservations and Performance: Research Findings*, Mamata Publications, Warangal, Andhra Pradesh.

Patwardhan, V and V Palshikar (1992): 'Reserved Seats in Medical Education: a Study', *Journal of Education and Social Change*, 5: 1-117.

Rao, S S (2001): *Equality in Higher Education: Impact of Affirmative Action Policies in India*, unpublished draft paper, Jawaharlal Nehru University, New Delhi.

– (2002): 'Equality in Higher Education: Impact of Affirmative Action Policies in India', in E F Beckham (ed), *Global Collaborations: The Role of Higher Education in Diverse Democracies*, Association of American Colleges and Universities, Washington, DC.

Sacchidananda (1977): *The Harijan Elite*, Thomson Press, New Delhi.

Srinivas, M N (1962): *Caste in Modern India*, Asia Publishing House, Mumbai.

Vakil, A K (1985): *Reservation Policy and Scheduled Castes in India*, Ashish Publishing House, New Delhi.

Velaskar, P R (1986): 'Inequality in Higher Education: A Study of Scheduled Caste Students in Medical Colleges of Bombay', unpublished PhD dissertation, Tata Institute of Social Sciences, Mumbai.

Wankhede, G G (1978): 'Social Determinants of Occupational Mobility: A Case Study of Scheduled Castes in Maharashtra', unpublished MPhil dissertation, Jawaharlal Nehru University, New Delhi.

Weisskopf, Thomas (2001): 'The Consequences of Affirmative Action in US Higher Education: A Review of Recent Empirical Studies', *Economic and Political Weekly*, Vol 36, No 51, December 22, pp 4719-34.